
ಅಂಚೆ ಚೀಟಿ ಸಂಗ್ರಹಣೆ

ಎಂ.ಆರ್. ಪ್ರಭಾಕರ್



85005

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಅಂಚೆ ಚೀಟಿ ಸಂಗ್ರಹಣೆ

ಎಂ.ಆರ್. ಪ್ರಭಾಕರ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

ANCHE CHITI SANGRAHANE
by : **Sri M. R. Prabhakar**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 90 Price : Rs. **40=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಡಾ. ಮಧು ವೆಂಕಾರೆಡ್ಡಿ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಡಾ. ಕಮಲಾ ಹಂಪನಾ

ಸಮ್ಮೇಳನಾಧ್ಯಕ್ಷರು
೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಪ್ರಸ್ತಾವನೆ

ಅಂಚೆಚೀಟಿ ಸಂಗ್ರಹದ ಹವ್ಯಾಸ ಹಲವಾರು ಹವ್ಯಾಸಗಳಲ್ಲಿ ಒಂದು. ಬಿಡುವಿನ ವೇಳೆಯ ಸದ್ವಿನಿಯೋಗಕ್ಕೆ ಅವರವರ ಅಭಿರುಚಿಗೆ ತಕ್ಕಂತೆ ಹವ್ಯಾಸ ರೂಪುಗೊಂಡಿರುತ್ತದೆ. ಅಂಚೆ ಚೀಟಿ ಸಂಗ್ರಹಿಸುವುದು ಇಂದು ಜಗತ್ತಿನಾದ್ಯಂತ ಬಹು ಜನಪ್ರಿಯ ಹವ್ಯಾಸ. ಬಡವ - ಬಲ್ಲಿದರೆಂಬ ಭೇದವಿಲ್ಲದೆ ವಿಶ್ವದಾದ್ಯಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹರಡಿರುವ ಹವ್ಯಾಸವೆಂದರೆ ಅಂಚೆ ಚೀಟಿ ಸಂಗ್ರಹಣೆ.

''ಹವ್ಯಾಸಗಳ ರಾಜ - ರಾಜರ ಹವ್ಯಾಸವೆಂಬ'' ಬಿರುದು ಇದಕ್ಕಿದ್ದರೂ ಸಾಮಾನ್ಯ ಶಾಲಾಬಾಲಕರಿಂದ ಹಿಡಿದು ಶ್ರೀಮಂತರು, ರಾಜಕಾರಣಿಗಳೂ, ಬುದ್ಧಿಜೀವಿಗಳು ಮೊದಲಾದ ಸಮಾಜದ ಎಲ್ಲಾ ವರ್ಗಗಳ ಜನರೂ ಈ ಹವ್ಯಾಸ ಹೊಂದಿದ್ದಾರೆ.

ಪ್ರತಿವರ್ಷ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೋಟ್ಯಾಂತರ ರೂಪಾಯಿಗಳ ಅಂಚೆಚೀಟಿಗಳ ಕೊಡು-ಕೊಳ್ಳುವ ವ್ಯವಹಾರ ನಡೆಯುತ್ತದೆ. ಈ ಹವ್ಯಾಸಕ್ಕೆ ಮೀಸಲಾದ ನೂರಾರು ನಿಯತಕಾಲಿಕಗಳು ಜಗತ್ತಿನಾದ್ಯಂತ ಪ್ರಕಟವಾಗುತ್ತಿವೆ. ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ.

ಜೀವನ ಜಂಜಾಟದಲ್ಲಿ ಅನೇಕ ಗೊಂದಲಗಳಲ್ಲಿ ಸಿಕ್ಕಿ ಮಾನಸಿಕ ಒತ್ತಡ, ಬಳಲಿಕೆ, ಕಿರಿಕಿರಿಗಳಿಂದ ನರಳುತ್ತಿರುವ ಆಧುನಿಕ ನಾಗರಿಕರಿಗೆ ಅಂಚೆ ಚೀಟಿ ಸಂಗ್ರಹದ ಹವ್ಯಾಸ ನವಚೇತನ ನೀಡುವ ದಿವ್ಯ ಔಷಧವಾಗಿರುವುದು.

ಅಂಚೆ ಚೀಟಿ ಸಂಗ್ರಹಣೆ ಮತ್ತು ಪ್ರದರ್ಶನಗಳಿಂದ ಸುಜ್ಞಾನವು ಹರಡಿ, ಸಮಾನತೆಯನ್ನು ಸ್ಥಾಪಿಸಬಹುದು. ಇದು ಕುತೂಹಲಕಾರಿಯೂ, ಅಧ್ಯಯನ ಯೋಗ್ಯವೂ ಹೌದು. ಅಂಚೆ ಚೀಟಿಗಳಿಂದ ನಮ್ಮ ದೇಶದ ಮತ್ತು ಇತರ ರಾಷ್ಟ್ರಗಳ ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ, ಐತಿಹಾಸಿಕ, ಚಾರಿತ್ರಿಕ ವಿಷಯಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಪ್ರತಿ ಅಂಚೆಚೀಟಿಯ ಹಿಂದೆ ಅತ್ಯಂತ ಪ್ರಿಯವಾದ ಮತ್ತು ಭವ್ಯವಾದ ಇತಿಹಾಸವಿದೆ ಎನ್ನುವುದು ಸೂಕ್ಷ್ಮವಾಗಿ ವೀಕ್ಷಿಸಿದಾಗ ನಮ್ಮ ಅರಿವಿಗೆ ಬರುತ್ತದೆ. ಅಂಚೆಚೀಟಿಗಳು ಕಾಲಕಾಲಕ್ಕೆ ದೇಶವಿದೇಶಗಳ ನಡುವೆ ಸ್ನೇಹ ಸಹಕಾರ ಸದ್ಭಾವನೆಗಳ ಸಂದೇಶವನ್ನು ಹರಡುತ್ತದೆ.

ಕೋಟಿ ಕೋಟಿ ಭಾರತೀಯರಾದ ನಮಗೆ ಸ್ವತಂತ್ರಜೀವನವನ್ನು ನಿರ್ಮಿಸಿಕೊಟ್ಟ ಮಹಾನುಭಾವರುಗಳ ಜೀವನ ಚರಿತ್ರೆ, ಅವರ ಸ್ವಯಂ ಪ್ರೇರಣೆ, ಕಾರ್ಯೋತ್ಸಾಹಗಳನ್ನು ಪ್ರೇರೇಪಿಸುವ ಮಾರ್ಗದರ್ಶನ ಅಂಚೆಚೀಟಿಗಳಲ್ಲಿ ಸುಪ್ತವಾಗಿದೆ.

ಯಂ. ಆರ್. ಪ್ರಭಾಕರ

ಪ್ರಸ್ತಾವನೆ

ಅಂಚೆಚೀಟಿ ಸಂಗ್ರಹದ ಹವ್ಯಾಸ ಹಲವಾರು ಹವ್ಯಾಸಗಳಲ್ಲಿ ಒಂದು. ಬಿಡುವಿನ ವೇಳೆಯ ಸದ್ವಿನಿಯೋಗಕ್ಕೆ ಅವರವರ ಅಭಿರುಚಿಗೆ ತಕ್ಕಂತೆ ಹವ್ಯಾಸ ರೂಪುಗೊಂಡಿರುತ್ತದೆ. ಅಂಚೆ ಚೀಟಿ ಸಂಗ್ರಹಿಸುವುದು ಇಂದು ಜಗತ್ತಿನಾದ್ಯಂತ ಬಹು ಜನಪ್ರಿಯ ಹವ್ಯಾಸ. ಬಡವ - ಬಲ್ಲಿದರೆಂಬ ಭೇದವಿಲ್ಲದೆ ವಿಶ್ವದಾದ್ಯಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹರಡಿರುವ ಹವ್ಯಾಸವೆಂದರೆ ಅಂಚೆ ಚೀಟಿ ಸಂಗ್ರಹಣೆ.

''ಹವ್ಯಾಸಗಳ ರಾಜ - ರಾಜರ ಹವ್ಯಾಸವೆಂಬ'' ಬಿರುದು ಇದಕ್ಕಿದ್ದರೂ ಸಾಮಾನ್ಯ ಶಾಲಾಬಾಲಕರಿಂದ ಹಿಡಿದು ಶ್ರೀಮಂತರು, ರಾಜಕಾರಣಿಗಳೂ, ಬುದ್ಧಿಜೀವಿಗಳು ಮೊದಲಾದ ಸಮಾಜದ ಎಲ್ಲಾ ವರ್ಗಗಳ ಜನರೂ ಈ ಹವ್ಯಾಸ ಹೊಂದಿದ್ದಾರೆ.

ಪ್ರತಿವರ್ಷ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೋಟ್ಯಾಂತರ ರೂಪಾಯಿಗಳ ಅಂಚೆಚೀಟಿಗಳ ಕೊಡು-ಕೊಳ್ಳುವ ವ್ಯವಹಾರ ನಡೆಯುತ್ತದೆ. ಈ ಹವ್ಯಾಸಕ್ಕೆ ಮೀಸಲಾದ ನೂರಾರು ನಿಯತಕಾಲಿಕಗಳು ಜಗತ್ತಿನಾದ್ಯಂತ ಪ್ರಕಟವಾಗುತ್ತಿವೆ. ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ.

ಜೀವನ ಜಂಜಾಟದಲ್ಲಿ ಅನೇಕ ಗೊಂದಲಗಳಲ್ಲಿ ಸಿಕ್ಕಿ ಮಾನಸಿಕ ಒತ್ತಡ, ಬಳಲಿಕೆ, ಕಿರಿಕಿರಿಗಳಿಂದ ನರಳುತ್ತಿರುವ ಆಧುನಿಕ ನಾಗರಿಕರಿಗೆ ಅಂಚೆ ಚೀಟಿ ಸಂಗ್ರಹದ ಹವ್ಯಾಸ ನವಚೇತನ ನೀಡುವ ದಿವ್ಯ ಔಷಧವಾಗಿರುವುದು.

ಅಂಚೆ ಚೀಟಿ ಸಂಗ್ರಹಣೆ ಮತ್ತು ಪ್ರದರ್ಶನಗಳಿಂದ ಸುಜ್ಞಾನವು ಹರಡಿ, ಸಮಾನತೆಯನ್ನು ಸ್ಥಾಪಿಸಬಹುದು. ಇದು ಕುತೂಹಲಕಾರಿಯೂ, ಅಧ್ಯಯನ ಯೋಗ್ಯವೂ ಹೌದು. ಅಂಚೆ ಚೀಟಿಗಳಿಂದ ನಮ್ಮ ದೇಶದ ಮತ್ತು ಇತರ ರಾಷ್ಟ್ರಗಳ ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ವೈಜ್ಞಾನಿಕ, ಐತಿಹಾಸಿಕ, ಚಾರಿತ್ರಿಕ ವಿಷಯಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಪ್ರತಿ ಅಂಚೆಚೀಟಿಯ ಹಿಂದೆ ಅತ್ಯಂತ ಪ್ರಿಯವಾದ ಮತ್ತು ಭವ್ಯವಾದ ಇತಿಹಾಸವಿದೆ ಎನ್ನುವುದು ಸೂಕ್ಷ್ಮವಾಗಿ ವೀಕ್ಷಿಸಿದಾಗ ನಮ್ಮ ಅರಿವಿಗೆ ಬರುತ್ತದೆ. ಅಂಚೆಚೀಟಿಗಳು ಕಾಲಕಾಲಕ್ಕೆ ದೇಶವಿದೇಶಗಳ ನಡುವೆ ಸ್ನೇಹ ಸಹಕಾರ ಸದ್ಭಾವನೆಗಳ ಸಂದೇಶವನ್ನು ಹರಡುತ್ತದೆ.

ಕೋಟಿ ಕೋಟಿ ಭಾರತೀಯರಾದ ನಮಗೆ ಸ್ವತಂತ್ರಜೀವನವನ್ನು ನಿರ್ಮಿಸಿಕೊಟ್ಟ ಮಹಾನುಭಾವರುಗಳ ಜೀವನ ಚರಿತ್ರೆ, ಅವರ ಸ್ವಯಂ ಪ್ರೇರಣೆ, ಕಾರ್ಯೋತ್ಸಾಹಗಳನ್ನು ಪ್ರೇರೇಪಿಸುವ ಮಾರ್ಗದರ್ಶನ ಅಂಚೆಚೀಟಿಗಳಲ್ಲಿ ಸುಪ್ತವಾಗಿದೆ.

ಯಂ. ಆರ್. ಪ್ರಭಾಕರ

ವಿಷಯಸೂಚಿ

ಮನರಂಜನೆ, ಮನೋಲ್ಲಾಸ ಮತ್ತು ಶೈಕ್ಷಣಿಕ ಮಹತ್ವ

ವಿಶ್ವಜೀವನದ ಅವಿಭಾಜ್ಯ ಅಂಗವಾಗಿರುವ ಅಂಚೆ ಸೇವೆಯು ಸರ್ವವ್ಯಾಪಿಯಾಗಿ ವಿವಿಧ ರೂಪಗಳಲ್ಲಿ ಆವರಿಸಿರುವುದು - ವೇದ್ಯವಾಗಿದೆ. ಪ್ರಪ್ರಥಮವಾಗಿ ೧೮೪೦ರ ಮೇ ತಿಂಗಳು ಇಂಗ್ಲೆಂಡ್ ದೇಶದ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾಗಿದ್ದ ಮಾನ್ಯ ರೋಲ್ಯಾಂಡ್ ಹಿಲ್‌ರವರ ಕಾರ್ಯಕುಶಲತೆ ದೂರದೃಷ್ಟಿ ಹಾಗೂ ಸೇವಾಮನೋಭಾವಗಳಿಂದ ಅಂಚೆಚೀಟಿಗಳ ಬಳಕೆಯ ಸಂಪ್ರದಾಯ ಅಭ್ಯುದಯವಾಯಿತು. ಈ ಪದ್ಧತಿಯಿಂದ ಅನೇಕ ತೊಡಕುಗಳು ನಿವಾರಣೆಯಾಗಿ ಇಲಾಖೆಯಲ್ಲಿ ಆಗುತ್ತಿದ್ದ ಅಪಾರ ನಷ್ಟ ನಿಂತು, ಯಶಸ್ಸು ಸಾಧಿಸುವಂತಾಯಿತು. ಜಗತ್ತಿನ ಇತರ ರಾಷ್ಟ್ರಗಳೂ ಇದೇ ಮಾರ್ಗದರ್ಶನವನ್ನು ಅಳವಡಿಸಿಕೊಂಡು ಪೂರ್ಣ ಪ್ರಯೋಜನ ಪಡೆದು ಸಾರ್ಥಕತೆಯನ್ನು ತೋರಿದವು.

ಅನೇಕ ವರ್ಷಗಳ ದೀರ್ಘ ಅವಧಿಯಲ್ಲಿ ಅದೆಷ್ಟೋ ಮಹನೀಯರುಗಳ ತ್ಯಾಗ ಮತ್ತು ಸೇವೆಗಳಿಂದ ತಮಗೆ ಗೊತ್ತುಪಡಿಸಿದ ಮಾರ್ಗಗಳಲ್ಲಿ ತ್ವರಿತ ಗತಿಯಿಂದ ಕ್ರಮಿಸುವ ಈ ಕರ್ತವ್ಯ ನಿರತರಿಗೆ ಮಳೆ, ಬಿಸಿಲು, ಚಳಿ, ಗಾಳಿ, ಗಾಢಾಂಧಕಾರ ಯಾವುವು ಅಡ್ಡಬರಲಾರವು ಎಂದು ಪ್ರಶಂಸೆಗೊಳಗಾಗಿರುವ ಅಂಚೇ ವ್ಯವಸ್ಥೆಯು ಜನಸಾಮಾನ್ಯರ ದಿನನಿತ್ಯದ ಸಹಕಾರಿಯಾಗಿ ಪರಿಣಮಿಸಿದೆ ಹಾಗೂ ಅನುದಿನದ ಕಾರ್ಯದಲ್ಲಿ ಹಾಸುಹೊಕ್ಕಾಗಿ ಬೆರತು ಹೋಗಿದೆ. ಈ ಆಧುನಿಕ ನಾಗರಿಕತೆಯ ಯುಗದಲ್ಲಿ, ಸಂಪರ್ಕ ಸಾಧನಗಳಾದ ವಿಮಾನಗಳು, ರೈಲುಗಳು, ವಾಹನಗಳೂ ಪತ್ರಗಳನ್ನು ಅವುಗಳ ನಿರ್ದೇಶಿತ ಸ್ಥಳಗಳಿಗೆ ತ್ವರಿತವಾಗಿ ಮುಟ್ಟಿಸುವಲ್ಲಿ ಮಹತ್ತರ ಪಾತ್ರವನ್ನು ಈ ಇಲಾಖೆಯು ನಿರ್ವಹಿಸುತ್ತದೆ.

ಅಂಚೆಚೀಟಿಗಳನ್ನು ಸಂಗ್ರಹಿಸುವ ಆಸಕ್ತಿ ಸುಮಾರು ೧೫೦ ವರ್ಷಗಳಿಂದಲೂ ಬೆಳೆದು ಬಂದಿರುವುದು ತಿಳಿದು ಬರುತ್ತದೆ. ಪ್ರಾರಂಭದಲ್ಲಿ ಅವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಲಾಗುತ್ತಿತ್ತು. ಕಾಲಾಂತರದಲ್ಲಿ ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಭೌಗೋಳಿಕ ಹಿನ್ನೆಲೆ, ಕಾಲಾನುಕ್ರಮ ಅಥವಾ ವಿಷಯಾಧಾರಿತವಾಗಿ ವಿಂಗಡಿಸಿ, ಜೋಡಿಸಿ ಪ್ರದರ್ಶಿಸುವ ಒಂದು ಲಲಿತಕಲೆಯಾಗಿ ಬೆಳೆದು ಬಂದಿದೆ.

ಅಂಚೆಚೀಟಿ ಸಂಗ್ರಹಣೆಯು ಯೋಗ್ಯ ಅಧ್ಯಯನ ವಿಷಯವೂ ಸಹ. ಸುವ್ಯವಸ್ಥಿತವಾಗಿ ಜೋಡಿಸಿ ಪ್ರದಶಿಸುವುದೂ ಹಾಗೂ ವೀಕ್ಷಿಸಿ, ಆನಂದಿಸಿ,

ಆಸ್ವಾದಿಸುವುದು ಕುತೂಹಲಕಾರಿಯಾದ ವಿಷಯವಾಗಿದೆ. ಅಂಚೆ ಮತ್ತು ತಂತಿ ಇಲಾಖೆಯು ಅಂಚೆಚೀಟಿ ಸಂಗ್ರಹಕಾರರ ಸಲುವಾಗಿ ಮತ್ತು ಅಭಿವೃದ್ಧಿಗಾಗಿ ಒಂದು ಪ್ರತ್ಯೇಕ ವಿಭಾಗವನ್ನೇ ನೇಮಿಸಿ ಮುಂದುವರೆಸುತ್ತಿರುವುದು ಅಂಚೆಚೀಟಿಗಳ ಪ್ರಾಮುಖ್ಯತೆಯನ್ನು ಬೆಳಗುತ್ತದೆ.

ಜನಜೀವನದ ದಿನನಿತ್ಯದ ಆಗುಹೋಗುಗಳನ್ನು ನಿರೂಪಿಸುವ ವಿವಿಧ ಅಂಶಗಳನ್ನು ಒಳಗೊಂಡ ಅನೇಕ ಅಂಚೆಚೀಟಿಗಳನ್ನು ವಿಶ್ವದಾದ್ಯಂತ ಹೊರಡಿಸಿರುತ್ತಾರೆ. ಸಾಮಾಜಿಕ, ಶೈಕ್ಷಣಿಕ, ಐತಿಹಾಸಿಕ, ಧಾರ್ಮಿಕ, ವೈಜ್ಞಾನಿಕ ವಿಷಯಗಳೂ, ಧೈರ್ಯ ಸಾಹಸಗಳನ್ನು ಪ್ರೇರೇಪಿಸುವ ವಿಷಯಗಳಿಗೆ ಸಂಬಂಧಿಸಿದ ಮತ್ತು ವಿಶೇಷವಾಗಿ ಸಮಾಜಕ್ಕೆ ಸೇವೆ ಸಲ್ಲಿಸಿದ ರಾಷ್ಟ್ರ ನಾಯಕರೂ, ಬುದ್ಧಿಜೀವಿಗಳೂ, ಜ್ಞಾನಿಗಳು, ವಿಜ್ಞಾನಿಗಳು, ತತ್ವಜ್ಞಾನಿಗಳು, ಕವಿಗಳು, ಕಲಾವಿದರು, ತ್ಯಾಗ-ಬಲಿದಾನಗಳಿಗೆ ಹೆಸರಾದ ದೇಶಭಕ್ತರು, ಕ್ರಾಂತಿ ಪುರುಷರುಗಳ ಅಂಚೆಚೀಟಿಗಳನ್ನು ಆಕರ್ಷಣೀಯವಾಗಿ ಮತ್ತು ವರ್ಣರಂಜಿತವಾಗಿ ಬಿಡುಗಡೆ ಮಾಡುತ್ತಾರೆ.

ಅಂಚೆಚೀಟಿಗಳು ಹೊರಹೊಮ್ಮುವ ಹತ್ತು ಹಲವಾರು ವಿಷಯಗಳಾದ ವಿನ್ಯಾಸ, ವರ್ಣರಂಜನೆ, ಇತಿಹಾಸ ಅಮೂಲ್ಯತೆ, ಕೌಶಲ್ಯ, ಬಿಡುಗಡೆಯ ಸಂದರ್ಭಗಳಿಂದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜೀವನದ ಎಲ್ಲಾ ಅಂಶಗಳನ್ನು ನಿರೂಪಿಸುವ ಇನ್ನೊಂದು ಹವ್ಯಾಸಕ್ಕಷ್ಟೇ ಸೀಮಿತಗೊಳ್ಳದೆ ತನ್ನ ಪರಿಮಿತಿಯನ್ನು ಗಂಭೀರವಾದ ಅಧ್ಯಯನದಲ್ಲಿ ತೊಡಗಿಸಿ, ಉತ್ಸಾಹವನ್ನು ಮೂಡಿಸಿ, ವಿವಿಧ ವಿಷಯಗಳಾದ ನೈಸರ್ಗಿಕ, ಐತಿಹಾಸಿಕ, ಭೌಗೋಳಿಕ ಅಧ್ಯಯನಗಳಲ್ಲಿ ಆಸಕ್ತಿಯನ್ನು ಕೆರಳಿಸುತ್ತದೆ. ಈ ಹವ್ಯಾಸ ಹಬ್ಬಿದಂತೆಲ್ಲ ಸಂಸ್ಕೃತಿ, ಕಲೆ, ಕೈಗಾರಿಕೆ, ಪ್ರಕೃತಿ ಸೌಂದರ್ಯ, ಪರಿಸರ ಸಂರಕ್ಷಣೆ ಮುಂತಾದ ವಿಷಯಗಳನ್ನು ವಿಶ್ವದಾದ್ಯಂತ ಸರಳವಾಗಿ, ಸುಲಭವಾಗಿ ತಿಳಿಸಿ, ತಿಳಿಯುವ ಮಾಧ್ಯಮವಾಗಿ ಜನಪ್ರಿಯಗೊಳ್ಳುತ್ತಿದೆ. ವಿಶ್ವದ ಎಲ್ಲಾ ರಾಷ್ಟ್ರಗಳು ಇಲ್ಲಿಯವರೆಗೂ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ವಿವಿಧ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿವೆ. ಪ್ರತಿವರ್ಷ ಜಗತ್ತಿನಾದ್ಯಂತ ೬ ರಿಂದ ೭ ಸಾವಿರ ಅಂಚೆಚೀಟಿಗಳು ಬಿಡುಗಡೆ ಮಾಡುತ್ತಿರುತ್ತಾರೆ.

ಮನಮೋಹಕ ಹವ್ಯಾಸವಾಗಿ ರೂಪುಗೊಂಡಿರುವ ಅಂಚೆಚೀಟಿ ಸಂಗ್ರಹಣೆಯು ಮಕ್ಕಳು, ಯುವಕರು, ವೃದ್ಧರು ಎನ್ನದೆ ಎಲ್ಲರಿಂದಲೂ ಪುರಸ್ಕಾರ ಗೊಂಡು ವಿಸ್ತಾರವಾಗಿ ಹರಡಿಕೊಂಡಿದೆ. ಬಿಡುವಿನ ವೇಳೆಯ ಸದ್ವಿನಿಯೋಗಕ್ಕೆ ವ್ಯಕ್ತಿಯೊಬ್ಬನ ವೈಯಕ್ತಿಕ ಅಭಿರುಚಿ, ಶಿಕ್ಷಣ ಮತ್ತು ಸಂಸ್ಕೃತಿ ಸಂಸ್ಕಾರಗಳಿಗೆ ತಕ್ಕಂತೆ ಆತನ ಹವ್ಯಾಸ ರೂಪುಗೊಂಡಿರುತ್ತದೆ. ಬಡವ ಬಲ್ಲಿದರೆಂಬ ಭೇದವಿಲ್ಲದೆ

''ಹವ್ಯಾಸಗಳ ರಾಜ - ರಾಜರ ಹವ್ಯಾಸ'' ಎಂಬ ಬಿರುದು ಇದಕ್ಕಿದ್ದರೂ ಸಾಮಾನ್ಯ ಬಾಲಕರಿಂದ ಹಿಡಿದು ರಾಜ, ಮಹಾರಾಜರು, ಶ್ರೀಮಂತರು, ರಾಜಕಾರಣಿಗಳು, ಬುದ್ಧಿಜೀವಿಗಳು ಮೊದಲಾದ ಸಮಾಜದ ಎಲ್ಲಾ ವರ್ಗಗಳ ಜನರೂ ಈ ಹವ್ಯಾಸವನ್ನು ಹೊಂದಿದ್ದಾರೆ. ಅತ್ಯಂತ ದುರ್ಲಭ ಅಂಚೆಚೀಟಿಗಾಗಿ ಲಕ್ಷಾಂತರ ರೂಪಾಯಿ ಧನ ಸುರಿಯುವ ಸಂಗ್ರಹಕಾರರಿದ್ದಾರೆ. ಅಮೂಲ್ಯ ಅಂಚೆಚೀಟಿಗಳ ಒಡೆಯರು ಕೋಟ್ಯಾಂತರ ರೂಪಾಯಿಗಳ ವಿಮೆ ಮಾಡಿಸುತ್ತಾರೆ. ವೈಜ್ಞಾನಿಕ ತಿರುವನ್ನು ಪಡೆದಿರುವ ಈ ಹವ್ಯಾಸ ಕಲಾತ್ಮಕ ಪ್ರಭಾವವನ್ನು ಗಂಭೀರವಾಗಿ ಸಮಾಜದ ಮೇಲೆ ಬೀರುತ್ತದೆ. ಈ ಹವ್ಯಾಸಕ್ಕೆ ಮೀಸಲಾದ ಮಾಹಿತಿ ನೀಡುವ ಹಲವಾರು ನಿಯತಕಾಲಿಕಗಳು, ಕೈಪಿಡಿಗಳು ಪ್ರಕಟವಾಗಿವೆ. ದೇಶ ವಿದೇಶಗಳಲ್ಲಿ ಪ್ರಕಟವಾಗುವ ಅಂಚೆಚೀಟಿಗಳನ್ನು ಆಸ್ಥೆಯಿಂದ ಕೊಳ್ಳುವುದರಿಂದ ಎಲ್ಲಾ ದೇಶಗಳಿಗೂ ಅಂಚೆಚೀಟಿಗಳಿಂದ ವಿದೇಶಿ ವಿನಿಮಯ ದೊರೆಯುತ್ತದೆ.

ಆರಂಭ ದೆಸೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸುವುದು ಅಸಾಧ್ಯ. ಅನುಭವಿ ಸಂಗ್ರಹಕಾರರಿಂದ ಮಾರ್ಗದರ್ಶನ ಪಡೆದು ಸಂದರ್ಭೋಚಿತವಾಗಿ ತನ್ನಲ್ಲಿ ಮೂಡುವ ಸಂಶಯ - ಸಂದೇಹಗಳನ್ನು ಚರ್ಚಿಸಿ ಪರಿಹರಿಸಿಕೊಳ್ಳುವುದು, ಪ್ರದರ್ಶನಗಳಲ್ಲಿ ಪ್ರತ್ಯೇಕ ಗಮನವಿರಿಸಿ ವೀಕ್ಷಿಸುವುದು, ಸಭೆ ಸಮಾರಂಭಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ಮಾರ್ಗದರ್ಶನ ಪಡೆದು ಮುಂದುವರಿಸಿಕೊಂಡು ಹೋಗಬೇಕು. ಅಂಚೆಚೀಟಿ ಸಂಗ್ರಹಣೆಯು ಎಷ್ಟು ಉಪಯುಕ್ತವೋ ಅಷ್ಟೇ ಉತ್ತೇಜಕವೂ ಹೌದು. ಕೆಲವು ವೇಳೆ ಅನಿರೀಕ್ಷಿತ ಲಾಭದಾಯಕವೂ ಆಗಬಹುದು. ಎಲ್ಲಕ್ಕಿಂತ ಮಿಗಿಲಾಗಿ ಇತರೆ ದೇಶಗಳ ಬಗ್ಗೆ ಅಪಾರ ತಿಳಿವು ನೀಡುತ್ತವೆ. ಅಂಚೆಚೀಟಿ ಪ್ರದರ್ಶನಗಳಲ್ಲಿ ಸಂಗ್ರಹಕಾರರು ತಮ್ಮ ತಮ್ಮ ಸಂಗ್ರಹಗಳನ್ನು ಇತರರಿಗೆ ನೋಡಿಸುವುದಕ್ಕೂ ಇತರರ ಸಂಗ್ರಹಗಳನ್ನು ನೋಡುವುದಕ್ಕೂ ಅನುಕೂಲ ವಾಗಿರುತ್ತದೆ. ವಿವಿಧ ತರಗತಿಗಳಾಗಿ ವಿಭಜಿಸಿ ವೈವಿಧ್ಯಮಯವಾಗಿ ಸಂಕ್ಷಿಪ್ತ ಮತ್ತು ಸೂಕ್ಷ್ಮ ಟಿಪ್ಪಣಿಗಳೊಂದಿಗೆ ಹೊಂದಿಸಿರುವ ಅಂಚೆಚೀಟಿಗಳಿಂದ ನೋಡುವವರಲ್ಲಿ ಆಸಕ್ತಿ ಮೂಡುತ್ತದೆ. ಉತ್ತಮ ಸಂಗ್ರಹಗಳಿಗೆ ಬಹುಮಾನ, ಪುರಸ್ಕಾರ, ಪ್ರೋತ್ಸಾಹ ಮನ್ನಣೆಗಳು ದೊರೆಯುತ್ತವೆ. ಅಷ್ಟೇ ಅಲ್ಲದೆ ಹೊಸಬರಿಗೆ ಮಾರ್ಗದರ್ಶನದ ಸುರಿಮಳೆಯ ಪ್ರವಾಹ ಈ ಪ್ರದರ್ಶನಗಳಲ್ಲಿ ಹರಿಯುತ್ತದೆ. ಭಾವಿ ಸಂಗ್ರಹಕಾರರಲ್ಲಿ ಇಂತಹ ಸನ್ನಿವೇಶಗಳಿಂದ ಆದರ್ಶ, ಆತ್ಮವಿಶ್ವಾಸ ಹಾಗೂ ಆಸಕ್ತಿಗಳು ಉಂಟಾಗಿ ಸಾಮಾಜಿಕ ಜಾಗೃತಿ ಉಂಟು ಮಾಡಿದಂತಾಗುತ್ತದೆ.

ಅಂಚೆಚೀಟಿ ಸಂಗ್ರಹಣೆಯನ್ನು ಕೆಲವರು ಇದೊಂದು ಅತಿ ಪ್ರಯಾಸದ, ಪರಿಶ್ರಮದ, ದುಂದುವೆಚ್ಚದ, ನಮ್ಮ ಮಟ್ಟಕ್ಕೆ ಮೀರಿದ, ನಮಗೆ ಎಟುಕದ, ಅಥವಾ

ಸಿಲುಕದ ವಿಷಯವೆಂದು ವಂಚಿತರಾಗಿ ನಿರ್ಲಕ್ಷ್ಯದಿಂದ ಕೈಬಿಟ್ಟಿರುತ್ತಾರೆ. ಆದರೆ ಇದೊಂದು ಸುಲಭವಾದ, ಸರಳವಾದ ವಿಶಾಲ ವ್ಯಾಪ್ತಿಯುಳ್ಳದ್ದೆಂದು ತಿಳಿಯಲು ಸತತ ಪ್ರಯತ್ನ ಪರಿಶ್ರಮಗಳಿಂದ ಸಾಧ್ಯವಾಗುವುದು ಎಂದು ಅನುಭವದಿಂದ ತಿಳಿದು ಬಂದಿದೆ. ಪತ್ರ ವ್ಯವಹಾರ ನಡೆಸುವ ಪ್ರತಿಯೊಬ್ಬರು ಅಂಚೆಚೀಟಿಗಳ ಸಂಪರ್ಕ ಹೊಂದುವುದು ಈ ಹವ್ಯಾಸ ಜನಪ್ರಿಯವಾಗಲು ಕಾರಣ.

ಜೀವನ ಜಂಜಾಟದಲ್ಲಿ ಅನೇಕ ಗೊಂದಲಗಳಲ್ಲಿ ಸಿಲುಕಿ ಮಾನಸಿಕ ಒತ್ತಡ, ಬಳಲಿಕೆ, ಬೇಸರ, ಕಿರಿಕಿರಿಗಳಿಂದ ನರಳುತ್ತಿರುವ ಭಾವೋದ್ವೇಗ ಪೀಡಿತ ಆಧುನಿಕ ನವನಾಗರಿಕರಿಗೆ ಅಂಚೆಚೀಟಿ ಸಂಗ್ರಹದ ಹವ್ಯಾಸ ನವಚೇತನ ನೀಡುವ ದಿವ್ಯೌಷಧವಾಗಬಲ್ಲದೆಂದು ಮನಃಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಸಾಮಾನ್ಯವಾಗಿ ಎಲ್ಲರೂ ತಮ್ಮ ಜೀವನದಲ್ಲಿ ಒಂದಲ್ಲ ಒಂದು ಸಲ ಈ ಹವ್ಯಾಸದ ರುಚಿ ಕಂಡೇ ಇರುತ್ತಾರೆ. ಕೆಲವರು ಇದಕ್ಕಾಗಿ ತಮ್ಮ ಜೀವಿತವನ್ನೇ ಮುಡಿಪಾಗಿಡುತ್ತಾರೆ. ಇನ್ನೂ ಹಲವರಿಗೆ ಇದು ಹವ್ಯಾಸಕ್ಕಿಂತ ಒಂದು ಲಾಭದಾಯಕ ಪೂರ್ಣ ಪ್ರಮಾಣದ ವೃತ್ತಿಯೇ ಆಗಿರುತ್ತದೆ.

ಅಂಚೆಚೀಟಿಗಳು ಅಂತರರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸಿ, ಶಾಂತಿ ಸ್ನೇಹ ಸೌಹಾರ್ದತೆಗಳನ್ನು ಸಾಧಿಸುವ ಪಾತ್ರವನ್ನು ವಹಿಸುತ್ತವೆ.

ಜಗತ್ತಿನಾದ್ಯಂತ ಬೇರೆ ಬೇರೆ ರಾಷ್ಟ್ರಗಳು ಹೊರತರುತ್ತಿರುವ ಅಂಚೆಚೀಟಿಗಳಲ್ಲಿ ಹೊಸತನವಿರುತ್ತದೆ. ಅಂಚೆಚೀಟಿಗಳ ಅಧ್ಯಯನ ನಡೆಸುವುದರಿಂದ ಜ್ಞಾನ ಭಂಡಾರ ಬೆಳೆಯುತ್ತದೆ. ಆದುದರಿಂದ ಅಂಚೆಚೀಟಿಗಳ ಸಂಗ್ರಹವನ್ನು ವಿಶ್ವಕೋಶವೆನ್ನ ಬಹುದು. ಎಳೆಯ ಬಾಲಕ-ಬಾಲಕಿಯರಿಗೆ ಇಂತಹ ಅಮೂಲ್ಯ ಸಾಧನದ ಪರಿಚಯ ಮಾಡಿಕೊಡುವುದು ಅತ್ಯಗತ್ಯ. ನಿಸರ್ಗದ ಮಡಿಲಲ್ಲಿ ಹುಟ್ಟಿ ಬೆಳೆವ ತರುಲತೆಗಳ, ಫಲಪುಷ್ಪಗಳ, ಸಂಗೀತ, ಸಾಹಿತ್ಯ, ಕಲೆ, ಕೃಷಿ, ಕ್ರೀಡೆ, ವಿಜ್ಞಾನ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಹಾಗೂ ಪ್ರಕೃತಿ ಸೌಂದರ್ಯವನ್ನು ಪ್ರತಿಬಿಂಬಿಸುವ ಹಲವಾರು ಅಂಚೆಚೀಟಿಗಳು ನಮ್ಮ ದೇಶದಲ್ಲಿ ಬಿಡುಗಡೆಯಾಗಿವೆ.

ಮನೋಲ್ಲಾಸಕರವೂ, ಮನಮೋಹಕವೂ ಆದ ಈ ಹವ್ಯಾಸ ವಿದ್ಯಾವರ್ಧಕವೂ, ಜ್ಞಾನೋತ್ಪಾದಕವೂ ಆದ ಒಂದು ಶ್ರೇಷ್ಠ ಶೈಕ್ಷಣಿಕ ಸಾಧನೆಯೆ ಹೌದು. ವಿದ್ಯಾರ್ಥಿಗಳು ತಾವು ಸಂಗ್ರಹಿಸಿರುವ ಅಂಚೆಚೀಟಿಗಳ ಕಾಲ್ಪನಿಕ ರೆಕ್ಕೆಗಳನ್ನೇರಿ ಅಮೆರಿಕ, ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ಜಪಾನ್, ಜರ್ಮನಿ, ರಷ್ಯಾ, ಸ್ವಿಡ್ಜರ್‌ಲ್ಯಾಂಡ್ ಮುಂತಾದ ಅಪರಿಚಿತ ದೇಶಗಳನ್ನು ಸುತ್ತಿ ಅಲ್ಲಿಯ ಹಿನ್ನೆಲೆ ಸಸ್ಯವರ್ಗ, ಪ್ರಾಣಿಪ್ರಪಂಚ, ಬೆಳೆಗಳು, ಜನರ ವೃತ್ತಿ - ವ್ಯವಸಾಯಗಳು, ಕೈಗಾರಿಕೆಗಳು, ವಾಸ್ತುಕಲೆ ಮುಂತಾದ ವಿಷಯಗಳ ಬಗ್ಗೆ ಪರಿಚಯ ಮಾಡಿಕೊಂಡು

ತನ್ನ ಜ್ಞಾನವನ್ನು ಅತಿ ಸುಲಭವಾಗಿ ಹೆಚ್ಚಿಸಿಕೊಳ್ಳಲು ಸಮರ್ಥನಾಗುವನು. ಆಸ್ಟ್ರೇಲಿಯಾ ದೇಶ ತನ್ನ ಕಾಂಗರು ಪ್ರಾಣಿಗಳಿಗೆ ಹೆಸರುವಾಸಿಯೆಂದೂ, ನ್ಯೂಜಿಲ್ಯಾಂಡಿನ ಕಿವಿ ಹಕ್ಕಿಗಳು ವಿಶ್ವವಿಖ್ಯಾತವೆಂದೂ ಅಂಚೆಚೀಟಿಗಳ ಅಧ್ಯಯನದಿಂದ ತಿಳಿದುಕೊಳ್ಳಬಹುದು. ತನ್ನ ನೆರೆಯ ಸ್ನೇಹಪರ ದೇಶಗಳ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಗಳನ್ನು ಅಂಚೆಚೀಟಿ ನೋಡಿ ಜ್ಞಾಪಿಸಿಕೊಳ್ಳ ಬಹುದು. ಕೇವಲ ಅಂಚೆಚೀಟಿ ಸಂಗ್ರಹಿಸಿ ನೋಡುವುದರಿಂದಲೇ ವಿಶ್ವಸೌಂದರ್ಯ ವನ್ನು ಆಸ್ವಾದಿಸಿದೆ ಎನ್ನುವಷ್ಟು ಆತ್ಮತೃಪ್ತಿ ದೊರೆಯುವುದು. ಅದೇ ರೀತಿ ಅಂಚೆಚೀಟಿಗಳ ಅಧ್ಯಯನದಿಂದ ಜಗತ್ತಿನ ಭೂಗೋಳವನ್ನೇ ಕೂಲಂಕಷವಾಗಿ ಮನಸ್ಸಿಗೊಪ್ಪುವ ರೀತಿಯಲ್ಲಿ ಅರಿಯಲು ಸಾಧ್ಯ. ಪುಸ್ತಕಗಳ ಪಠನ ಮಾತ್ರದಿಂದ ಅರಿಯಲಸಾಧ್ಯವಾದ ಸಣ್ಣಪುಟ್ಟ ವಿವರಗಳು ಅಂಚೆಚೀಟಿಗಳ ಅಧ್ಯಯನದಿಂದ ದೊರಕುತ್ತವೆ. ಸುಂದರ ನೈಸರ್ಗಿಕ ದೃಶ್ಯಗಳು, ಜಲಪಾತಗಳ ಪಕ್ಷಿನೋಟ, ಚಿತ್ರವಿಚಿತ್ರ ಪಕ್ಷಿಗಳ ರಂಗುರಂಗಿನ ರೆಕ್ಕೆಪುಕ್ಕಗಳು, ಅದ್ಭುತವಾದ ಯಾವುದೋ ಒಂದು ವಿಚಿತ್ರ ಮೃಗ ಇವೆಲ್ಲಾ ಅಂಚೆಚೀಟಿಗಳ ಉದಾತ್ತ ಕೊಡುಗೆ. ಕುತೂಹಲವನ್ನು ಕೆರಳಿಸುವಂತಹ ಈ ಸುಂದರ ನೋಟಗಳು ಸಂಗ್ರಹಕಾರನನ್ನು ಹೆಚ್ಚಿನ ಅಧ್ಯಯನದೆಡೆಗೆ ಸೆಳೆಯುವುವು. ತನ್ಮೂಲಕ ಜ್ಞಾನಾಭಿವೃದ್ಧಿಗೆ ಅವಕಾಶ ಸುಯೋಗಾದಿಗಳನ್ನು ಕಲ್ಪಿಸಿ ಕೊಟ್ಟಂತಾಗುವುದು. ಈ ಬಗ್ಗೆ ಸಂಬಂಧಿಸಿದ ಯಾವುದೋ ಒಂದು ಪುಸ್ತಕವನ್ನೋ ವಿಶ್ವಕೋಶವನ್ನೋ ತೆಗೆದು ನೋಡಲು ಪ್ರೇರಿತನಾಗುವನು.

ಜೀವನದಲ್ಲಿ ಕಂಡಿಲ್ಲದ ಕೇಳಿಲ್ಲದ ಹೊಸಹೊಸ ಸ್ಥಳಗಳನ್ನು ಅಂಚೆಚೀಟಿಗಳ ಮೇಲೆ ಕಂಡು ಅವುಗಳ ಭೌಗೋಳಿಕ ನಿವೇಶನಗಳನ್ನು ತಿಳಿದುಕೊಳ್ಳುವ ಕುತೂಹಲ ವಿದ್ಯಾರ್ಥಿಗಳಲ್ಲಿ ಮೂಡುವುದು. ಆಸ್ಟ್ರೇಲಿಯಾದ ಮೂಲ ನಿವಾಸಿಗಳು ಯೆರ್ರಾ ಜನಾಂಗದವರು. ಅಮೇರಿಕಾದ ರೆಡ್ ಇಂಡಿಯನ್ ಜನಾಂಗದವರು ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ಮಾವರಿಗಳು ಮೂಲನಿವಾಸಿಗಳು ಎಂಬ ವಿಷಯಗಳನ್ನು ಅಂಚೆಚೀಟಿಗಳ ಮೂಲಕ ಗ್ರಹಿಸಬಹುದು. ಅಷ್ಟೇ ಅಲ್ಲದೆ ಅಂಚೆಚೀಟಿಗಳು ವಿವಿಧ ವೃತ್ತಿಗಳ ಬಗ್ಗೆ ಪರಿಚಯ ಮಾಡಿಕೊಡುವುವು. ಉದಾಹರಣೆಗೆ ಲಂಕಾದೇಶದ ಟೀ ಎಲೆ ಕೊಯಿಲು, ರಬ್ಬರ್ ಬೆಳೆ, ಆಸ್ಟ್ರೇಲಿಯಾದ ಮತ್ತು ನ್ಯೂಜಿಲ್ಯಾಂಡ್‌ನ ಪಶುಪಾಲನೆ, ಕ್ಷೀರಾಭಿವೃದ್ಧಿ, ಹಣ್ಣುಗಳನ್ನು ಡಬ್ಬಗಳಲ್ಲಿ ತುಂಬುವ ಕೈಗಾರಿಕೆ ಇತ್ಯಾದಿ ವಿವಿಧ ವೃತ್ತಿ ಕೈಗಾರಿಕೆಗಳ ಬಗ್ಗೆ ಸುಲಭವಾಗಿ ಅರಿಯಬಹುದು.

ಭೂಗೋಳವೇ ಅಲ್ಲದೆ, ವಿವಿಧ ದೇಶಗಳಲ್ಲಿ ಬಳಕೆಯಲ್ಲಿರುವ ನಾಣ್ಯಗಳು ಮತ್ತು ಅವುಗಳೊಡನೆ ಹೋಲಿಸಿದಲ್ಲಿ ತನ್ನ ದೇಶದ ನಾಣ್ಯ ವಿನಿಮಯ ಮೌಲ್ಯವೇನೆಂಬುದನ್ನು ತಿಳಿಯಲು ಅಂಚೆ ಚೀಟಿಯು ಒದಗಿಸಿಕೊಡುವ ಸೌಲಭ್ಯ

ಮತ್ತು ಅವಕಾಶ ವರ್ಣಿಸಲಸದಳ. ಫ್ರಾನ್ಸ್‌ನಲ್ಲಿ ಫ್ರಾಂಕ್, ಜರ್ಮನಿಯಲ್ಲಿ ಮಾರ್ಕ್, ಇಟಲಿಯಲ್ಲಿ ಲಿರಾ, ಜಪಾನ್‌ನಲ್ಲಿ ಯೆನ್, ಸ್ಪೆಯಿನ್‌ನಲ್ಲಿ ಪೆಸಟ, ರಷ್ಯಾದಲ್ಲಿ ರುಬೆಲ್ ಎಂಬ ನಾಣ್ಯಗಳು ಬಳಕೆಯಲ್ಲಿವೆಯೆಂದೂ, ಸಂಗ್ರಹಕಾರನು ಚೆನ್ನಾಗಿ ಬಲ್ಲ

ಕಲಾ ಪ್ರೇಮಿಯಾದ ಅಂಚೆಚೀಟಿ ಸಂಗ್ರಹಕಾರನಿಗೆ ಬ್ರಿಟನ್, ಜಪಾನ್, ಫ್ರಾನ್ಸ್, ಹಂಗೇರಿ, ಅಮೆರಿಕಾ, ಜರ್ಮನಿ, ಸ್ವಿಡ್ಜರ್‌ಲ್ಯಾಂಡಿನ ಅಂಚೆಚೀಟಿಗಳ ಆಕರ್ಷಕ ಕಲಾತ್ಮಕ ಚಿತ್ರಗಳಿಂದ ಪ್ರೇರಣೆ ದೊರಕುವುದರಲ್ಲಿ ಸಂದೇಹವಿಲ್ಲ. ಇದರಿಂದ ಪ್ರೇರಿತನಾದ ಸಂಗ್ರಹಕಾರನು ತನ್ನಲ್ಲಿ ಮೂಡಿ ಬರುವ ಕಲಾತ್ಮಕ ಭಾವನೆಗಳನ್ನು ತಣಿಸಲು ತನ್ನಲ್ಲಿರುವ ಅಂಚೆಚೀಟಿಗಳನ್ನು ಕಲಾಪೂರ್ಣವಾದ ಮತ್ತು ಅರ್ಥವತ್ತಾದ ಬಗೆಯಲ್ಲಿ ಒಟ್ಟುಗೂಡಿಸಿ ಜೋಡಿಸುವ ಪ್ರಯತ್ನದಲ್ಲಿ ತೊಡಗುವನು. ಅಂಚೆಚೀಟಿಗಳ ವರ್ಣವೈವಿಧ್ಯ ತನ್ನದೇ ಆದ ಒಂದು ಸೋಜಿಗದ ಪ್ರಪಂಚ. ಅದೆಷ್ಟು ಸೂಕ್ಷ್ಮಭೇದಗಳು. ಹಸಿರು, ಪಚ್ಚೆ ಹಸಿರು, ಹಳದಿ ಹಸಿರು, ನೀಲಿಹಸಿರು, ವಗೈರೆ, ವಗೈರೆ. ಅಂಚೆಚೀಟಿಗಳು ಇತಿಹಾಸದ ಒಂದು ಶಾಲೆ. ಜಗತ್ತಿನ ಅನೇಕ ಅನ್ವೇಷಣೆಗಳಿಗೆ ಸಂಬಂಧಪಟ್ಟ ಐತಿಹಾಸಿಕ ಹಿನ್ನೆಲೆಯನ್ನು ಗೊತ್ತುಹಚ್ಚಬೇಕೆಂಬ ಕುತೂಹಲ ಯುವಕ ಪೀಳಿಗೆಯ ಗ್ರಾಹಕ ಮನದಲ್ಲಿ ಮೂಡಿ ಸೃಜನಾತ್ಮಕ ಕಾರ್ಯದೆಡೆಗೆ ಅವರ ಗಮನವನ್ನು ಸೆಳೆಯುವುದು.

ಈ ಹವ್ಯಾಸದಿಂದ ವೀಕ್ಷಣಾಶಕ್ತಿ ವಿದ್ಯಾರ್ಥಿಗಳಲ್ಲಿ ಅಂಕುರಿಸಿ ಬೇರೂರುವುದು. ಪ್ರೇರಣಾಶಕ್ತಿಯನ್ನು ಬೆಳೆಸಿಕೊಂಡು ಪ್ರತಿಯೊಂದು ವಿಷಯದ ಅಥವಾ ವಸ್ತುವಿನ ಸೂಕ್ಷ್ಮವಿವರಗಳನ್ನು ಗ್ರಹಿಸಬಲ್ಲ ಅಪೂರ್ವ ಜ್ಞಾನ ಗಳಿಸುವರು. ವಿಶ್ವವಿಖ್ಯಾತ ಮಹಾಪುರುಷರ ಸ್ಮರಣೆಯನ್ನು ಅಜರಾಮರವನ್ನಾಗಿಸುವ ಶ್ರೇಯಸ್ಸು ಅಂಚೆಚೀಟಿಗಳಿಗೆ ಸಲ್ಲತಕ್ಕದ್ದು. ವಿಲಿಯಂ ಶೇಕ್ಸ್‌ಪಿಯರ್‌ನಂತಹ ಅಮರ ನಾಟಕಕಾರರು ಮತ್ತು ಕವಿಗಳು, ವಾಲ್ಟೇರಿನಂತಹ ಮಹಾಮಹಿಮ ಚಿಂತನಶೀಲರು ಬೈರನ್‌ನಂತಹ ಮೇಧಾವಿ ಕವಿಗಳು, ವಿಕ್ಟರ್ ಹ್ಯೂಗೋವಿನಂತಹ ಭಾವನಾಶೀಲ ಕಾದಂಬರಿಕಾರರು ಅಂಚೆಚೀಟಿಗಳಲ್ಲಿ ಅಮರರು.

ಪರದೇಶಗಳಲ್ಲಂತೂ ಅಂಚೆಚೀಟಿಗಳು ಶಾಲೆಗಳಲ್ಲಿ ವಿವಿಧ ವಿಷಯಗಳನ್ನು ಪಾಠ ಹೇಳಿಕೊಡುವ ಸಾಧನೆಯಾಗಿ ಬಳಕೆಯಲ್ಲಿವೆ. ಅವುಗಳ ಮೂಲಕವೇ ಮಕ್ಕಳಿಗೆ ಪಾಠವನ್ನು ಕಲಿಸಿಕೊಡಲಾಗುತ್ತದೆ. ಈ ಪದ್ಧತಿಯ ಮೂಲಕ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ವಹಿಸಿ ತಮ್ಮ ಪಾಠಗಳನ್ನು ಕಲಿಯುವರೆಂಬುದು ಸರ್ವಸಮ್ಮತವಾದ ಸಂಗತಿ.

★★★★

ಅಂಚೆ

ಪ್ರಾಚೀನ ಕಾಲದಲ್ಲಿ ಮೂಲನಿವಾಸಿಗಳು ಸನ್ನೆ ಸಂಕೇತಗಳ ಮೂಲಕ ಸಂಪರ್ಕ ಬೆಳೆಸಿಕೊಂಡಿದ್ದರು. ತಾಳೆಗರಿಗಳ ಮೇಲೆ ಕಬ್ಬಿಣದ ಮೊಳೆಯಿಂದ ಸಮಾಚಾರಗಳನ್ನು ಬರೆದು ಕಳಿಸುವುದು ರೂಢಿಯಾಯಿತು. ನವನಾಗರೀಕತೆಯು ಬೆಳೆದಂತೆಲ್ಲಾ ಸಂಪರ್ಕವು ಪ್ರಾಮುಖ್ಯತೆ ಪಡೆಯಿತು. ದೊಡ್ಡವರೂ, ಚಿಕ್ಕವರೂ ಎಲ್ಲಾ ಸ್ತರದವರೂ ಕುತೂಹಲದಿಂದ ಕಾಯುತ್ತಾರೆ ''ಅಂಚೆ''ಯವನು ತರುವ ಪತ್ರಕ್ಕಾಗಿ . ''ಅಂಚೆ'' ಎನ್ನುವುದು ಹಂಸ ಎಂಬುದರ ತದ್ಭವ. ಹಂಸವನ್ನು ಸಂದೇಶ ತರುವ ಪಕ್ಷಿ ಎಂದು ನಮ್ಮ ಪುರಾಣ ಕಥೆಗಳಲ್ಲಿ ವರ್ಣಿಸಲಾಗಿದೆ. ಹಂಸಪಕ್ಷಿಯು ಪ್ರೇಮ ಸಂದೇಶಗಳನ್ನು ಕೊಂಡೊಯ್ಯುವ ಸನ್ನಿವೇಶ ನಳದಮಯಂತಿ ಕಥೆಯಲ್ಲಿದೆ. ''ಸೀತೆಗೆ ಶ್ರೀರಾಮನ ದೂತ ಸಂದೇಶ'', ''ಯಕ್ಷನು ತನ್ನ ಪ್ರೇಯಸಿಗೆ ಕಳುಹಿಸಿದನೆನ್ನಲಾದ ಮೇಘ ಸಂದೇಶ'' ಇವು ಸುದ್ದಿ ಸಾಗಿಸುವ ವಾಹಕಗಳ ಪ್ರತೀಕಗಳಾಗಿದ್ದವೆಂದು ಪುರಾಣಗಳಿಂದಲೂ, ಕವಿಕೃತಿಗಳಿಂದಲೂ ತಿಳಿದುಬರುತ್ತದೆ. ಕ್ರಿ.ಪೂ. ೩೨೨ರಲ್ಲಿ ಚಂದ್ರಗುಪ್ತ ಮೌರ್ಯ, ಅಶೋಕ ಚಕ್ರವರ್ತಿ ಇವರ ಆಳ್ವಿಕೆಯಲ್ಲಿ ದೂರ ದೇಶಗಳಿಗೆ ತರಬೇತಿಗೊಳಿಸಿದ ಪಾರಿವಾಳಗಳು ಹಾಗೂ ಓಲೆಕಾರರ ಮುಖಾಂತರ ಸಮಾಚಾರ ರವಾನಿಸುವ ಏರ್ಪಾಡು ಇದ್ದಿತು. ಅಂಚೆ ಪದ್ಧತಿಯಲ್ಲಿ ಉತ್ತರಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಒಟ್ಟಾಗಿ ಕೂಡಿಸಿ ತಲುಪಿಸುವುದು ಯಾವಾಗ ಪ್ರಾರಂಭವಾಯಿತು ಎನ್ನುವುದು ಖಚಿತವಾಗಿ ತಿಳಿದುಬಂದಿಲ್ಲ, ಅಲ್ಲದೆ ನಿರ್ಧರಿಸುವುದು ಕಷ್ಟ. ಪ್ರಪಂಚದ ಮೊದಲ ಓಲೆಕಾರರು ಬ್ಯಾಬಿಲೋನಿಯಾ ಸಾಮ್ರಾಜ್ಯದಲ್ಲಿ ೪೦೦೦ ವರ್ಷಗಳ ಹಿಂದೆ ಮಣ್ಣಿನ ಫಲಕಗಳಲ್ಲಿ ಸಂದೇಶ ಅಳವಡಿಸಿ ದೂತರ ಮೂಲಕ ಬೇರೆಡೆಗೆ ಕಳುಹಿಸುತ್ತಿದ್ದರು. ಇದೇ ಕಾಲದಲ್ಲಿ ಈಜಿಪ್ಟ್‌ನಲ್ಲಿಯೂ ದೂತರ ಮೂಲಕ ಕಳಿಸುವ ವ್ಯವಸ್ಥೆ ಇದ್ದಿತು. ತದನಂತರ ಕಂಚಿನ ಫಲಕಗಳು ರೂಢಿಗೆ ಬಂದವು. ಪರ್ಷಿಯಾದ ಸೈರಸ್ ದೊರೆಯು ಕುದುರೆಗಳ ಮೇಲೆ ಸಂಚರಿಸುವ ಓಲೆಕಾರರನ್ನು ನೇಮಿಸಿದನು. ಕಾಡು ಮೇಡುಗಳನ್ನದೆ, ಚಳಿಯನ್ನದೆ ಉರಿಯುವ ಬಿಸಿಲೆನ್ನದೆ, ಪ್ರಾಣದ ಪಣವೊಡ್ಡಿ ಈ ಹರಿಕಾರರು ತಮ್ಮ ಕರ್ತವ್ಯ ಪಾಲಿಸುತ್ತಿದ್ದ ನಿದರ್ಶನಗಳಿವೆ. ಕೊಲಂಬಸ್ ಅಮೆರಿಕಾವನ್ನು ಮುಟ್ಟುವ (೧೫ನೇ ಶತಮಾನ) ಮೊದಲೇ ಅಲ್ಲಿನ ನಿವಾಸಿಗಳು ಒಂದು ರೀತಿಯ ಅಂಚೆ ವ್ಯವಸ್ಥೆಯನ್ನು

ಏರ್ಪಡಿಸಿಕೊಂಡಿದ್ದರು. ಪ್ರಾಚೀನ ಕಾಲದಿಂದಲೂ ತರಬೇತುಗೊಳಿಸಿದ ಪಾರಿವಾಳದ ಕೊರಳಿಗೆ ಸಂದೇಶ ಬರೆದ ಚೀಟಿಯನ್ನು ಕಟ್ಟಿ ಪರಿಚಿತವಾದ ನಿರ್ದಿಷ್ಟ ಸ್ಥಳಕ್ಕೆ ಕಳುಹಿಸುವ ಪದ್ಧತಿ ಫ್ರಾನ್ಸ್‌ನಲ್ಲಿ ಪ್ರಾರಂಭವಾಯಿತು. ಈಜಿಪ್ಟ್, ಚೀನಾ ದೇಶಗಳಲ್ಲಿ ಕ್ರಿಸ್ತಪೂರ್ವ ೨ನೇ ಶತಮಾನದಲ್ಲಿ ರಿಲೇ ಪದ್ಧತಿಯಲ್ಲಿ ಉತ್ತರಗಳನ್ನು ತಲುಪಿಸುವುದು ತಿಳಿದುಬಂದಿದೆ. ಆದರೆ ಅಂದು ವಸೂಲಿ ಮಾಡಿದ ಅಂಚೆ ಕುರಿತಾಗಲಿ ನಮಗೆ ಯಾವ ಆಧಾರಗಳೂ ಇಲ್ಲ.

ಭಾರತದಲ್ಲಿ ೧೨೯೬ ರಿಂದಲೂ ಅಂಚೆ ವ್ಯವಸ್ಥೆಯು ಜಾರಿಯಲ್ಲಿದೆ. ಪಠಾಣ ದೊರೆ ಅಲ್ಲಾವುದ್ದೀನ್ ಖಿಲ್ಜಿಯು ತನ್ನ ಸೈನ್ಯವನ್ನು ಪ್ರಗತಿಪಥದಲ್ಲಿಡಲು ಸ್ಥಿತಿಗತಿಗಳನ್ನು ಸತತವಾಗಿ ಪಡೆಯಲು ಅಶ್ವಾರೋಹಿ ಹಾಗೂ ಕಾಲಾಳು ಅಂಚೆ ವ್ಯವಸ್ಥೆಯನ್ನು ಹೊಂದಿದ್ದರು. ಮುಂದೆ ಸ್ವಲ್ಪ ಕಾಲ ಮಾತ್ರ ರಾಜ್ಯಭಾರ ನಡೆಸಿದ ಶೇರ್‌ಷಾ ಸೂರಿಯ ಕಾಲದಲ್ಲಿ ಅಂಚೆ ವ್ಯವಸ್ಥೆಯು ತುಂಬಾ ಸುಧಾರಿಸಿತು. (೧೫೪೧-೧೫೪೫) ತನ್ನ ಐದು ವರ್ಷಗಳ ಆಳ್ವಿಕೆಯಲ್ಲಿ ಬಂಗಾಳದಿಂದ ಸಿಂಧ್‌ವರೆಗೆ ೨೦೦೦ ಮೈಲಿ ಉದ್ದದ ಮಾರ್ಗವನ್ನು ನಿರ್ಮಿಸಿದನು ಮತ್ತು ಮಾರ್ಗದುದ್ದಕ್ಕೂ ಅಲ್ಲಲ್ಲೆ ವಿಶ್ರಾಂತಿ ಗೃಹಗಳನ್ನು ಕಟ್ಟಿಸಿದನು. ಚಕ್ರಾಧಿಪತ್ಯದ ಆದ್ಯಂತ ಅಶ್ವಾರೋಹಿಗಳು ಸಮಾಚಾರವನ್ನು ಮುಟ್ಟಿಸುವ ಏರ್ಪಾಡು ಮಾಡಿದನು. ಅಕ್ಬರನ ಕಾಲದಲ್ಲಿ (೧೫೫೬ ರಿಂದ ೧೬೦೫) ಸಾರಿಗೆ ವಿಧಾನವನ್ನು ಮತ್ತಷ್ಟು ಉತ್ತಮಪಡಿಸಲಾಯಿತು. ಅಂಚೆಯನ್ನು ಒಯ್ಯಲು ಕುದುರೆಗಳ ಜೊತೆ ಒಂಟೆಗಳನ್ನೂ ಬಳಸಲಾರಂಭಿಸಲಾಯಿತು.

ದೆಹಲಿಯ ಸುಲ್ತಾನರ ಕಾಲದಲ್ಲಿ ಕಾಲ್ನಡಿಗೆ ಹಾಗೂ ಅಶ್ವಾರೋಹಿ ವಾಹನ ವ್ಯವಸ್ಥೆಯ ವಿವರ ಅಂದಿನ ಇತಿಹಾಸಕಾರ ಜಿಯಾವುದ್ದೀನ್ ತಮ್ಮ ಗ್ರಂಥದಲ್ಲಿ ಬರೆದಿರುವರು. ಅಂಚೆ ಓಟಗಾರರು ಪತ್ರಗಳನ್ನು ತಲುಪಿಸಲು ಬೆಟ್ಟಗುಡ್ಡಗಳನ್ನು ಏರಿ ಇಳಿಯಬೇಕಾಗಿತ್ತು. ಕ್ರೂರ ಮೃಗಗಳು ಮತ್ತು ಡಕಾಯಿತರಿಂದ ತುಂಬಿದ ಪ್ರದೇಶಗಳಲ್ಲಿ ಧೈರ್ಯದಿಂದ ಓಡಾಡಬೇಕಾಗುತ್ತದೆ. ಆದ್ದರಿಂದ ಒಂದು ಕೈಯಲ್ಲಿ ೩ ೧/೨ ಅಡಿ ಉದ್ದದ ಬುಡದಲ್ಲಿ ಗಂಟೆ ಕಟ್ಟಿರುವ ದೊಣ್ಣೆ, ಮತ್ತೊಂದು ಕೈಯಲ್ಲಿ ಅಂಚೆ ಚೀಲವನ್ನು ಹಿಡಿದು ವಿನಿಮಯ ಕೇಂದ್ರದ ಕಡೆಗೆ ಓಡುತ್ತಿದ್ದರು.

ಮೈಸೂರು ರಾಜ್ಯದಲ್ಲಿ ವ್ಯವಸ್ಥಿತ ಅಂಚೆ ಸಾಗಣೆಯನ್ನು ಪ್ರಾರಂಭಿಸಿದ ಕೀರ್ತಿ ಚಿಕ್ಕದೇವರಾಜ ಒಡೆಯರಿಗೆ (೧೬೭೦) ಸಲ್ಲುತ್ತದೆ. ಚೀಲಗಳನ್ನು ಒಯ್ಯುವ ಪೇದೆಗಳು ಸಾಗಣೆಯ ಕಾರ್ಯವನ್ನೇ ಅಲ್ಲದೆ ಬೇಹುಗಾರಿಕೆಯ ಚಟುವಟಿಕೆಯಲ್ಲೂ ತೊಡಗುತ್ತಿದ್ದರು. ಇವರು ದಿನಂಪ್ರತಿ ೨೩೬೫ ಮೈಲಿಗಳಂತೆ ವಿವಿಧ ಮಾರ್ಗಗಳಲ್ಲಿ ೧೫೯ ಅಂಚೆ ಕಛೇರಿಗಳಿಗೆ ಪ್ರತಿನಿತ್ಯವೂ ಕಾಗದ ಪತ್ರಗಳನ್ನು ಒಯ್ಯುತ್ತಿದ್ದರು.

ಈಸ್ಟ್ ಇಂಡಿಯಾ ಕಂಪನಿಯು ರಚನಾತ್ಮಕ ಕ್ರಮಗಳನ್ನು ಕೈಗೊಂಡಿತು.

೧೭೦೦ರ ವೇಳೆಗೆ ಕಂಪನಿಯ ಕಾರ್ಯಚಟುವಟಿಕೆಗಳು ಮದರಾಸು, ಮುಂಬೈ ಮತ್ತು ಕಲ್ಕತ್ತಾಗೆ ವ್ಯಾಪಿಸಿತ್ತು. ಆದ್ದರಿಂದ ಕ್ರಮಬದ್ಧವಾಗಿ ಪತ್ರವ್ಯವಹಾರದ ವಿನಿಮಯವೂ ಅಗತ್ಯವಾಗಿತ್ತು. ಈಸ್ಟ್ ಇಂಡಿಯಾ ಕಂಪನಿಯು ಮುಂಬೈ ಮತ್ತು ಮದರಾಸಿನಲ್ಲಿ ದೊಡ್ಡ ಅಂಚೆ ಕಛೇರಿಗಳನ್ನು ಸ್ಥಾಪಿಸಿತು. ೧೭೬೬ರಲ್ಲಿ ಲಾರ್ಡ್ ಕ್ಲೈವ್ ಅಂಚೆ ಪದ್ಧತಿಯನ್ನು ಉತ್ತಮಪಡಿಸಿದನು. ಆದರೆ ಈ ವ್ಯವಸ್ಥೆಯು ಸರ್ಕಾರಿ ಬಳಕೆಗೆ ಮಾತ್ರ ಮೀಸಲಾಗಿತ್ತು. ೧೭೭೪ರಲ್ಲಿ ಅಂಚೆ ಸೌಕರ್ಯವನ್ನು ಸಾರ್ವಜನಿಕರಿಗೆ ನೀಡಲಾಯಿತು. ಆ ಕಾಲದಲ್ಲಿ ಪ್ರತಿ ನೂರು ಮೈಲಿಗೆ ಎರಡು ಆಣೆ ಅಂಚೆ ಶುಲ್ಕ ಕನಿಷ್ಠವಾಗಿತ್ತು. ಅಂಚೆಗಾಗಿ ಹಣ ನೀಡಲು ಸಾಧ್ಯವಾಗುವಂತೆ ಟಂಕಸಾಲೆಗಳಲ್ಲಿ ೨ ಆಣೆ ಮೌಲ್ಯದ ತಾಮ್ರದ ವಿಶೇಷ ನಾಣ್ಯಗಳನ್ನು ತಯಾರಿಸಲಾಯಿತು.

ಅಂಚೆ ಕಛೇರಿಯಲ್ಲಿ ಪತ್ರಗಳನ್ನು ನೀಡುವ ಸಮಯದಲ್ಲಿ ಅಂಚೆ ಶುಲ್ಕವನ್ನು ಕೊಡಬೇಕಾಗಿತ್ತು. ನಗದಿನ ಶುಲ್ಕ ನೀಡಿದ ನಂತರ ''ಪೋಸ್ಟ್ ಪೈಡ್'' ಎಂಬ ಮುದ್ರೆಯನ್ನು ಪತ್ರದ ಮೇಲೆ ಒತ್ತಲಾಗುತ್ತಿತ್ತು. ಅಂಚೆ ಶುಲ್ಕ ನೀಡದ ಪತ್ರಗಳನ್ನೂ ಸಹ ಸ್ವೀಕರಿಸಲಾಗುತ್ತಿತ್ತು. ಆದರೆ ಅಂತಹ ಪತ್ರಗಳ ಮೇಲೆ 'ಪೋಸ್ಟ್ ನಾಟ್ ಪೈಡ್'' ಇಲ್ಲವೆ ''ಅನ್‌ಪೈಡ್'' ಎಂಬ ಪದಗಳ ಮುದ್ರೆಯನ್ನು ಒತ್ತಿ ಅವುಗಳ ಅಂಚೆಶುಲ್ಕವನ್ನು ಪತ್ರವನ್ನು ಸ್ವೀಕರಿಸಿದವರಿಂದ ವಸೂಲು ಮಾಡುತ್ತಿದ್ದರು.

ಅಂಚೆ ಮುದ್ರೆಯನ್ನು ಮೊಟ್ಟ ಮೊದಲು ಅಧಿಕೃತವಾಗಿ ಹೆನ್ರಿ ಬಿಷಪ್‌ನು ಬಳಸಿರುವುದಾಗಿ ಇತಿಹಾಸಕಾರರು ಗುರುತಿಸಿದ್ದಾರೆ. ಅಂದಿನ ರಾಜವಂಶದ ಹೆನ್ರಿ ಬಿಷಪನು ಅಂಚೆ ನಿರ್ವಹಿಸುವ ಹಕ್ಕನ್ನು ವರ್ಷಕ್ಕೆ ೨೧,೦೦೦ ಪೌಂಡುಗಳಿಗೆ ಕೊಂಡುಕೊಂಡನು. ಅಂದಿಗೆ ಅದು ಹೆಚ್ಚು ಮೌಲ್ಯವೆಂದು ಪರಿಗಣಿತವಾಗಿತ್ತು. ಆದರೆ ಅವನ ಹತ್ತಿರ ಕೆಲಸ ಮಾಡುತ್ತಿದ್ದವರು ಉತ್ತರಗಳನ್ನು ಬಹಳ ತಡವಾಗಿ ತಲುಪಿಸುತ್ತಿದ್ದುದರಿಂದ ಜನಾದರಣೆ ತಗ್ಗುವುದೆಂದು ಗ್ರಹಿಸಿ ಉತ್ತರಗಳ ಮೇಲೆ (ಪತ್ರಗಳ) ಏನಾದರೂ ಗುರುತು ಇರಬೇಕೆಂದೂ ಅದು ಅಂಚೆ ಕಳುಹಿಸಿದ ದಿನವನ್ನು ಸೂಚಿಸುತ್ತದೆ ಎಂದು ಆಲೋಚಿಸಿ ಅದಕ್ಕೆ ಸರಿಹೊಂದುವಂತೆ ಮುದ್ರೆಯನ್ನು ವೃತ್ತಾಕಾರದಲ್ಲಿ ತಯಾರು ಮಾಡಿ, ಆ ವೃತ್ತದ ಮೇಲ್ಭಾಗದಲ್ಲಿ ತಿಂಗಳು, ಕೆಳಭಾಗದಲ್ಲಿ ದಿನಾಂಕ ಸೂಚಿಸಿದ್ದರು. ಆದರೆ ಈ ಬಿಷಪ್ ಗುರುತುಗಳು ಈ ದಿನಗಳಲ್ಲಿ ಅಪರೂಪವಾಗಿ ಲಭ್ಯವಾಗುತ್ತದೆ. ಹಾಗೆಯೇ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳುಹಿಸುವ ಪತ್ರಗಳ ಮೇಲಿನ ಗುರುತುಗಳು ಕೂಡ ಬಹಳ ವಿಚಿತ್ರವಾಗಿ ಇರುತ್ತಿದ್ದವು. ತೆರಿಗೆ ಹೇಗೆ ಸಂದಾಯವಾಗಿದೆ, ಎಷ್ಟು, ಆ ಪತ್ರ ಕ್ರಮಿಸಿದ ದೂರ, ಈ ವಿವರಗಳನ್ನು ಒಳಗೊಂಡ ಮುದ್ರೆಗಳನ್ನು ತಯಾರು ಮಾಡುತ್ತಿದ್ದರು.

ಕಾಲುವೆಗಳ ಮೂಲಕ ಹಡಗುಗಳಲ್ಲಿ ಸಂಚಾರಿ ಅಂಚೆ ಕಛೇರಿಗಳನ್ನು ನಡೆಸಿ

ಪತ್ರಗಳನ್ನು ಬಟವಾಡೆ ಮಾಡುತ್ತಿದ್ದರು. ಪತ್ರಗಳ ಮೇಲೆ ಒತ್ತುವ ದುಂಡಗಿನ ಗುರುತಿನ ಮಧ್ಯಭಾಗದಲ್ಲಿ ಕಿರೀಟ, ಅದರ ಮೇಲೆ ಶಿಪ್ ಲೆಟರ್ ಎಂದು ಬರೆದಿರುತ್ತಿತ್ತು. ಕೆಳಗೆ ಪಟ್ಟಣದ ಹೆಸರು ಸೂಚಿಸುತ್ತಿದ್ದರು. ಮತ್ತೆ ಕೆಲವು ಮುದ್ರೆಗಳಲ್ಲಿ ಪತ್ರ ತಲುಪಬೇಕಾದ ಪ್ರದೇಶದ ಹೆಸರು ಹಾಗೂ ಅದು ಪ್ರಯಾಣಿಸಿದ ಸ್ಥಳದಿಂದ ಎಷ್ಟು ಮೈಲಿ ದೂರದಲ್ಲಿ ಇದೆಯೋ ಆ ಗುರುತು ಮಾತ್ರ ಹಾಕುತ್ತಿದ್ದರು. ಅವುಗಳನ್ನು ಮೈಲೇಜ್ ಮಾರ್ಕ್ ಎನ್ನುತ್ತಿದ್ದರು.

೧೮೩೭ರಲ್ಲಿ ಮೊದಲ ಬಾರಿಗೆ ಅಂಚೆ ವ್ಯವಸ್ಥೆ ಕಾಯಿದೆಯನ್ನು ಅಂಗೀಕರಿಸಿದ ಪರಿಣಾಮವಾಗಿ ಅಂಚೆ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆಗಳಾದವು. ಈ ಕಾಯಿದೆಯು ಅಂಚೆ ವ್ಯವಸ್ಥೆಯನ್ನು ಭಾರತದಾದ್ಯಂತ ಆಧುನೀಕರಿಸಿತು.

★★★★

ಅಂಚೆಚೀಟಿ

ಅಂಚೆಚೀಟಿಯ ಚರಿತ್ರೆಯಲ್ಲಿ ಇತಿಹಾಸ ಸೃಷ್ಟಿಸಿದ ಗೌರವ ಬ್ರಿಟನ್ ದೇಶಕ್ಕೆ ಸಲ್ಲುತ್ತದೆ. ಅಂಚೆ ಇಲಾಖೆಯಲ್ಲಿ ನಡೆಯುತ್ತಿದ್ದ ಕೆಲವು ನ್ಯೂನಾತಿರೇಕಗಳನ್ನು ಸರಿಪಡಿಸಬೇಕಾದಂತಹ ಸಂದರ್ಭದಲ್ಲಿ ಅಂಚೆಚೀಟಿಯ ಉದ್ಭವವಾಯಿತು.

ಪ್ರಾರಂಭದಲ್ಲಿ ಕಾಗದ ಪತ್ರಗಳನ್ನು ರವಾನಿಸಲು ಶುಲ್ಕ ತೆರಬೇಕಾಗಿರಲಿಲ್ಲ. ಬಟವಾಡೆ ಆಗಬೇಕಾದ ಕಾಗದ ಪತ್ರಗಳು ಎಲ್ಲಿಂದ ಬಂದಿವೆ, ಅದರ ದೂರ ಮತ್ತು ತೂಕದ ಆಧಾರವನ್ನು ಅನುಸರಿಸಿ ಶುಲ್ಕ ತೆರಬೇಕಿತ್ತು. ಈ ವಿಧಾನದಲ್ಲಿ ಕೆಲವು ದುರಭ್ಯಾಸಗಳು ತಲೆದೋರಿ ಆದಾಯಕ್ಕಿಂತ ಹೆಚ್ಚು ಪಟ್ಟು ನಷ್ಟ ಕಂಡು ಬರಲಾರಂಭಿಸಿತು. ಉದಾಸೀನ ಮತ್ತು ಕರ್ತವ್ಯಲೋಪದೋಷಗಳಿಂದ ವಾಸ್ತವಿಕ ಮೌಲ್ಯಗಳನ್ನು ಮರೆತು ಕಡಿಮೆ ದೂರ ಮತ್ತು ಕಡಿಮೆ ತೂಕಕ್ಕೆಂದು ಕನಿಷ್ಠ ಶುಲ್ಕವನ್ನು ಮಾತ್ರವೇ ವಸೂಲು ಮಾಡಿಕೊಂಡು ಮೋಸ ಮಾಡುವುದು ಕಂಡುಬಂತು. ಆದುದರಿಂದ ಈ ಪದ್ಧತಿಯಲ್ಲಿ ತೀವ್ರತರವಾದ ಮಾರ್ಪಾಟು ಮಾಡಬೇಕೆಂಬ ಒತ್ತಾಯವು ಇತ್ತು. ಇಂತಹ ಸಂದರ್ಭದಲ್ಲಿ ಈ ವ್ಯವಸ್ಥೆಯ ಸುಧಾರಣೆಯಾಗಬೇಕೆಂದೂ ಅಂಚೆ ವೆಚ್ಚವು ಅತಿಕಡಿಮೆಯಾಗಿ ದೂರದ ಗಣನೆಯಿಲ್ಲದೆ, ಇಡೀ ದೇಶಕ್ಕೆ ಅನ್ವಯವಾಗುವ ಏಕರೂಪ ಅಂಚೆ ಶುಲ್ಕವನ್ನು ಮುಂಗಡವಾಗಿ ಪತ್ರಗಳ ಮೇಲೆ ಅಂಟಿಸುವ ಚೀಟಿಗಳ ಮೂಲಕ ಪಡೆಯಬೇಕೆಂದೂ ಒಂದು ಮಹತ್ವ ಪ್ರಬಂಧವನ್ನು ತಯಾರಿಸಿ ೧೮೩೭ರಲ್ಲಿ ಇಲಾಖೆಯ ವರಿಷ್ಠರ ಗಮನಕ್ಕೆ ಶ್ರೀ ರೊಲ್ಯಾಂಡ್ ಹಿಲ್‌ರವರು ಸಮರ್ಪಿಸಿದರು. ಸಾಕಷ್ಟು ವಿಚಾರ ವಿನಿಮಯವಾದ ಮೇಲೆ ಈ ಸಲಹೆಯನ್ನು ಇಲಾಖೆಯು ಒಪ್ಪಿ ೧೮೪೦ನೆಯ ಮೇ ತಿಂಗಳ ೬ನೇ ತಾರೀಖಿನಂದು ಪ್ರಪ್ರಥಮವಾಗಿ ಅಂಚೆಚೀಟಿಗಳನ್ನು ಬ್ರಿಟಿಷ್ ದೇಶ ಹೊರತಂದಿತು. ಆದುದರಿಂದಲೇ ಅಂಚೆಚೀಟಿ ಉಗಮದ ಇತಿಹಾಸದಲ್ಲಿ ರೊಲ್ಯಾಂಡ್ ಹಿಲ್‌ರವರ ಹೆಸರು ಅಜರಾಮರವಾಗಿದೆ.

ಈ ಸುಧಾರಣಾ ಕ್ರಮವನ್ನು ರೂಢಿಗೆ ತಂದು ಜನಪ್ರಿಯಗೊಳಿಸಿದ ರೊಲ್ಯಾಂಡ್ ಹಿಲ್‌ರವರಿಗೆ ಅಂದಿನ ಬ್ರಿಟಿಷ್ ಸರ್ಕಾರ ''ಸರ್'' ಎಂಬ ಬಿರುದನ್ನು ನೀಡಿ ಗೌರವ ಸಲ್ಲಿಸಿತು. ಸರ್ ರೋಲ್ಯಾಂಡ್ ಹಿಲ್‌ರವರ ಹೊಸ ಪದ್ಧತಿಯ ಉಪಯುಕ್ತತೆಯನ್ನು ಕಂಡ ಜಗತ್ತಿನ ಇತರ ರಾಷ್ಟ್ರಗಳೂ ಅನುಕರಿಸಿ ಅಂಚೆಚೀಟಿಗಳನ್ನು

ಬಿಡುಗಡೆ ಮಾಡಿದವು. ಅಂಚೆಚೀಟಿಗಳನ್ನು ಹೊರಡಿಸುವಲ್ಲಿ ಬ್ರೆಸಿಲ್ ಎರಡನೆಯದು (೧೮೪೩). ಅದೇ ವರ್ಷ ಜ್ಯೂರಿಚ್ ಮತ್ತು ಜನೀವಾ ತಮ್ಮ ಅಂಚೆ ಚೀಟಿಗಳನ್ನು ಹೊರಡಿಸಿದವು.

ಪ್ರಪ್ರಥಮವಾಗಿ ಬ್ರಿಟನ್ ದೇಶದಲ್ಲಿ ಬಿಡುಗಡೆಯಾದ ಅಂಚೆಚೀಟಿಗಳಲ್ಲಿ ವಿಕ್ಟೋರಿಯಾ ರಾಣಿಯ ಮುಖಚಿತ್ರವನ್ನು ಅಚ್ಚು ಮಾಡುತ್ತಿದ್ದರು. ಆದರೆ ಆ ದೇಶದ ಹೆಸರನ್ನು ಮುದ್ರಿಸಿರಲಿಲ್ಲ. ರಾಣಿಯ ಮುಖಚಿತ್ರವನ್ನು ನೋಡಿ ದೇಶ ಗುರುತು ಹಿಡಿಯಬೇಕಾಗಿತ್ತು. ಅದೇ ಪದ್ಧತಿಯನ್ನು ಅಂದಿನಿಂದ ಇಂದಿನವರೆಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ವಿಧಾನ ಬ್ರಿಟನ್ ದೇಶದ ಅಂಚೆಚೀಟಿಗಳ ಪರಂಪರೆಯನ್ನು ಎತ್ತಿ ತೋರಿಸುತ್ತದೆ.

★★★★

ಭಾರತದಲ್ಲಿ ಅಂಚೆಚೀಟಿ

ಆಂಗ್ಲರು ಭಾರತಕ್ಕೆ ವಲಸೆ ಬಂದು ವ್ಯಾಪಾರವನ್ನು ಮಾಡಿಕೊಂಡಿದ್ದವರು. ರಾಜಕೀಯ ರಂಗವನ್ನೂ ಪ್ರವೇಶಿಸಿ ಕುಯುಕ್ತಿಯಿಂದ ಅಧಿಕಾರ ಸೂತ್ರವನ್ನೂ ಹಿಡಿದರು. ಈಸ್ಟ್ ಇಂಡಿಯಾ ಕಂಪನಿ ಎಂಬ ವರ್ತಕರ ಸಂಘವನ್ನು ರಚಿಸಿಕೊಂಡು ವ್ಯಾಪಾರ, ವ್ಯವಹಾರ ಆಡಳಿತಗಳ ಅನುಕೂಲಕ್ಕಾಗಿ ಅಂಚೆವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಿದರು.

೧೮೫೨ರಲ್ಲಿ ಸಿಂದ್ ಪ್ರಾಂತ್ಯದ ಅಂಚೆ ಕಛೇರಿಯಲ್ಲಿ ಸರ್ ಬಾರ್ಟಲ್ ಫ್ರೇರ್ ಎಂಬ ಬ್ರಿಟಿಷ್ ಅಧಿಕಾರಿಯು ಅರ್ಧಆಣೆಯ ಬಿಳಿ, ನೀಲಿ ಮತ್ತು ಕೆಂಪು ವರ್ಣದ ಅಂಚೆಚೀಟಿಗಳನ್ನು ದೋಸೆಯಂತಹ ರೂಪದಲ್ಲಿ ಪ್ರಕಟಿಸಿದನು. ಇದು ಭಾರತದ ಪ್ರಥಮ ಅಂಚೆಚೀಟಿ. ೧೮೫೪ರಲ್ಲಿ ಕೆಂಪುಬಣ್ಣದ ಅಂಚೆ ಪೆಟ್ಟಿಗೆಗಳ ಸ್ಥಾಪನೆಯಾಯಿತು. ೧೮೫೬ ರಿಂದ ೧೯೨೮ರವರೆಗೆ ಬಳಸಲಾದ ಅಂಚೆಚೀಟಿಗಳನ್ನು ಇಂಗ್ಲೆಂಡ್ ದೇಶದಲ್ಲಿ ಮುದ್ರಿಸುತ್ತಿದ್ದರು. ಆಮೇಲೆ ಅಂಚೆಚೀಟಿಗಳ ಮುದ್ರಣವು ನಾಸಿಕ್ ಪಟ್ಟಣದ ಸರ್ಕಾರಿ ಮುದ್ರಣಾಲಯದಲ್ಲಿ ಮುಂದುವರೆಯಿತು. ಸ್ವತಂತ್ರಪೂರ್ವದಲ್ಲಿ ಬ್ರಿಟನ್ನಿನ ರಾಜರಾಣಿಯರು ಬದಲಾದಂತೆ ಭಾರತದ ಅಂಚೆಚೀಟಿಗಳ ಮೇಲೆ ಮುದ್ರಿತವಾದಂತಹ ಮುಖಚಿತ್ರಗಳೂ ಬದಲಾವಣೆ ಹೊಂದಿತು.

ಆಗಿನ ಭಾರತದ ಸಂಸ್ಥಾನಗಳ ರಾಜಮನೆತನಗಳವರೂ ತಮ್ಮ ಸಂಸ್ಥಾನಗಳಲ್ಲಿ ಅಂಚೆಚೀಟಿಗಳನ್ನು ಹೊರತರುವಲ್ಲಿ ಬ್ರಿಟಿಷ್ ಸರ್ಕಾರವನ್ನು ಅನುಸರಿಸಿದರು. ಹೈದರಾಬಾದ್ ನವಾಬನು ಹೊರತಂದ ಅಂಚೆಚೀಟಿ ಮೇಲೆ ಚಾರ್‌ಮಿನಾರ್ ಹಾಗೂ ಅಜಂತಾ ಗುಹೆ ಮುದ್ರಿತವಾಗಿದ್ದವು. ತಿರುವಾಂಕೂರು ಮಹಾರಾಜರು ಹೊರತಂದ ಅಂಚೆಚೀಟಿಗಳ ಮೇಲೆ ಶಂಖದ ಚಿತ್ರ ಮುದ್ರಿತವಾಗಿತ್ತು. ಮೈಸೂರು ಸಂಸ್ಥಾನ ೧೮೭೦ರಲ್ಲಿ ಗಂಡಭೇರುಂಡ ಪಕ್ಷಿಯ ಚಿತ್ರವಿರುವ ರೆವೆನ್ಯೂ ಸ್ಟಾಪೊಂದನ್ನು ಮುದ್ರಿಸಿದ್ದು ಅದರ ಮೇಲೆ ಕನ್ನಡದಲ್ಲಿ ಒಂದು ಆಣೆ ಎಂದು ಬರೆಯಲಾಗಿತ್ತು. ೧೮೬೬ನೇ ಇಸವಿಯ ಹುಣಸೂರಿನ ಅಂಚೆ ಮುದ್ರೆ ಲಭ್ಯವಾಗಿದ್ದು ಅದು ಸಂಪೂರ್ಣ ಕನ್ನಡದಲ್ಲಿದೆ. ಜಯಪುರ ಮಹಾರಾಜರು ೧೯೦೪ರಲ್ಲಿ ಬಿಡುಗಡೆ ಮಾಡಿದ ಅಂಚೆಚೀಟಿಯ ಮೇಲೆ ಸೂರ್ಯ ಭಗವಾನನ ಚಿತ್ರವನ್ನು ಮೂಡಿಸಿರುವರು.

೧೯೩೧ರಲ್ಲಿ ಹೊಸ ದೆಹಲಿಯ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಮೊದಲನೇ ಭಾರತೀಯ ಚಿತ್ರಾತ್ಮಕ ಸ್ಟಾಂಪುಗಳನ್ನು ಹೊರಡಿಸಲಾಯಿತು. ೧೯೩೭ರಲ್ಲಿ ಅಂಚೆಯನ್ನು ಒಯ್ಯುವ ವಿವಿಧ ಅಂಶಗಳನ್ನು ನಿರೂಪಿಸುವ ಚಿತ್ರಗಳನ್ನೊಳಗೊಂಡ ಸ್ಟಾಂಪುಗಳನ್ನು ಹೊರಡಿಸಲಾಯಿತು.

ಭಾರತ ೧೯೪೭ರಲ್ಲಿ ಸ್ವಾತಂತ್ರ ಪಡೆಯಿತು. ಅಂದಿನಿಂದ ಸ್ವತಂತ್ರ ಭಾರತೀಯರ ಜೀವನಕ್ಷೇತ್ರಗಳಿಗೆ ಮತ್ತು ಅಂತರರಾಷ್ಟ್ರೀಯ ಆಚಾರ, ವಿಚಾರ ಪ್ರಚಾರಗಳಿಗೆ ಸಂಬಂಧಪಟ್ಟಂತೆ ಅಂಚೆಚೀಟಿಗಳನ್ನು ಭಾರತದ ಸರ್ಕಾರ ಬಿಡುಗಡೆ ಮಾಡುತ್ತಿದೆ. ಪುರಾತನ ವಾಸ್ತುಶಿಲ್ಪ, ಸ್ವಾತಂತ್ರ್ಯವೀರರೂ, ಸಮಾಜೋದ್ಧಾರಕರು, ವಿದ್ಯಾ ಸಂಪನ್ನರೂ, ಸಸ್ಯ ಸಂಪತ್ತು, ಕವಿಗಳು, ಕಲಾವಿದರು, ಜಾನಪದ ಕಲೆ, ಗ್ರಾಮೀಣ ಜೀವನ ಮುಂತಾದ ಅಂಚೆಚೀಟಿಗಳ ಬಿಡುಗಡೆಯಾಗಿವೆ.

ಈ ಮೂಲಕ ಭಾರತದ ಇತಿಹಾಸ, ಸಂಸ್ಕೃತಿ, ಪರಂಪರೆ, ಸ್ನೇಹ ಸೌಹಾರ್ದ, ವಿಶ್ವಶಾಂತಿಯ ಸಂದೇಶಗಳನ್ನು ಅಂಚೆಚೀಟಿಗಳು ಪ್ರಗತಿಪರ ರೀತಿಯಲ್ಲಿ ಪ್ರತಿಬಿಂಬಿಸತೊಡಗಿವೆ.

★★★★

ಅಂಚೆಚೀಟಿ ಸಂಗ್ರಹ ಹವ್ಯಾಸ

ಸುಂದರ ಅಂಚೆಚೀಟಿಗಳನ್ನು ಸಂಗ್ರಹಿಸಬೇಕೆಂಬ ಹಂಬಲ ಹುಟ್ಟಿದ್ದು ೧೮೫೦ರಲ್ಲಿ ಇಂಗ್ಲೆಂಡಿನ ಯುವತಿಯೋರ್ವಳಿಗೆ. ತನ್ನ ಕೊಠಡಿಯನ್ನು ಅಲಂಕರಿಸಲು ''ಲಂಡನ್ ಟೈಮ್'' ಪತ್ರಿಕೆಯಲ್ಲಿ ಜಾಹಿರಾತು ನೀಡಿ ಹೆಚ್ಚು ಅಂಚೆಚೀಟಿಗಳನ್ನು ಕಳುಹಿಸುವಂತೆ ಓದುಗರಲ್ಲಿ ಮನವಿ ಮಾಡಿದ್ದಳು.

ಈ ಹಂಬಲ ಇಂದು ಪ್ರಬಲವಾಗಿ ಹೆಮ್ಮರವಾಗಿ ಬೆಳೆದು ನಿಂತಿದೆ. ಬಣ್ಣಬಣ್ಣದ ಸುಂದರ ಚಿತ್ರಗಳ ಅಂಚೆಚೀಟಿಗಳನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳೂ ಪ್ರಕಟಿಸುತ್ತವೆ. ಹಾಗೆ ಎಲ್ಲಾ ದೇಶಗಳಲ್ಲೂ ಅಂಚೆಚೀಟಿ ಸಂಗ್ರಹಕಾರರಿದ್ದಾರೆ. ಪ್ರಾರಂಭದಲ್ಲಿ ತಾರತಮ್ಯವಿಲ್ಲದೆ ಅವ್ಯವಸ್ಥಿತ ರೀತಿಯಲ್ಲಿ ಅಂಚೆಚೀಟಿಗಳನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಮುಂದೆ ಹೆಚ್ಚು ಲಕ್ಷ್ಯ ಮತ್ತು ವ್ಯವಸ್ಥಿತ ರೀತಿಯಲ್ಲಿ ಅಂಚೆಚೀಟಿಗಳ ಸಂಗ್ರಹಣೆ ಪ್ರಾರಂಭವಾಯಿತು. ಅನೇಕ ಮಂದಿ ಸಮಯ ಕಳೆಯಲು, ತಮಾಷೆಗಾಗಿ, ಜ್ಞಾನಾರ್ಜನೆಗಾಗಿ ಮತ್ತೆ ಕೆಲವರು ನಿಕ್ಷೇಪವೆಂದು ಅಂಚೆಚೀಟಿಗಳನ್ನು ಸಂಗ್ರಹಿಸುವ ಹವ್ಯಾಸದಲ್ಲಿ ತೊಡಗಿದರು.

ಅಂಚೆಚೀಟಿ ಸಂಗ್ರಹಣೆಯು ''ಫಿಲಾಟೆಲಿ'' ಎಂಬ ಗೌರವಯುತವಾದ ಹೆಸರನ್ನು ಪಡೆಯಿತು. ''ಫಿಲಾ'' ಎಂದರೆ ಆಸಕ್ತಿ ''ಅಟೆಲಿ'' ಎಂದರೆ ತೆರಿಗೆಯಿಂದ ವಿನಾಯಿತಿ ಎಂಬ ಗ್ರೀಕ್ ಪದಗಳ ಸಂಯೋಜನೆಯೆ ''ಫಿಲಾಟೆಲಿ''.

ಅಂಚೆಚೀಟಿ ಸಂಗ್ರಹಣೆಯು ಜಾಗತಿಕ ಹವ್ಯಾಸವಾಗಿದೆ. ಅಂಚೆಚೀಟಿಗಳು ಅಮೂಲ್ಯತೆಯನ್ನು ಮಾತ್ರವಲ್ಲದೆ ಅವುಗಳ ವಿನ್ಯಾಸ, ಅವು ಹೇಳುವ ಕಥೆ, ನೆನಪಿಗೆ ತರುವ ಸಂಗತಿಗಳು ಸಂದರ್ಭಗಳನ್ನು ಅರಿಯುವ ಕುತೂಹಲದಿಂದ ಸಂಗ್ರಹಿಸುತ್ತಾರೆ. ವಾಸ್ತವವಾಗಿ ಅಂಚೆಚೀಟಿಗಳು ಒಂದು ದೇಶದ ಪುರಾತನ ಸಂಪ್ರದಾಯ ಮತ್ತು ಸ್ವಭಾವವನ್ನು ವಿದೇಶದವರಿಗೆ ಪರಿಚಯ ಮಾಡಿಕೊಡುವ ತೆರೆದ ಕಿಟಕಿಗಳು. ಅವು ಜೀವನದ ಎಲ್ಲಾ ಅಂಶಗಳನ್ನೂ ಕೂಲಂಕಷವಾಗಿ ನಿರೂಪಿಸುತ್ತವೆ.

ಅಂಚೆಚೀಟಿ ಸಂಗ್ರಹಣೆಯಿಂದ ಅಪವ್ಯಯ ಆಗಬಹುದಾದ ಕಾಲ ಮತ್ತು ಕಾಸನ್ನು ಸದ್ವಿನಿಯೋಗ ಪಡಿಸಿಕೊಳ್ಳಬಹುದು. ಇವು ಸಾಮಾನ್ಯ ಜ್ಞಾನವನ್ನು ವೃದ್ಧಿಸಿ ಊಹಾಶಕ್ತಿಯನ್ನು ಅಧಿಕಗೊಳಿಸುವ ಮನರಂಜನಾ ಮಾಧ್ಯಮವೂ ಹೌದು.

ಅಂಚೆಚೀಟಿಗಳನ್ನು ಆಯಾ ದೇಶದ ರಾಯಭಾರಿಗಳೆಂದು ಕರೆಯುವುದು ಸಮಂಜಸವೇ ಆಗಿದೆ. ಒಂದು ರಾಷ್ಟ್ರದ ಇತಿಹಾಸ, ಕಲೆ, ಕಸುಬು ಮುನ್ನಡೆಗಳನ್ನು ಶಾಸ್ತ್ರೀಯವಾಗಿ ತಿಳಿಯಬಹುದು.

ಅಂಚೆಚೀಟಿ ಸಂಗ್ರಹಕಾರರಲ್ಲಿ ವಿಶಾಲ ಮನೋಭಾವನೆ ಏರ್ಪಟ್ಟು ಸ್ನೇಹ ಪೂರ್ಣ ಅದಲುಬದಲು ವ್ಯವಹಾರ ವಿನಿಮಯಗಳಿಗೆ ದಾರಿಯಾಗುತ್ತದೆ. ವಿಶ್ವದಾದ್ಯಂತವು ನಡೆಯುವ ಅಂಚೆಚೀಟಿ ಪ್ರದರ್ಶನಗಳ ಮೂಲಕವಾಗಿ ಸಂಗ್ರಹಕಾರರ ನಡುವೆ ಮಧುರ ಬಾಂಧವ್ಯ ಏರ್ಪಡುತ್ತದೆ.

ಅಂಚೆಚೀಟಿ ಬಿಡುಗಡೆ ಮತ್ತು ಪ್ರಚಾರಕ್ಕೆ ರಾಷ್ಟ್ರೀಯ ನಿರ್ಬಂಧಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ.

ಅಪರೂಪ ಅಮೂಲ್ಯವಾದ ಅಂಚೆಚೀಟಿಗಳ ಪತ್ತೆ ಮತ್ತು ಶೇಖರಣೆ ರೋಮಾಂಚಕಾರಿಯಾದ ಕಥೆ. ಇಂತಹ ಸಾಹಸಮಯವಾದ ವಿಷಯಗಳನ್ನು ತಿಳಿದಾಗ ಸ್ಫೂರ್ತಿ ಮತ್ತು ಉತ್ಸಾಹಗಳು ಮೂಡುತ್ತವೆ. ಸಂಗ್ರಹಕಾರರ ಸಂದೇಹಗಳು ಮತ್ತು ಅವುಗಳ ಪರಿಹಾರ ಒಳ್ಳೆಯ ಅನುಭವಗಳಾಗಬಹುದು ಮತ್ತು ವ್ಯಕ್ತಿತ್ವವನ್ನು ಹೆಚ್ಚಿಸಬಹುದು. ಅಪರೂಪವಾದ ಅಂಚೆಚೀಟಿಗಳ ಬೆಲೆಯು ಕೋಟ್ಯಾಂತರ ರೂಪಾಯಿ ಮೌಲ್ಯ ಮುಟ್ಟಿದೆ. ವ್ಯಾಪಾರ ಮನೋಭಾವವಿರುವ ಹೆಚ್ಚು ಲಾಭಪ್ರಿಯರು ಅಂಚೆಚೀಟಿಗಳನ್ನು ಸಂಗ್ರಹಿಸಿ ಅಥವಾ ಕೊಂಡುಕೊಂಡು ಮಾರುವ ಕಾರ್ಯವನ್ನು ಅನುವಂಶಿಕವಾಗಿ ದೀರ್ಘ ಕಾಲದಿಂದ ಬೆಳೆಸಿಕೊಂಡು ಮುಂದುವರೆಸಿಕೊಂಡು ಪಿತ್ರಾರ್ಜಿತ ಕಸುಬಾಗಿ ಮಾಡುತ್ತಾರೆ.

ವಿಶ್ವವ್ಯಾಪಿಯಾದ ಅಂಚೆಚೀಟಿಗಳ ವಿಷಯವನ್ನು ವಿವರವಾಗಿ ತಿಳಿಯಲು ಪ್ರಯತ್ನಿಸಿದಾಗ ಅವುಗಳಲ್ಲಿ ಅಡಗಿರುವ ಅಂತರಾರ್ಥ ಮಧುರ ಬಾಂಧವ್ಯಗಳು ಸ್ವಾನುಭವಕ್ಕೆ ಬರುತ್ತವೆ. ಅಂಚೆಚೀಟಿಗಳ ಅಧ್ಯಯನದಲ್ಲಿ ತೊಡಗಿದ ಉತ್ಸಾಹಿಗಳಿಗೆ ಇದು ಜ್ಞಾನ ಭಂಡಾರವೂ ಸಂಶೋಧನಾ ಗ್ರಂಥವೂ ಆಗಿರುತ್ತದೆ.

★★★★

ಅಂಚೆಚೀಟಿ ಸಂಗ್ರಹಿಸುವ ವಿಧಾನ

ಸಾಮಾನ್ಯವಾಗಿ ಯಾವುದನ್ನು ಸಂಗ್ರಹಿಸಬೇಕು ಮತ್ತು ಹೇಗೆ ಸಂಗ್ರಹಿಸಬೇಕು, ಇದು ಅಂಚೆಚೀಟಿ ಸಂಗ್ರಹಣೆಯಲ್ಲಿ ತೊಡಗಿರುವ ಎಲ್ಲಾ ಹೊಸಬರೂ ಪ್ರಾರಂಭದಲ್ಲಿ ಎದುರಿಸಬೇಕಾದ ಸಹಜ ಸಮಸ್ಯೆಗಳು. ಅಂಚೆಚೀಟಿ ಸಂಗ್ರಹಣೆಯ ಹವ್ಯಾಸ ಸಾರ್ವಜನಿಕರಲ್ಲಿ ಹೆಚ್ಚಿದಂತೆ, ತಮ್ಮ ಸಂಸ್ಕೃತಿ, ಪ್ರಕೃತಿ ಸೌಂದರ್ಯ, ಕ್ರೀಡೆ, ಕಲೆ, ಕೈಗಾರಿಕೆ ಮುಂತಾದ ವಿಚಾರಗಳು ಹಾಗೂ ಇತರ ವಿವಿಧ ಸಾಧನೆಗಳ ಪರಿಚಯಕ್ಕೆ ಅಂಚೆಚೀಟಿಗಳು ಉತ್ತಮ ಮಾಧ್ಯಮವೆಂಬುದನ್ನು ಜಗತ್ತಿನಾದ್ಯಂತ ಎಲ್ಲಾ ದೇಶಗಳೂ ಅರಿತುಕೊಂಡವು. ಸಾಮಾನ್ಯವಾಗಿ ಬಿಡುಗಡೆಯಾಗುವ ಅಂಚೆಚೀಟಿಗಳನ್ನು ಎರಡು ರೀತಿಯಾಗಿ ವರ್ಗೀಕರಿಸಬಹುದು. ಅಂಚೆ ರವಾನೆಗಾಗಿ ಕೆಲವಾರು ವರುಷ ಮೇಲಿಂದ ಮೇಲೆ ಬಿಡುಗಡೆಯಾಗಿ ನಿತ್ಯ ಉಪಯೋಗಿಸುವ ನಿಯತ ಅಂಚೆಚೀಟಿಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಜ್ಞಾಪಕಾರ್ಥವಾಗಿ ಬಿಡುಗಡೆಯಾಗುವ ಸ್ಮಾರಕ ಅಂಚೆಚೀಟಿಗಳು ಒಮ್ಮೆ ಬಿಡುಗಡೆಯಾದ ನಂತರ ಮತ್ತೆ ಬಿಡುಗಡೆಯಾಗುವುದಿಲ್ಲ.

ಪ್ರತಿ ದೇಶವೂ ವರ್ಷಕ್ಕೆ ಸುಮಾರು ೩೦ರಿಂದ ೫೦ ಹೊಸ ಹೊಸ ಅಂಚೆಚೀಟಿಗಳನ್ನು ಬಿಡುಗಡೆ ಮಾಡುತ್ತಾರೆ. ಅಂದರೆ ಜಗತ್ತಿನಾದ್ಯಂತ ವರ್ಷಕ್ಕೆ ಸುಮಾರು ೨೦,೦೦೦ ಅಂಚೆಚೀಟಿಗಳು ಬಿಡುಗಡೆಯಾಗುತ್ತವೆ ಎಂದು ಅಂದಾಜು ಮಾಡಬಹುದು. ಈಗ್ಗೆ ನೂರು ವರ್ಷಗಳ ಹಿಂದೆ ಸಂಗ್ರಹಕಾರನೊಬ್ಬನು ವಿಶ್ವದ ಎಲ್ಲಾ ಅಂಚೆಚೀಟಿಗಳನ್ನು ಸಂಪೂರ್ಣವಾಗಿ ಸಂಗ್ರಹಿಸುವುದು ಸಾಧ್ಯವಿತ್ತು. ಆದ್ದರಿಂದ ಬಿಡುಗಡೆಯಾದ ಎಲ್ಲಾ ಅಂಚೆಚೀಟಿಗಳನ್ನು ಸಂಗ್ರಹಿಸುವುದು ಅಸಾಧ್ಯ ಕಾರ್ಯ ವಾಗುತ್ತದೆ. ಆದುದರಿಂದ ತನಗೆ ಆಸಕ್ತಿ ಇರುವ ದೇಶದ ಅಂಚೆಚೀಟಿಗಳನ್ನು ಸಂಗ್ರಹಿಸುವುದು ಅಥವಾ ಯಾವುದಾದರೂ ವಿಷಯವನ್ನು ಆರಿಸಿಕೊಳ್ಳಬೇಕು. ಉದಾಹರಣೆಗೆ ವನ್ಯಮೃಗಗಳು, ಕ್ರೀಡೆಗಳು, ಪುಷ್ಪಗಳು, ಪಕ್ಷಿಗಳು, ವಿಮಾನಗಳು, ಬಾಹ್ಯಾಕಾಶ, ವ್ಯವಸಾಯ, ವಿಜ್ಞಾನ ಮುಂತಾದ ತಮಗೆ ಪ್ರಿಯವಾದ ಮತ್ತು ಸಾಧ್ಯವಾಗಬಹುದಾದ ಅಂಚೆಚೀಟಿಗಳನ್ನು ಸಂಗ್ರಹಕಾರರು ತಮ್ಮ ಇತಿ-ಮಿತಿಗಳನ್ನು ಅರಿತು ಸಂಗ್ರಹಿಸಬೇಕು. ಇದರಿಂದ ಉತ್ಸಾಹ ಕೆಡದಂತಾಗಿ ನೆರೆಹೊರೆ ಯವರಿಂದಲೂ ಉತ್ತೇಜನ ಮತ್ತು ಪ್ರೋತ್ಸಾಹ ಪಡೆಯಲು ಸಾಧ್ಯವಾಗುತ್ತದೆ.

ಅಗತ್ಯವಾದ ಅಂಚೆಚೀಟಿಗಳನ್ನು ಹಲವಾರು ವಿಧಾನಗಳಿಂದ ಸಂಗ್ರಹಿಸಬಹುದು. ಸಂಗ್ರಹಕಾರರು ಕೇವಲ ಸ್ಟಾಂಪುಗಳಿಗೆ ಸೀಮಿತವಾಗದೆ ಪ್ರಥಮ ದಿನದ ಲಕೋಟೆಗಳನ್ನು, ಕೆಲವರು ವಿಶೇಷ ಸಂದರ್ಭಗಳಲ್ಲಿ ವಿಶೇಷ ಮುದ್ರೆ ಒತ್ತಿರುವ ಲಕೋಟೆಗಳನ್ನು ಮತ್ತೆ ಕೆಲವರು ಹಳೆಯ ಅಂಚೆ ಮುದ್ರೆಗಳುಳ್ಳ ಪತ್ರಗಳನ್ನು, ಮ್ಯಾಕ್ಸಿಂ ಕಾರ್ಡುಗಳನ್ನು ಹೀಗೆ ನಾನಾವಿಧವಾದ ವಸ್ತುಗಳನ್ನು ಸಂಗ್ರಹಿಸುವ ಪರಿಪಾಠವಿದೆ. ಭಾರತೀಯ ಅಂಚೆಚೀಟಿಗಳ ವಿಷಯದಲ್ಲಿ ಹೇಳುವುದಾದರೆ ಸ್ವಾತಂತ್ರ ಪೂರ್ವ ಹಾಗೂ ಸ್ವಾತಂತ್ರ ನಂತರದ ಚೀಟಿಗಳನ್ನು ಸಂಗ್ರಹಿಸಬಹುದು. ನಿರ್ದಿಷ್ಟ ವಿಷಯದ ಮೇಲಿನ ಅಂಚೆಚೀಟಿಗಳನ್ನು ಸಂಗ್ರಹಿಸಬಹುದು. ಸಂಗ್ರಹಕಾರರಿಗೆ ಪ್ರಾರಂಭದಿಂದಲೇ ಮಾಹಿತಿ ಅಥವಾ ಹಿರಿಯ ಸಂಗ್ರಹಕಾರರ ಮಾರ್ಗದರ್ಶನ ಇಲ್ಲದೆ ಏನೇನೋ ಸಂಗ್ರಹಿಸುತ್ತಾ ಹೋದರೆ ಆ ಸಂಗ್ರಹ ಪರಿಗಣನೆಗೆ ಬಾರದೆ ಕುಪ್ಪೆಯಾಗಿ ನಿರುಪಯೋಗಿಯಾಗುವ ಸಾಧ್ಯತೆ ಇದೆ. ಅಲ್ಲದೆ ನಿಮ್ಮ ಉತ್ಸಾಹವನ್ನೇ ಕುಂದಿಸುತ್ತದೆ.

೧. ಅಂಚೆ ರವಾನೆಗೆ ಬಳಸಲಾದ ಅಂಚೆಚೀಟಿಗಳನ್ನು ಕ್ರೋಡೀಕರಿಸುವುದು

೨. ಅಂಚೆ ಕಛೇರಿಗಳಿಂದ ಹೊಸ ಹೊಸ ಅಂಚೆಚೀಟಿಗಳನ್ನು ಕೊಂಡು ಕೊಳ್ಳುವುದು

೩. ಸ್ನೇಹಿತರಿಂದ, ಹಿರಿಯರಿಂದ, ಬಂಧು-ಬಾಂಧವರಿಂದ ವಿನಯ ವಿಶ್ವಾಸಗಳಿಂದ ಪಡೆಯುವುದು

೪. ಅಂಚೆಚೀಟಿ ಸಂಗ್ರಹಕಾರರ ಸಂಘದಲ್ಲಿ ಸದಸ್ಯನಾಗಿ ಸಭೆ ಸಮಾರಂಭ ಗಳಲ್ಲಿ ಕಲೆತು ಬೆರೆತಾಗ ವಿನಿಮಯ-ಕ್ರಯ-ವಿಕ್ರಯಗಳಿಂದ ಪಡೆಯುವುದು

೫. ಸ್ವದೇಶ ಮತ್ತು ವಿದೇಶಗಳಲ್ಲಿರುವ ಪತ್ರ-ಮಿತ್ರರ ಮುಖಾಂತರ ಸಂಗ್ರಹಿಸುವುದು

೬. ವೃತ್ತಿನಿರತ ವ್ಯಾಪಾರಿಗಳಿಂದ ಕ್ರಯಕ್ಕೆ ಅಂಚೆಚೀಟಿಗಳನ್ನು ಕೊಂಡು ಕೊಳ್ಳುವುದು

ಸಾಕಷ್ಟು ಸಂಖ್ಯೆಯಲ್ಲಿ ನಾನಾ ಮೂಲಗಳಿಂದ ಪಡೆದುಕೊಂಡ ಅಂಚೆಚೀಟಿಗಳನ್ನು ಕ್ರಮ ಅಧ್ಯಯನ ಮಾಡಿ, ವಿಂಗಡಿಸಿಕೊಂಡು ಆಕರ್ಷಕವಾಗಿ ಜೋಡಿಸುವುದು ಒಂದು ಕಲೆ. ಈ ಕಲೆಯನ್ನು ಅಭ್ಯಾಸ ಬಲದಿಂದಲೇ ರೂಢಿಸಿ ಕೊಳ್ಳಬೇಕು. ಆಗಲೇ ಇದೊಂದು ಲಲಿತಕಲೆಯಾಗಿ ಉನ್ನತ ಮಟ್ಟದ ಪ್ರದರ್ಶನ ವಾಗಬಹುದು ಮತ್ತು ಪ್ರಶಸ್ತಿ ಪುರಸ್ಕಾರಗಳನ್ನು ಗಳಿಸಬಹುದು.

•★★★★

ಅಗತ್ಯ ಉಪಕರಣಗಳು - ಕಾರ್ಯ ವಿಧಾನ

ಸಂಗ್ರಹಿಸಿದ ಅಂಚೆಚೀಟಿಗಳ ರೂಪರೇಷೆಗಳು ಕೆಡದಂತೆ ಎಚ್ಚರಿಕೆ ವಹಿಸಬೇಕು. ಅಂಚೆಚೀಟಿಗಳನ್ನು ಹಚ್ಚುವಾಗ ಅಂಟು ಅಥವಾ ಟೇಪನ್ನು ಎಂದೂ ಬಳಸಬಾರದು. ಅವು ಅಂಚೆಚೀಟಿಗಳಿಗೆ ಖಾಯಂ ಜಖಂ ಮಾಡುತ್ತವೆ. ನಿಮಗೆ ಅಗತ್ಯವಾಗಿರುವುದು ತಿರುಗಣೆಗಳು (Hinges) ಅಂಚೆಚೀಟಿ ತಿರುಗಣೆಯನ್ನು ಆಯಾಕಾರದ ತೆಳುವಾದ ಕಾಗದದಿಂದ ತಯಾರಿಸಲಾಗಿದೆ. ಅಂಚೆಚೀಟಿಗಳಿಗೆ ಜಖಂ ಆಗದ ರೀತಿಯಲ್ಲಿ ಆಲ್ಬಂನಿಂದ ಸುಲಭವಾಗಿ ಬೇರ್ಪಡಿಸಬಹುದು. ಒಂದು ಪಾರ್ಶ್ವದಲ್ಲಿ ಚಪ್ಪಟೆಯ ಎಳೆಯಲ್ಲಿ ಗೋಂದನ್ನು ಹಚ್ಚಿರುವ ತಿರುಗಣೆಗಳು ದೊರೆಯುತ್ತವೆ. ಅವುಗಳನ್ನು ಹಚ್ಚಿರುವ ತಿರುಗಣೆಗಳು ದೊರೆಯುತ್ತವೆ. ಅವುಗಳನ್ನು ಉಪಯೋಗಿಸುವಾಗ ಉಂಟಾದ ಅಂಟು ಪಾರ್ಶ್ವವು ಮೇಲ್ಭಾಗದಲ್ಲಿ ಇರುವಂತೆಯೇ ಮಡಚಬೇಕು. ತದನಂತರ ಆಲ್ಬಂ ಮೇಲೆ ಅಂಟಿಸಬೇಕು.

ಅಂಚೆಚೀಟಿಗಳು ಲಕೋಟೆಯ ಮೇಲೆ ಅಂಟಿಸಲ್ಪಟ್ಟವಾಗಿದ್ದರೆ ಅಷ್ಟು ಭಾಗವನ್ನು ಕತ್ತರಿಸಿ ಶುದ್ಧವಾದ ತಣ್ಣೀರಿನಲ್ಲಿ ಸ್ವಲ್ಪ ಹೊತ್ತು ನೆನೆಸಿಡಬೇಕು ತದನಂತರವಾಗಿ ಅಂಚೆಚೀಟಿಯ ಹಿಂಬದಿಯಲ್ಲಿರುವ ಅಂಟು ಕರಗಿ ಮೃದುವಾಗಿ ಕಾಗದ ಮತ್ತು ಚೀಟಿ ಬೇರೆಬೇರೆಯಾಗುತ್ತದೆ. ಹೀಗೆ ಪ್ರತ್ಯೇಕಿಸಿದ ಅಂಚೆಚೀಟಿ ಗಳನ್ನು ಮೇಲುಮುಖವಾಗಿ ನೀರು ಹೀರುವ ಕಾಗದದ ಅಥವಾ ಬಟ್ಟೆಯ ಮೇಲೆ ಇರಿಸಿ ಒಣಗಲು ಬಿಡಬೇಕು. ಒಣಗಿರುವ ಅಂಚೆಚೀಟಿಗಳನ್ನು ಭಾರವಾದ ಪುಸ್ತಕದ ಹಾಳೆಗಳ ಮಧ್ಯೆ ಕೆಲವು ಗಂಟೆ ಇರಿಸುವುದರ ಮುಖಾಂತರ ಅಂಚೆಚೀಟಿಗಳು ಚಪ್ಪಟೆಯಾಗಿ ಉತ್ತಮ ಸ್ಥಿತಿಗೆ ಬರುತ್ತವೆ.


ಉಪಕರಣಗಳು

೧. ಉಪಯೋಗಿಸಿದ ಅಂಚೆಚೀಟಿಗಳನ್ನು ನೆನೆಸಿಡಲು ಸಣ್ಣ ಪ್ಲಾಸ್ಟಿಕ್ ಅಥವಾ ಗಾಜಿನ ಬೋಗುಣಿ


೨. ಬ್ಲಾಟಿಂಗ್ ಕಾಗದ


೩. ಚಿಕ್ಕ ಇಕ್ಕಳಗಳು (ಟ್ವೀಜರ್)

೪. ಒಂದು ಸಂಗ್ರಹ ಪುಸ್ತಕ (ಸ್ಟಾಕ್ ಬುಕ್)



ತಿರುಗಣಿ ಮಡಚುವುದು









ಅಂಚೆ ಚೀಟಿಯನ್ನು ಹಾಳೆಗೆ ಅಂಟಿಸುವ
ವಿಧಾನ







ಅಂಚೆಚೀಟಿ ಪುಟದ ಮೇಲೆ ಹಚ್ಚುವುದು



ನೀರಿನಲ್ಲಿ ನೆನೆಸಿದ ಕಾಗದದಿಂದ ಅಂಚೆಚೀಟಿ ಬೇರ್ಪಡಿಸುವುದು

೫. ಒಂದು ಸಂಪುಟ (ಆಲ್ಬಂ)

೬. ಪಾರದರ್ಶಕ (ಹಿಂಜು) ಚೀಟಿಗಳು

೭. ಭೂತಗನ್ನಡಿ - ಹರಿತವಾದ ಕತ್ತರಿ

೮. ಕಪ್ಪು ಶಾಯಿ - ಹಾಗೂ ಬರೆಯುವ ಸಾಧನಗಳು

೯. ಐ.ವಿ.ಸಿ. ಪ್ಲಾಸ್ಟಿಕ್ ಚೀಲಗಳು

ಇವುಗಳನ್ನು ಸರಿಯಾದ ಕ್ರಮದಲ್ಲಿ ಉಪಯೋಗಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಅಂಚೆಚೀಟಿಗಳಿಗೆ ಸಂಬಂಧಪಟ್ಟ ವಿಶ್ವಕೋಶವನ್ನು ಸ್ನೇಹಿತರಿಂದ ಅಥವಾ ಸಂಘಸಂಸ್ಥೆಯಿಂದ ಅಥವಾ ಅಂಚೆಚೀಟಿ ಸಂಗ್ರಹಕಾರರ ಬಳಗದಿಂದ ಎರವಲು ಪಡೆದಾದರೂ ವಿಷಯಗಳನ್ನು ಸಂಗ್ರಹಿಸಿ ಮುಂದುವರೆಸಬೇಕು.

ಒಂದು ಅಂಚೆಚೀಟಿಯ ಕ್ಯಾಟಲಾಗ್ ಹೊಂದಿರುವುದರಿಂದ ನಿಮ್ಮ ಸಂಗ್ರಹಣೆ ಪ್ರಾರಂಭವಾಗಲಿ. ಇದರ ಜೊತೆಗೆ ಅನೇಕ ಸಾಹಿತ್ಯ ಸಾಮಗ್ರಿಗಳೂ, ನಿಯತಕಾಲಿಕೆಗಳೂ ದೊರೆಯುತ್ತವೆ. ಸಂಗ್ರಹಕಾರರ ಸಂಘದಲ್ಲಿಯೂ ಇದು ಓದಲು ದೊರೆಯಬಹುದು. ಜಿಲ್ಲಾ ಮತ್ತು ರಾಜ್ಯಮಟ್ಟದ ಅಂಚೆಚೀಟಿ ಪ್ರದರ್ಶನಗಳು ಏರ್ಪಟ್ಟಾಗ ಅವಶ್ಯವಾಗಿ ಭೇಟಿ ನೀಡಿ. ಪ್ರದರ್ಶನದಲ್ಲಿ ಸುಲಭವಾಗಿ ಮಾರ್ಗದರ್ಶನ ಸಿಕ್ಕುವುದು ಹಾಗೂ ಹಲವು ಅಪರೂಪದ ಅಂಚೆಚೀಟಿಗಳು ಮಾರಾಟಕ್ಕೂ ಸಹ ಸಿಗಬಹುದು. ನಿಮಗೆ ಬೇಕಾದ ಅಂಚೆಚೀಟಿಗಳ ಪಟ್ಟಿಯನ್ನು ಯಾವಾಗಲೂ ಇಟ್ಟುಕೊಳ್ಳಿರಿ. ಪಟ್ಟಿಯನ್ನು ಪರಿಶೀಲಿಸಿಕೊಂಡು ನಿಮ್ಮಲ್ಲಿರುವ ಸಂಗ್ರಹದ ಒಂದು ಸೂಚಿಯನ್ನೂ ಸಹ ತಯಾರು ಮಾಡಿರಿ.

ಸಾಮಾನ್ಯವಾಗಿ ಮೂರು ವಿಧದ ಆಲ್ಬಂ ಹಾಳೆಗಳು ದೊರೆಯುತ್ತವೆ.

೧. ೨೨ ಸೆಂ X ೨೯ ಸೆಂ. ಅಳತೆಯ ನಿರ್ದಿಷ್ಟ ಗಾತ್ರ

೨. ೨೯ ಸೆಂ X ೨೯ ಸೆಂ. ಅಳತೆಯ ಚೌಕಾಕೃತಿ

೩. ೨೯ ಸೆಂ X ೩೯ ಸೆಂ. ಅಳತೆಯ ದೊಡ್ಡಗಾತ್ರ

ಮೊದಲನೆಯ ವಿಧದ ಆಲ್ಬಂ ಯಾವಾಗಲೂ ಉತ್ತಮ.

ಪ್ರತಿಯೊಂದು ಹಾಳೆಯಲ್ಲಿಯೂ ಆರರಿಂದ ಎಂಟು ಅಂಚೆಚೀಟಿಗಳಿಗಿಂತ ಹೆಚ್ಚು ಇರದಂತೆ ನೋಡಿಕೊಳ್ಳಬೇಕು.

ಅಂಚೆಚೀಟಿಯ ಕಾಗದವು ಸಾಧಾರಣವೆ ಅಥವಾ ಜಲಚಿಹ್ನೆಯಿದೆಯೆ ಎಂದು ತಿಳಿಯಿರಿ.

★★★★

ಅಂಚೆಚೀಟಿಗಳ ಜೋಡಣೆ

ಸಂಗ್ರಹಿಸಿದ ಅಂಚೆಚೀಟಿಗಳ ವಿಷಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಬಿಡುಗಡೆ ಮಾಡಿದ ದೇಶ, ಪ್ರಕಟಿತ ದಿನಾಂಕ ಹಾಗೂ ಸಂದರ್ಭಗಳ ವಿವರಗಳನ್ನು ತಿಳಿದುಕೊಂಡಿರಬೇಕು. ಅನಂತರ ಕಲಾತ್ಮಕವಾದ ವಿನ್ಯಾಸವನ್ನು ರಚಿಸಿಕೊಂಡು ವಿಂಗಡಿಸಿದ ಅಂಚೆಚೀಟಿಗಳನ್ನು ನಿಗದಿಯಾಗಿರುವ ೨೨ x ೨೯ ಸೆಂ.ಮೀ. ಉದ್ದ - ಅಗಲಗಳುಳ್ಳ ಮಂದವಾದ ಬಿಳಿ ಬಣ್ಣದ ಹಾಳೆಗಳಲ್ಲಿ ೫ ರಿಂದ ೮ ಅಂಚೆಚೀಟಿಗಳನ್ನು ಅಳವಡಿಸಬಹುದು. ಜೋಡಿಸಿದ ಅಂಚೆಚೀಟಿಯ ಸುತ್ತಲೂ ತೆಳುವಾದ ಗೆರೆಗಳಿಂದ ಚಿತ್ರಿಸಬಹುದು. ಸಾಕಷ್ಟು ಕಡಿಮೆ ಪದಗಳನ್ನು ಉಪಯೋಗಿಸಿಕೊಂಡು ವಿವರಗಳನ್ನು ಬರೆಯಬೇಕು. ಪೂರ್ಣ ಸಂಗ್ರಹಣವು ಕಾಲಾನುಕ್ರಮವಾಗಿ, ಭೌಗೋಳಿಕವಾಗಿ ಅಥವಾ ವಿಷಯಾನುಸಾರವಾಗಿ, ಅಕ್ಷರಾನುಸಾರವಾಗಿ ಸಂಖ್ಯಾನುಸಾರವಾಗಿ ಕೂಲಂಕಷವಾಗಿ ಕುಶಲಮತಿಯಿಂದ ನಾನಾರೀತಿಗಳಲ್ಲಿ ಜೋಡಿಸಿ ವೀಕ್ಷಕರಿಗೆ ಕಥೆ ಅಥವಾ ಪ್ರೇಕ್ಷಣೀಯ ಪ್ರವಾಸದಂತೆ ಇರಬೇಕು.

ರೀತಿ ನೀತಿಗಳನ್ನು ಅನುಸರಿಸಿ ಜೋಡಿಸಿದ ಅಂಚೆಚೀಟಿಗಳು ಪ್ರೇಕ್ಷಕರ ಮತ್ತು ಪರೀಕ್ಷಕರ ಕಣ್ಣು ಮನಸ್ಸುಗಳನ್ನು ಅಧಿಕ ಸಂತೋಷಪಡಿಸುತ್ತದೆ.

ಮುಂದಾಲೋಚನೆ ಇಲ್ಲದೆ ಆಕರ್ಷಣೆಯನ್ನು ಹೆಚ್ಚಿಸುವ ಸಂಭ್ರಮದಿಂದ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಜೋಡಿಸಿ ಕಿತ್ತು ಮತ್ತೆ ಅಂಟಿಸುವುದರಿಂದ ಅಂಚೆಚೀಟಿಗಳು ವಿರೂಪಗೊಳ್ಳಬಹುದು ಮತ್ತು ಮರುಉಪಯೋಗಕ್ಕೆ ಬಾರದೆ ಇರಬಹುದು.

ಇದರಿಂದ ನೋಟಕರಿಗೆ ನೀರಸವಾಗಿ ಕಂಡು ಬಂದರೆ ಸಂಗ್ರಹಕಾರನ ಆಸಕ್ತಿಗೂ ಕುಂದು ಬರುತ್ತದೆ. ಆದ್ದರಿಂದ ವಿಧಿವಿಧಾನಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿಕೊಂಡು ಅನುಸರಿಸಿ ಮುನ್ನಡೆಯಬೇಕು.

ಈ ಬಗ್ಗೆ ಯಾವುದೇ ಸಂಶಯ ಸಮಸ್ಯೆಗಳು ಕಂಡುಬಂದಾಗ ಹಿರಿಯ ಅನುಭವಿ ಸಂಗ್ರಹಕಾರರನ್ನು ಕಂಡು ವಿನಯ ವಿಶ್ವಾಸಗಳಿಂದ ಸಮಾಲೋಚನೆ ನಡೆಸಿ ಸಂದೇಹಗಳನ್ನು ಪರಿಹರಿಸಿಕೊಳ್ಳುವುದು ಯುಕ್ತ.

ಜೋಡಿಸಿದ ಅಂಚೆಚೀಟಿಗಳು ಕಾಲಕ್ರಮೇಣ ಹಾಳಾಗದಂತೆ ಎಚ್ಚರಿಕೆಯಿಂದ

ರಕ್ಷಿಸಬೇಕು. ಧೂಳು ಅಥವಾ ಹುಳುಹುಪ್ಪಟೆಗಳಿಂದ ಹಾನಿಯಾಗದ ಮುಂಜಾಗ್ರತೆ ವಹಿಸಬೇಕು. ಇದಕ್ಕಾಗಿ ಪಾರದರ್ಶಕ ಲಕೋಟೆಗಳಲ್ಲಿ ಇಡಬೇಕು.

ಸಂಕ್ಷಿಪ್ತ ವಿವರಣೆಯನ್ನು ಬರೆಯುವಾಗ ಈ ಕೆಳಗಿನ ವಿಷಯಗಳು ನೆನಪಿನಲ್ಲಿ ಇರಲಿ.

೧. ಅಂಚೆಚೀಟಿ ಪ್ರಕಟಿಸಿದ ದೇಶದ ಹೆಸರು

೨. ಅಂಚೆಚೀಟಿ ಪ್ರಕಟವಾದ ದಿನಾಂಕ

೩. ಯಾವ ವಿಷಯದ ಬಗ್ಗೆ ಸ್ಮರಿಸಿ ಬಿಡುಗಡೆಯಾಗಿದೆ

೪. ಅಂಚೆಚೀಟಿಯ ಪ್ರಾಮುಖ್ಯತೆ ಮತ್ತು ವಿಶೇಷತೆ ಸಂಕ್ಷಿಪ್ತ ವಿವರದೊಂದಿಗೆ

೫. ಒಂದೇ ದೇಶದ ಸಂಗ್ರಹವಾದರೆ ಹೆಸರನ್ನು ಬರೆಯುವ ಅವಶ್ಯಕತೆಯಿಲ್ಲ

೬. ವಿಷಯಾನುಸಾರವಾದ ಸಂಗ್ರಹಣೆಯಾದರೆ, ಪ್ರತಿ ಹಾಳೆಯಲ್ಲೂ ವಿಷಯವನ್ನು ಬರೆಯುವಂತ ಅಗತ್ಯವಿಲ್ಲ. ಉಪವಿಷಯವಿದ್ದರೆ ನಮೂದಿಸಬಹುದು

೭. ವಿಷಯಾನುಸಾರವಾದ ಸಂಗ್ರಹಣೆಯನ್ನು ಪ್ರದರ್ಶನ ಮಾಡುವಾಗ ಬರವಣಿಗೆ ಹಾಗೂ ಸಂಗ್ರಹಕ್ರಮ ಒಂದು ಕಥೆ ಅಥವಾ ಚಲನಚಿತ್ರದಂತೆ ಕಾಲಾನುಕ್ರಮವಾಗಿ ಇರಲಿ.

೮. ಉತ್ತಮ ಪದ್ಧತಿ ಎಂದರೆ ಮೊದಲ ಹಾಳೆಯಲ್ಲಿ ಸಂಕ್ಷಿಪ್ತ ವಿವರಣೆ ನೀಡುವುದು ಅನಂತರದ ಹಾಳೆಗಳನ್ನು ಅದಕ್ಕೆ ಅನುಸಾರವಾಗಿ ಜೋಡಿಸುವುದು.

೯. ವಿವರಣೆ ಅತ್ಯಂತ ಸಂಕ್ಷಿಪ್ತವಾಗಿರಲಿ ಹಾಗೂ ಪೂರ್ಣವಾಗಿರಲಿ. ಅದರಲ್ಲೇ ಪ್ರದರ್ಶನದ ಅಚ್ಚುಕಟ್ಟು ಅಡಗಿರುವುದು.

★★★★

ಅಂಚೆಚೀಟಿ ಪ್ರದರ್ಶನ

ಅಂಚೆಚೀಟಿಗಳನ್ನು ಸಂಗ್ರಹಿಸಿ ಶೇಖರಿಸಿರುವವರು ತಮ್ಮ ತಮ್ಮ ಅಂಚೆಚೀಟಿಗಳನ್ನು ಬೇರೆಯವರಿಗೆ ನೋಡಿಸುವುದಕ್ಕೂ ಇತರರಲ್ಲಿರುವ ವಿಶೇಷ ವಿವಿಧ ಅಂಚೆಚೀಟಿಗಳನ್ನು ನೋಡುವುದಕ್ಕೂ ಪ್ರದರ್ಶನಗಳಿಂದ ಅನುಕೂಲವಾಗಿರುತ್ತದೆ. ಈ ಪ್ರದರ್ಶನಗಳಲ್ಲಿ ವಿವಿಧ ತರಗತಿಗಳಾಗಿ ವಿಭಜಿಸಿ ಜೋಡಿಸಿ ತೋರಿಸುತ್ತಾರೆ. ಅಂತರರಾಷ್ಟ್ರೀಯ ಪ್ರದರ್ಶನಗಳನ್ನು ಏರ್ಪಡಿಸುವಾಗ ಉತ್ತಮ ಸಂಗ್ರಹಗಳಿಗೆ ವಿಶೇಷ ಬಹುಮಾನ, ಪ್ರಶಸ್ತಿ, ಪುರಸ್ಕಾರಗಳು ದೊರೆಯುತ್ತದೆ.

ಸಂಗ್ರಹಿಸಿ ಶೇಖರಿಸಿರುವ ಅಂಚೆಚೀಟಿಗಳ ಮಿಶ್ರರಾಶಿಯಿಂದ ಬೇಕಾಗಿರುವ ಬೇಡವಾಗಿರುವ ಪಟ್ಟಿಮಾಡಿರಿ. ಅನಂತರ ಅವುಗಳನ್ನು ಕಾಲಾನುಕ್ರಮವಾಗಿ ಅಥವಾ ವಿಷಯಾನುಕ್ರಮವಾಗಿ ಜೋಡಿಸಿರಿ. ಜೋಡಿಸುವಾಗ ಶಿಫಾರಸು ಮಾಡಿದ ಆಲ್ಬಮನ್ನು ಮಾತ್ರ ಉಪಯೋಗಿಸಿ. ಬಣ್ಣದ ಹಾಳೆಗಳನ್ನು ಉಪಯೋಗಿಸಲೇ ಬಾರದು. ಅಂಚೆ ಸಾಮಗ್ರಿಗಳನ್ನು ಪ್ರದರ್ಶಿಸುವಾಗ ಕೀಲು (Hinges)ಗಳನ್ನು ಉಪಯೋಗಿಸದೆ ಫೋಟೋ ಕಾರ್ನರ್‌ಗಳನ್ನು ಉಪಯೋಗಿಸಬೇಕು.

ಅಂಚೆಚೀಟಿಗಳನ್ನು ಮೌಂಟಿಂಗ್ ಮಾಡುವಾಗ ಅನುಭವಸ್ಥರಾದ ಹಿರಿಯ ಸಂಗ್ರಹಕಾರರಿಂದ ಮಾರ್ಗದರ್ಶನ ಪಡೆಯಬೇಕು. ಹಾಳೆಗಳಲ್ಲಿ ಅಂಚೆಚೀಟಿಗಳನ್ನು ಕೀಲಿನ ಸಹಾಯದಿಂದ ಅಂಟಿಸುವಾಗ ಅಗತ್ಯವಾದರೆ ಅದರ ಚಿಹ್ನೆಯನ್ನು ಪರೀಕ್ಷಿಸಲು ಅನುಕೂಲವಾಗುವಂತೆ ಅಂಟಿಸಬೇಕು. ಪ್ರದರ್ಶನದಲ್ಲಿ ಸಂಗ್ರಹವನ್ನು ವೀಕ್ಷಿಸುವ ಪ್ರೇಕ್ಷಕರಿಗೆ ನೀವು ಹೇಳಲಿರುವ ಸಂದೇಶವು ಮುಟ್ಟಬೇಕು. ಪ್ರದರ್ಶನವನ್ನು ಜಯಪ್ರದವನ್ನಾಗಿಸಲು ಇಂತಹ ವ್ಯವಸ್ಥೆ ಸರಿಯಾದುದು. ಯಾವ ಪ್ರದರ್ಶಕ ವಸ್ತುವೇ ಆಗಿರಲಿ ಅದರ ಬಗ್ಗೆ ಏನಾದರೂ ಹೇಳುವುದು ಇದ್ದೇ ಇರುತ್ತದೆ. ಇಂತಹ ಸಂಕ್ಷಿಪ್ತ ವಿವರಣೆಗಳು ಪ್ರದರ್ಶನವು ಇನ್ನಷ್ಟು ಸುಂದರವಾಗಿಯೂ, ಅರ್ಥಪೂರ್ಣವೂ ಆಗುವಂತೆ ಮಾಡುತ್ತದೆ.

ಸಂಕ್ಷಿಪ್ತ ವಿವರಣೆ ಮಾಡುವಾಗ ಬರವಣಿಗೆಯು ನಿಮ್ಮದೇ ಕೈಬರಹದಲ್ಲಿರಲಿ ಅಥವಾ ಕೈಬೆರಳಚ್ಚು ಉಪಯೋಗಿಸಿರಿ.

ಸಂಕ್ಷಿಪ್ತ ವಿವರಣೆಯನ್ನು ಬರೆಯುವಾಗ ಈ ಕೆಳಗಿನ ವಿಷಯಗಳು ನೆನಪಿರಲಿ.

೧. ಪ್ರಕಟಿಸಿದ ದೇಶದ ಹೆಸರು

೨. ಪ್ರಕಟವಾದ ದಿನಾಂಕ

೩. ಯಾವ ವಿಷಯದ ಬಗ್ಗೆ ಸ್ಮರಿಸಿ ಅಂಚೆಚೀಟಿಯನ್ನು ಬಿಡುಗಡೆ ಮಾಡಲಾಗಿದೆ

೪. ಅಂಚೆಚೀಟಿಯ ವಿಶೇಷತೆ, ಸಂಕ್ಷಿಪ್ತ ವಿವರದೊಂದಿಗೆ

೫. ಒಂದೇ ದೇಶಕ್ಕೆ ಸಂಬಂಧಪಟ್ಟ ಸಂಗ್ರಹವಾಗಿದ್ದರೆ ಹೆಸರು ಬರೆಯುವ ಅಗತ್ಯವಿಲ್ಲ

೬. ವಿಷಯಾನುಸಾರವಾದ ಸಂಗ್ರಹವಾದರೆ ಪ್ರತಿ ಹಾಳೆಯಲ್ಲೂ ವಿಷಯವನ್ನು ಬರೆಯುವ ಅಗತ್ಯವಿಲ್ಲ. ಉಪವಿಷಯವಿದ್ದರೆ ನಮೂದಿಸಬಹುದು

೭. ವಿಷಯಾನುಸಾರವಾದ ಸಂಗ್ರಹವಾದರೆ ಪ್ರದರ್ಶನ ಮಾಡುವಾಗ ಬರವಣಿಗೆ ಹಾಗೂ ಸಂಗ್ರಹದ ಕ್ರಮವು ಒಂದು ಕಥೆ ಅಥವಾ ಚಲನಚಿತ್ರದಂತೆ ಭಾಸವಾಗುವಂತಿರಲಿ

೮. ಉತ್ತಮ ಪದ್ಧತಿ ಎಂದರೆ ಮೊದಲ ಹಾಳೆಯಲ್ಲಿ ಸಂಕ್ಷಿಪ್ತ ವಿವರಣೆ ನೀಡುವುದು ಹಾಗೂ ನಂತರದ ಹಾಳೆಗಳನ್ನು ಅದಕ್ಕೆ ಅನುಸಾರವಾಗಿ ಉತ್ತಮ ರೀತಿಯಲ್ಲಿ ಜೋಡಿಸುವುದು

೯. ವಿವರಣೆ ಅತ್ಯಂತ ಸಂಕ್ಷಿಪ್ತವಾಗಿರಲಿ ಹಾಗೂ ಸಂಪೂರ್ಣವಾಗಿರಲಿ ಅದರಲ್ಲೇ ಪ್ರದರ್ಶನದ ಅಚ್ಚುಕಟ್ಟು ಅಡಗಿರುವುದು.

ಪ್ರದರ್ಶನದಲ್ಲಿ ಭಾಗವಹಿಸಲು ಈ ಕೆಳಗಿನ ವಿಷಯಗಳಿಗೆ ಗಮನ ಕೊಡಬೇಕು.

೧. ನೀವು ಯಾವ ವಿಷಯದ ಮೇಲೆ ಸಂಗ್ರಹಿಸಿರುವಿರೋ ಅದು ವೀಕ್ಷಕರಿಗೆ ಸುಲಭವಾಗಿ ತಿಳಿಯಲಿ

೨. ತಲೆಬರಹ ಹಾಗೂ ಸಂಕ್ಷಿಪ್ತ ವಿವರಣೆ ಇರಲಿ

೩. ಪ್ರದರ್ಶಿತ ವಸ್ತು ತನ್ನ ಮೂಲರೂಪದಲ್ಲಿಯೇ ಇರಲಿ

೪. ಅಂಚೆ ರದ್ದತಿಗಳು ಸುಂದರವಾಗಿರಲಿ

೫. ಆರಿಸಿದ ವಿಷಯವು ಯಾವುದಾದರೂ ಒಂದು ನಿರ್ದಿಷ್ಟ ಹಾಗೂ ಆಕರ್ಷಕ ವಿಷಯವಾಗಿರಲಿ, ನಿರ್ದಿಷ್ಟ ಅವಧಿಯದಿರಲಿ

೬. ಸಂಗ್ರಹದಲ್ಲಿ ವೈವಿಧ್ಯತೆ ಇರಲಿ

೭. ಆರಿಸಿದ ವಿಷಯವು ಸಂಪೂರ್ಣವಾಗಿರುವಂತೆ ಸಂಗ್ರಹಣೆ ಮಾಡದೆ ಪ್ರದರ್ಶಿಸಬೇಡಿರಿ

೮. ಸಂಗ್ರಹದ ಪ್ರದರ್ಶನ ನಿಮ್ಮ ಜ್ಞಾನ ವಿವೇಚನೆ ಮತ್ತು ಕೌಶಲ್ಯಗಳನ್ನು ವ್ಯಕ್ತಪಡಿಸಲಿ

೯. ಹಾಳಾದ, ತುಂಡಾದ, ವಿರೂಪಗೊಂಡ ಅನರ್ಹ ಅಂಚೆಚೀಟಿ ಹಾಗೂ ಸಾಮಗ್ರಿಗಳನ್ನು ಪ್ರದರ್ಶಿಸಬೇಡಿ

೧೦. ಯಾವಾಗಲು ಸಂಶಯ ಸಂದೇಹಗಳನ್ನು ನಿವಾರಿಸಿಕೊಂಡು ಮುನ್ನಡೆಯಲು ಹಿರಿಯ ನುರಿತ ಸಂಗ್ರಹಕಾರರ ಸಲಹೆ ಪಡೆಯಿರಿ.

೧೧. ನಕಲಿ ಅಂಚೆ ವಸ್ತುಗಳು ಹಾಗೂ ಛಾಯಾಚಿತ್ರಗಳನ್ನು ಉಪಯೋಗಿಸ ಬಾರದು ಮತ್ತು ಪ್ರಕಟಿತ ಬರಹಗಳೂ ಯೋಗ್ಯತಾಪತ್ರಗಳು ಮುಂತಾದವುಗಳನ್ನು ಪ್ರದರ್ಶಿಸಬಾರದು.

ಅಂಚೆಚೀಟಿ ಪ್ರದರ್ಶನವೆಂದರೆ ಸಂಗ್ರಹಕಾರರಿಗೆ ಉತ್ಸಾಹದಾಯಕ ಹಬ್ಬ. ಅಂಚೆ ಇಲಾಖೆಯು ಸಂಗ್ರಹಕಾರರಿಗೆ ಪ್ರೋತ್ಸಾಹ ನೀಡಲು ಪ್ರದರ್ಶನ ಗಳನ್ನೇರ್ಪಡಿಸಿ ಬಹುಮಾನಗಳನ್ನು ಉತ್ತಮ ಸಂಗ್ರಹಕ್ಕೆ ಕೊಡುವುದಲ್ಲದೆ, ಸಾರ್ವಜನಿಕರಿಗೂ ಈ ಸುಂದರ ಪರಿಚಯವನ್ನು ಮಾಡಿಸುತ್ತದೆ. ಈ ವಿಧವಾದ ಪ್ರದರ್ಶನಗಳನ್ನು ಮಾಡಿದಾಗ, ಅಂಚೆ ಇಲಾಖೆಯು ವಿಶೇಷ ಲಕೋಟೆಗಳನ್ನು ಸ್ಮರಣಾರ್ಥವಾಗಿ ಬಿಡುಗಡೆ ಮಾಡುತ್ತಾರೆ. ಪ್ರದರ್ಶನದಲ್ಲಿ ಇಡೀ ಬ್ರಹ್ಮಾಂಡದ ಎಲ್ಲಾ ವಿಷಯಗಳ ಮೇಲೂ ಅಂಚೆಚೀಟಿಗಳನ್ನು ನೋಡಬಹುದು. ಉದಾಹರಣೆಗೆ ವಾಸ್ತುಶಿಲ್ಪ ಕಲೆ, ಸಾಹಿತ್ಯ, ಸಂಗೀತ, ಬಾಹ್ಯಾಕಾಶ, ವಾಣಿಜ್ಯ, ವಿದ್ಯಾಭ್ಯಾಸ, ಕೈಗಾರಿಕೆ, ಮನರಂಜನೆ, ಪರಿಸರದ ಎಲ್ಲಾ ಪ್ರಸಾಧನಗಳು, ಕ್ರೀಡೆಗಳು, ಹಬ್ಬಗಳು, ಯಾತ್ರಾಸ್ಥಳಗಳು, ಪಶುಪಕ್ಷಿಗಳು, ಜಲಚರಗಳು ಇವೇ ಅಲ್ಲದೆ ಸರ್ಕಾರದ ಯೋಜನೆಗಳನ್ನು ನಿರೂಪಿಸುವ ಹಸಿರು ಕ್ರಾಂತಿ ಕ್ಷೀರ ಕ್ರಾಂತಿ ಹೀಗೆ ಎಲ್ಲವನ್ನೂ ಹಿಡಿದಿಡುವ ಈ ಪುಟ್ಟ ಚೀಟಿಗಳು ಸಾವಿರ ಶಬ್ದದ ಗ್ರಂಥಗಳು ಮಾಡುವ ಕೆಲಸವನ್ನು ಮಾಡುತ್ತವೆ. ದಿನಕಳೆದಂತೆ ಈ ಚೀಟಿಗಳು ಸಂಗ್ರಹಕಾರರಿಗೆ ಸಂಪತ್ತನ್ನೇ ತಂದುಕೊಡುತ್ತದೆ. ಬ್ರಿಟಿಷ್ ಗಯಾನಾದ ವಿಶ್ವ ಏಕೈಕ ಅಪೂರ್ವ ಅಮೂಲ್ಯವಾದ ಅಂಚೆಚೀಟಿಯು ಒಂದು ಕೋಟಿ ರೂಪಾಯಿಗಳಿಗೆ ಮಾರಾಟವಾಗಿ ಸುದ್ದಿ ಮಾಡಿತ್ತು. ಒಟ್ಟಿನಲ್ಲಿ ಈ ಅಂಚೆಚೀಟಿಗಳು ರಾಷ್ಟ್ರದ ಪ್ರಗತಿಯನ್ನು ಹೊರ ಪ್ರಪಂಚಕ್ಕೆ ತೋರುವ ಕಿಂಡಿಗಳು ಮತ್ತು ರಾಷ್ಟ್ರಕ್ಕೆ ಸಂಪತ್ತನ್ನೂ ಖ್ಯಾತಿಯನ್ನೂ ತಂದುಕೊಡುವ ಹಾಗೂ ಅಂತರರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವ ರಾಯಭಾರಿಗಳು.

೧೯೯೯ರಲ್ಲಿ ವಿಶ್ವಮಟ್ಟದ ಪ್ರದರ್ಶನವನ್ನು ದೆಹಲಿಯಲ್ಲಿ ಏರ್ಪಡಿಸಿದ್ದರು. ಈ ಪ್ರದರ್ಶನವನ್ನು ಅಂತರರಾಷ್ಟ್ರೀಯ ಅಂಚೆಚೀಟಿ ಸಂಗ್ರಹಕಾರರ ಸಮೂಹವು ನಡೆಸಿಕೊಟ್ಟಿದೆ.

ಈ ಪ್ರದರ್ಶನದಲ್ಲಿ ಅಪರೂಪದ ಅಮೂಲ್ಯವಾದ ಬ್ರಿಟಿಷ್ ಗಯಾನಾದ ಪೋಸ್ಟ್ ಆಫೀಸ್ ಅಂಚೆಚೀಟಿ, ವಿಶ್ವದ ಪ್ರಪ್ರಥಮ ಅಂಚೆಚೀಟಿಯಾದ ಪೆನ್ನಿಬ್ಲಾಕ್, ೧೮೫೨ರಲ್ಲಿ ಬಿಡುಗಡೆಯಾದ ಭಾರತದ ಪ್ರಥಮ ಅಂಚೆಚೀಟಿ ಸಿಂದ್ ಡಾಕ್ ಪ್ರದರ್ಶಿಸಲ್ಪಟ್ಟಿತು.

★★★★

ವಿವಿಧ ಅಂಚೆಚೀಟಿಗಳು

ಅಂಚೆಚೀಟಿ ಸಂಗ್ರಹಣೆಗೆ ಸಂಬಂಧಿಸಿದ ಕೆಲವು ಪದಗಳು ಬಳಕೆಯಲ್ಲಿವೆ. ಅವುಗಳು ಮೇಲನೋಟಕ್ಕೆ ಮಾಮೂಲು ಪದಗಳಂತೆ ಕಂಡರೂ ಅಂಚೆಚೀಟಿಗಳಿಗೆ ಸಂಬಂಧಿಸಿದ ವಿಶೇಷ ವಿಶೇಷ ಅರ್ಥಗಳಿವೆ.

ಲಕೋಟೆಗಳ ಮೇಲೆ, ಕಾರ್ಡುಗಳ ಮೇಲೆ ಆರೋಗ್ಯ ಸೂತ್ರ ಕುಟುಂಬ ನಿಯಂತ್ರಣ, ಸಾಮಾಜಿಕ ಆಂದೋಲನವನ್ನು ಕುರಿತು ನಿನಾದಗಳನ್ನು ವ್ಯಾಪ್ತಿ ಮಾಡುವ ಉದ್ದೇಶದಿಂದ ಮುದ್ರಿತವಾಗಿರುವುದರಿಂದ ಇವುಗಳನ್ನು ಕ್ಯಾಚೆಟ್ ಎನ್ನುವರು.

ಯಾವುದೇ ಅಂಚೆಚೀಟಿಯನ್ನು ಅದರ ಮೇಲಿನ ಮುಖಬೆಲೆಗಿಂತ ಹೆಚ್ಚಿಗೆ ಹೆಚ್ಚಿಗೆ ಮಾರಿ ಆ ಹೆಚ್ಚುವರಿ ಹಣವನ್ನು ಧರ್ಮಕಾರ್ಯಗಳಿಗೆ ಉಪಯೋಗಿಸುತ್ತಾರೆ. ಇವುಗಳನ್ನು ಚಾರಿಟಿ ಸ್ಟಾಂಪ್ಸ್ ಎನ್ನುವರು.

ಅಂಚೆಚೀಟಿಗಳ ಪ್ರತಿರೂಪವನ್ನು ತಯಾರು ಮಾಡುತ್ತಾರೆ. ಅವುಗಳನ್ನು ಫ್ಯಾಸಿಮಿಲಿ ಎನ್ನುತ್ತಾರೆ.

ಅಂಚೆ ಇಲಾಖೆಯನ್ನು ಮೋಸಗೊಳಿಸಲೋಸುಗ ತಯಾರಿಸಿ ಬಳಕೆಯಲ್ಲಿ ತಂದರೆ ಅವುಗಳನ್ನು ಪೋಸ್ಟಲ್ ಫೋರ್ಜರಿ ಎನ್ನುತ್ತಾರೆ.

ಕೇವಲ ಒಂದು ನಿಶ್ಚಿತ ಪ್ರದೇಶದಲ್ಲಿ ಉಪಯೋಗಿಸಲು ಮಾತ್ರವೇ ಬಳಸುವ ಅಂಚೆಚೀಟಿಗಳನ್ನು ಲೋಕಲ್ಸ್ ಎನ್ನುತ್ತಾರೆ.

ಬಳಸದೆ ಇರುವ ಹಿಂಭಾಗದಲ್ಲಿ ಅಂಟು ಇರುವ ಅಂಚೆಚೀಟಿಗಳನ್ನು ಮಿಂಟ್ (mint) ಎಂದು ಕರೆಯುತ್ತಾರೆ.

ಅತ್ಯಂತ ಜಟಿಲವಾದ ವಿಧಾನಗಳಿಂದ ಅಂಚೆಚೀಟಿಗಳನ್ನು ಮುದ್ರಿಸುವುದರಿಂದ ಆಗಾಗ್ಗೆ ಮುದ್ರಣ ದೋಷಗಳು ಉಂಟಾಗುತ್ತವೆ. ಮುದ್ರಣ ನಂತರ ಮಾರಾಟಕ್ಕಾಗಿ ಅಂಚೆ ಕಛೇರಿಗೆ ಕಳಿಸುವ ಮುನ್ನ ಅವುಗಳನ್ನು ಕೂಲಂಕಷವಾಗಿ ಪರೀಕ್ಷಿಸಲಾಗುವುದು. ಆದರೂ ಕೆಲವು ಸಲ ದೋಷಯುಕ್ತ ಅಂಚೆಚೀಟಿಗಳು ನುಸುಳಿಕೊಂಡು ಮಾರಾಟಕ್ಕೆ ಹೋಗುತ್ತವೆ. ಇಂತಹ ದೋಷಯುಕ್ತ ಅಂಚೆಚೀಟಿಗಳನ್ನು ಕೊಳ್ಳಲು ಜನ ಸಾಮಾನ್ಯವಾಗಿ ಹಿಂಜರಿಯುತ್ತಾರೆ. ಆದರೆ ಅಂಚೆಚೀಟಿ ಸಂಗ್ರಹಕಾರರು ಇಂತಹ ಅಂಚೆಚೀಟಿಗಳನ್ನು ಪಡೆಯಲು ಹಾತೊರೆಯುತ್ತಾರೆ.

ಕೆಲವು ಸಲ ಲೋಹದ ಹಾಳೆಯ ಮೇಲಿಟ್ಟಿರುವ ವಿನ್ಯಾಸವೊಂದು ಇತರ ವಿನ್ಯಾಸಗಳೊಡನೆ ಸರಿಹೊಂದುವುದಿಲ್ಲವೆಂಬ ಕಾರಣದಿಂದ ಅದನ್ನು ನಾಶಪಡಿಸಿ ಅದರ ಸ್ಥಾನದಲ್ಲಿ ಬೇರೊಂದು ಇಡಬೇಕಾಗುತ್ತದೆ. ಮೊದಲ ವಿನ್ಯಾಸವನ್ನು ಸರಿಯಾಗಿ ಅಳಿಸಿಹಾಕದಿದ್ದಲ್ಲಿ ಅದರ ಕೆಲವೊಂದು ರೇಖೆಗಳು ಮುದ್ರಿತ ಪ್ರತಿಯ ಮೇಲೆ ಕಾಣಬಹುದು. ಈ ದೋಷಗಳನ್ನು ಫ್ರಶ್ ಎಂಟ್ರಿ ಎನ್ನುವರು. (Fresh-entry)

ವಿನ್ಯಾಸವುಳ್ಳ ಹಾಳೆ ನಶಿಸಿ ಹೋದಲ್ಲಿ, ಜಕಂ ಆದಲ್ಲಿ ವಿನ್ಯಾಸದ ಅಕ್ಷರ ರೇಖೆಗಳನ್ನು ಹರಿತಗೊಳಿಸಲಾಗುವುದು. ಇಂತಹ ದುರಸ್ತಿಯನ್ನು ರೀ-ಎಂಟ್ರಿ (Re-entry) ಎಂದು ಕರೆಯಲಾಗುವುದು.

ಲಿಥೊಗ್ರಫಿ ವಿಧಾನದ ಮೂಲಕ ಮುದ್ರಿಸುವಾಗ ಸ್ವಲ್ಪಕಾಲ ಮುದ್ರಣದ ನಂತರ ಕಲ್ಲಿನ ಮೇಲಿನ ಅಥವಾ ಹಾಳೆಯ ಮೇಲಿನ ವಿನ್ಯಾಸದ ಒಂದು ಭಾಗ ನಶಿಸಿ ಹೋಗಬಹುದು. ಮತ್ತಷ್ಟು ಮುದ್ರಿಸುವ ಮುನ್ನ ಈ ಭಾಗವನ್ನು ತಿದ್ದಿ ಸರಿಪಡಿಸಬೇಕೆಂದು. ಹೀಗೆ ತಿದ್ದಿದ ಭಾಗ ಕೆಲವು ಸಲ ಅಂಚೆಚೀಟಿಯ ಮೇಲೆ ಸೂಕ್ಷ್ಮವಾಗಿ ಕಾಣುತ್ತಿರುತ್ತದೆ. ಈ ದೋಷವನ್ನು ರೀ-ಟಚ್ (Re-touch) ಎನ್ನುವರು.

ಮುದ್ರಣದ ಹಾಳೆಯ ಮೇಲೆ ಗುರುತು ಮಾಡುತ್ತಿರುವ ಇಲ್ಲವೇ ಕಲ್ಲಚ್ಚಿನ ಮೇಲೆ ವಿನ್ಯಾಸವಿಡುತ್ತಿರುವಾಗ ಒಂದು ವಿನ್ಯಾಸ ತಲೆಕೆಳಗಾಗಿ ಬೀಳಬಹುದು. ಒಂದೊಂದು ಅಂಚೆಚೀಟಿಯನ್ನು ಬಿಡಿಬಿಡಿಯಾಗಿ ಹರಿದಾಗ ಈ ತಪ್ಪು ಕಾಣುವುದಿಲ್ಲ. ಆದರೆ ಹಾಳೆಯ ಮೇಲೆ ಒಂದರ ಪಕ್ಕದಲ್ಲೊಂದು ಇರುವಾಗ ಈ ತಪ್ಪು ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದ ಇದನ್ನು ತಲೆಕೆಳಗು (Tete-Beche) ಎಂದು ಕರೆಯುತ್ತಾರೆ.

ವಿವಿಧ ರೀತಿಯ ಜೋಡಿ (Double) ಗಳಿರುತ್ತವೆ. ಮುದ್ರಿಸುತ್ತಿರುವಾಗ ಕಾಗದದ ಹಾಳೆಯೊಂದು ಎರಡು ಸಲ ಯಂತ್ರದಡಿಗೆ ಹೋದಲ್ಲಿ ವಿನ್ಯಾಸವು ಒಂದರ ಮೇಲೊಂದರಂತೆ ಎರಡು ಸಲ ಬೀಳುತ್ತದೆ. ಹೀಗೆ ಒಂದರ ಮೇಲೊಂದು ಬಿದ್ದ ಮುದ್ರಣದ ಅಂತರ ಹೆಚ್ಚಾದಷ್ಟು ಅದರ ಮೌಲ್ಯವೂ ಹೆಚ್ಚಾಗುತ್ತದೆ.

ಕೆಲವು ಸಲ ಹಾಳೆಗಳನ್ನು ತಪ್ಪಿನಿಂದ ಎರಡು ಸಲ ಮುದ್ರಿಸಬಹುದು. ಆದರೆ ಮುಂಭಾಗದಲ್ಲೊಂದು ಸಲ ಮುದ್ರಿತಗೊಳ್ಳಬಹುದು. ಇದರ ಫಲವಾಗಿ ವಿನ್ಯಾಸ ಕಾಗದದ ಎರಡೂ ಪಾರ್ಶ್ವದಲ್ಲಿಯೂ ಬಿದ್ದಿರುತ್ತದೆ. ಇಂತಹ ದೋಷ ಅಂಚೆಚೀಟಿ ಸಂಗ್ರಹಣೆಯಲ್ಲಿ ತುಂಬಾ ಮಹತ್ವಪೂರ್ಣ ಅಂಶದ್ದಾಗಿರುತ್ತದೆ.

ಅಂಚೆಚೀಟಿ ವಿನ್ಯಾಸದಲ್ಲಿ ಒಂದಕ್ಕಿಂತ ಹೆಚ್ಚು ಬಣ್ಣಗಳಿದ್ದಲ್ಲಿ ವಿನ್ಯಾಸದ ಮೇಲೆ ಎಷ್ಟು ಬಣ್ಣಗಳಿರುತ್ತವೆಯೊ ಅಷ್ಟು ಸಲ ಅಂಚೆಚೀಟಿಯನ್ನು ಮುದ್ರಿಸುತ್ತಿದ್ದರು. ಹೀಗೆ ಪ್ರತಿ ಬಣ್ಣವನ್ನು ಮುದ್ರಿಸುವಾಗಲೂ ಅಂಚೆಚೀಟಿಯನ್ನು ಸರಿಯಾದ ಸ್ಥಳದಲ್ಲಿ

ಜೋಡಿಸಲು ಹೆಚ್ಚು ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಈ ಹೊಂದಾಣಿಕೆಯಲ್ಲಿ ಸ್ವಲ್ಪ ತಪ್ಪಾದರೂ ಅಂಚೆಚೀಟಿ ದೋಷಯುಕ್ತವಾಗುವುದು ಹಾಗೂ ಅಂತಹ ಅಂಚೆಚೀಟಿಗಳು ಸಂಗ್ರಹಕಾರರಿಗೆ ಅಮೂಲ್ಯವಾದದ್ದಾಗಿರುತ್ತದೆ.

ಮುದ್ರಿತ ಹಾಳೆಗಳನ್ನು ತೆಗೆಯುತ್ತಿದ್ದಾಗ ಅಜಾಗರೂಕತೆಯಿಂದ ಕೆಲವು ಸಲ ಮುದ್ರಿತ ಹಾಳೆಯ ವಿನ್ಯಾಸವುಳ್ಳ ಲೋಹದ ಹಾಳೆಗೆ ತಾಕಬಹುದು. ಇದರಿಂದ ಕೆಲವು ಅಂಚೆಚೀಟಿಗಳ ಮೇಲೆ ವಿನ್ಯಾಸದ ಗುರುತು ಮತ್ತೆ ಬೀಳಬಹುದು. ವಾಸ್ತವವಾಗಿ ಇದು ಜೋಡಿ ಗುರುತಾಗಿರುವುದಿಲ್ಲ, ಇಂತಹ ದೋಷವನ್ನು ''ಕಿಸ್'' ಎಂದು ಕರೆಯಲಾಗುವುದು.

ಕೆಲವು ಸಲ ಎರಡನೆಯ ಅಥವಾ ಮೂರನೆಯ ಬಣ್ಣವನ್ನು ಮುದ್ರಿಸುವಾಗ ಎರಡು ಹಾಳೆಗಳು ಒಟ್ಟಿಗೆ ಮುದ್ರಣಯಂತ್ರದೊಳಗೆ ಹೋಗಬಹುದು. ಇಂತಹ ಸಂದರ್ಭದಲ್ಲಿ ಕೆಳಗಿರುವ ಹಾಳೆಯ ಮೇಲೆ ಒಂದು ಬಣ್ಣ ಬೀಳುವುದಿಲ್ಲ, ಇಂತಹ ಲೋಪದೋಷವಿರುವ ಅಂಚೆಚೀಟಿಗಾಗಿ ಸಂಗ್ರಹಕಾರರು ಸದಾ ಅರಸುತ್ತಿರುತ್ತಾರೆ.

ಕೆಲವು ಸಲ ಅಂಚೆಚೀಟಿಯ ಅಂಚನ್ನು ಒಂದು ಬಣ್ಣದಿಂದಲೂ ವಿನ್ಯಾಸದ ಮಧ್ಯಭಾಗವನ್ನು ಮತ್ತೊಂದು ಬಣ್ಣದಿಂದಲೂ ಮುದ್ರಿಸಬೇಕಾಗಿರುವುದು. ಅಂಚನ್ನು ಮುದ್ರಿಸಿದ ನಂತರ ಎರಡನೇ ಮುದ್ರಣಕ್ಕಾಗಿ ಹಾಳೆಯನ್ನು ತಲೆಕೆಳಗಾಗಿ ಕೂರಿಸಿದಲ್ಲಿ ಮಧ್ಯದ ವಿನ್ಯಾಸವು ಅಂಚಿಗೆ ಸಂಬಂಧಿಸಿದಂತೆ ತಲೆಕೆಳಗಾಗಿ ಬೀಳುತ್ತದೆ.

ಅಂಚೆಚೀಟಿಗಳನ್ನು ಮುದ್ರಿಸುವಾಗ ಕೆಲವು ಸಲ ಹಾಳೆಗಳು ಮಡಚಿಕೊಂಡಲ್ಲಿ ಇಲ್ಲವೇ ಸುಕ್ಕಾದಲ್ಲಿ ಇವುಗಳಿಂದ ಮುದ್ರಿತ ಅಂಚೆಚೀಟಿಗಳ ಮೇಲೆ ಬಿಳಿಯಪಟ್ಟಿ ಬೀಳಬಹುದು. ಕೆಲವು ಸಲ ಅಂಚೆಚೀಟಿಗಳ ವಿನ್ಯಾಸದ ಒಂದು ಭಾಗವೇ ನಾಪತ್ತೆಯಾಗಿರಬಹುದು. ಇವುಗಳನ್ನು ಲೋಪ ಅಥವಾ (ಕಲೆ) ಗುರುತು ಎಂದು ಕರೆಯಲಾಗುವುದು.

ವಿವಿಧ ಮಸಿಯ ಮಿಶ್ರಣದಿಂದಾಗಿ ಕೆಲವು ಸಲ ಒಂದೇ ಬಣ್ಣದ ಮಸಿಯ ಛಾಯೆಯಲ್ಲಿ ಸ್ವಲ್ಪ ವ್ಯತ್ಯಾಸವಿದ್ದು, ಈ ವ್ಯತ್ಯಾಸ ಅಂಚೆಚೀಟಿಯ ಮೇಲೆ ಸ್ಪಷ್ಟವಾಗಿ ಕಾಣುತ್ತಿರುತ್ತದೆ. ಹಿಂದೆ ಅಂಚೆಚೀಟಿಗಳ ಮುದ್ರಣದಲ್ಲಿ ಈ ದೋಷ ಸಾಮಾನ್ಯವಾಗಿ ಕಾಣಬರುತ್ತಿತ್ತು.

ಅಂಚೆಚೀಟಿಗಳ ಸಂಗ್ರಹಣೆಯು ಇಂತಹ ದೋಷಯುಕ್ತ ಅಂಚೆಚೀಟಿಗಳನ್ನು ಒಳಗೊಂಡಲ್ಲಿ ಅದು ಹೆಚ್ಚು ಆಸಕ್ತಿಯುತವಾಗಿರುತ್ತದೆ. ಆದ್ದರಿಂದ ಅಂಚೆಚೀಟಿ ಸಂಗ್ರಹಕಾರರು ಜಾಗರೂಕತೆಯಿಂದ ಗಮನಿಸುತ್ತಿದ್ದು ಇಂತಹ ದೋಷಯುಕ್ತ ಅಂಚೆಚೀಟಿಗಳನ್ನು ಪತ್ತೆಹಚ್ಚಿ ಅವನ್ನು ತನ್ನ ಸಂಗ್ರಹದಲ್ಲಿ ಸೇರಿಸಬೇಕೆಂಬ ಆಸಕ್ತಿ

ಮಾತ್ರವಲ್ಲದೆ ಅಮೂಲ್ಯವೂ ಆಗಿರುತ್ತದೆ. ಕೈಯಿಂದ ಕೈಗೆ ಬದಲಾಯಿಸಿದಂತೆ ಅವುಗಳ ಮೌಲ್ಯವೂ ಹೆಚ್ಚಿ ಅವು ಅಪಾರ ಹಣ ತರುವುದರಿಂದ ಇಂತಹ ಅಂಚೆಚೀಟಿಗಳನ್ನು ಪಡೆಯಲು ಸಂಗ್ರಹಕಾರರು ಯಾವಾಗಲೂ ಕಾತುರರಾಗಿರುತ್ತಾರೆ.

ದೋಷಗಳೆಲ್ಲಾ ಮುಖ್ಯವಾಗಿ ಮುದ್ರಣದಿಂದ ಉಂಟಾಗುತ್ತದೆ. ಆದ್ದರಿಂದ ಅಂಚೆಚೀಟಿ ಸಂಗ್ರಹಕಾರರು ಮುದ್ರಣದೋಷಗಳುಳ್ಳ ಅಂಚೆಚೀಟಿಗಳನ್ನು ಪಡೆಯಲು ಎಚ್ಚರದಿಂದ ಗಮನಿಸುತ್ತಿರಬೇಕು. ಇಂತಹ ಕೆಲವು ತಪ್ಪುಗಳಿರುವ ಅಂಚೆಚೀಟಿಗಳು ಇತಿಹಾಸವನ್ನೇ ಸೃಜಿಸಿವೆ. ತನ್ನ ಅಂಚೆಚೀಟಿಗಳನ್ನು ಪರೀಕ್ಷಿಸುವುದು ಎಷ್ಟು ಮಹತ್ವಪೂರ್ಣವಾದುದು ಎಂದು ಸೂಚಿಸುತ್ತದೆ.

ನೂರಾರು ಅಂಚೆಚೀಟಿಗಳು ಒಂದೇ ಹಾಳೆಯಲ್ಲಿ ಕ್ರಮವಾಗಿ ಮುದ್ರಿಸಿದಾಗ ಒಂದೊಂದೇ ಅಂಚೆಚೀಟಿಯನ್ನು ಬಿಡಿಸಿಕೊಳ್ಳುವುದು ಹೇಗೆ ಎಂಬ ಆಲೋಚನೆಗೆ ಪ್ರಾರಂಭದಲ್ಲಿ ಹೆಚ್ಚು ಗಮನ ಕೊಡಲಿಲ್ಲ. ಆದರೆ ಅಂಚೆಚೀಟಿಗಳು ಹೆಚ್ಚು ಪ್ರಚಾರ ಹೊಂದಿ ವಿಪರೀತವಾಗಿ ಬಳಕೆಗೆ ಬಂದ ಮೇಲೆ ಇದು ಪ್ರಧಾನ ಸಮಸ್ಯೆಯಾಗಿ ಪರಿಣಮಿಸಿತು. ಕಛೇರಿ ಸಿಬ್ಬಂದಿ ಕತ್ತರಿಯನ್ನು ಉಪಯೋಗಿಸಿ ಬೇರ್ಪಡಿಸುವಾಗ ಚೀಟಿಗಳು ಅಸ್ತವ್ಯಸ್ತವಾಗಿ ಹಾಳಾಗುವ ಪರಿಸ್ಥಿತಿ ಹೆಚ್ಚಾಗಿತ್ತು. ಅಲ್ಲದೆ ಹಾಳೆಗಳನ್ನು ಮಡಚಿ ಹರಿದಾಗಲೂ ಇದೇ ತೊಂದರೆಯಾಗುತ್ತಿತ್ತು. ಈಗಿರುವ ಸುಲಭವಾಗಿ ಬೇರ್ಪಡಿಸಲು ಸಾಧ್ಯವಾಗುವ ಸಾಲುರಂಧ್ರಗಳು ಪೂರ್ವದಲ್ಲಿ ಇರಲಿಲ್ಲ. ಅವುಗಳನ್ನು ಇಂಪರ್‌ಫೊರೇಟೆಡ್ (imporforated) ಸ್ಟಾಂಪ್ಸ್ ಎಂದು ಕರೆಯುತ್ತಿದ್ದರು.

ಅಂಚೆಚೀಟಿಗಳನ್ನು ಸುಲಭವಾಗಿ ಹರಿದು ವಿತರಣೆ ಮಾಡುವ ಮಾರ್ಗಗಳ ಅನ್ವೇಷಣೆ ಆರಂಭವಾಯಿತು. ಹೆನ್ರಿ ಆರ್ಚರ್ ಎಂಬ ಐರಿಷ್ ಇಂಜಿನೀಯರ್ ಅಂಚೆಚೀಟಿಗಳನ್ನು ಬೇರ್ಪಡಿಸಲು ಬಾಚಣಿಗೆಯಾಕಾರದ ಸಾಲುರಂಧ್ರಗಳನ್ನು ಏರ್ಪಡಿಸುವ ಯಂತ್ರವನ್ನು ಕಂಡುಹಿಡಿದರು. ಸರಿಯಾದ ರೀತಿಯಲ್ಲಿ ಸಾಲುರಂಧ್ರಗಳಿಂದ ಕೂಡಿದ ಅಂಚೆಚೀಟಿ ಹಾಳೆಗಳು ಮೊಟ್ಟಮೊದಲಿಗೆ ೧೮೫೪ರಲ್ಲಿ ಬಿಡುಗಡೆಯಾದವು. ಆಗಿನಿಂದ ಅಂಚೆಚೀಟಿ ಬೇರೆ ಮಾಡುವುದು ಸುಲಭವಾಯಿತು.

ಮಾಮೂಲಿನಂತೆ ಮುದ್ರಿಸಿ ಬಿಡುಗಡೆಯಾದ ಅಂಚೆಚೀಟಿಯ ಮೇಲೆ ಹೆಚ್ಚಾಗಿ ಯಾವುದೇ ಅಕ್ಷರಗಳಾಗಲೀ, ಸಂಖ್ಯೆಗಳಾಗಲೀ ಮುದ್ರಿಸಿದ್ದರೆ ಅಂತಹ ಅಂಚೆಚೀಟಿಗಳಿಗೆ ಓವರ್‌ಪ್ರಿಂಟ್ಸ್ ಎಂದು ಕರೆಯುವರು. ಅಂಚೆಚೀಟಿಗಳ ಸಂಗ್ರಹಣೆಯಲ್ಲಿ ಈ ಓವರ್ ಪ್ರಿಂಟ್‌ಗೆ ಪ್ರತ್ಯೇಕವಾದ ಬೆಲೆ, ಸ್ಥಾನ ಇದೆ.

ಸಾಮಾನ್ಯವಾಗಿ ಬಿಡುಗಡೆ ಮಾಡಿದ ಅಂಚೆಚೀಟಿಗಳ ಮೇಲೆ ಮತ್ತೊಮ್ಮೆ ನಿಲುವು ಮುದ್ರಣ ಮಾಡಿ ಬಿಡುಗಡೆ ಮಾಡುವುದು ನಡೆಯುತ್ತಿರುತ್ತದೆ. ಅಂದರೆ ಉದಾಹರಣೆಗೆ ೫ ಪೈಸೆ ಅಂಚೆಚೀಟಿಯ ಮೇಲೆ ೨೦ಪೈಸೆ ಎಂದು ಮುದ್ರಿಸಿ

ಜಾರಿಗೊಳಿಸಿರುತ್ತಾರೆ. ಅಗತ್ಯ ಬೆಲೆಯಲ್ಲಿ ಸಾಕಷ್ಟು ಅಂಚೆಚೀಟಿಗಳ ದಾಸ್ತಾನು ಇಲ್ಲವಾದಲ್ಲಿ ತಾತ್ಕಾಲಿಕವಾಗಿ ಆ ಲೋಪವನ್ನು ಸರಿದೂಗಿಸಲು ಸರ್ಚಾರ್ಜ್ ಅಂಚೆಚೀಟಿ ಬಿಡುಗಡೆ ನಡೆಯುತ್ತದೆ.

ದೇಶದಲ್ಲಿ ಹಣದುಬ್ಬರ ಉಂಟಾದಾಗ ಈ ಸರ್ಚಾರ್ಜ್ ಅಂಚೆಚೀಟಿಗಳು ಸಾಧಾರಣವಾಗಿ ದರ್ಶನ ಕೊಡುತ್ತಿರುತ್ತವೆ. ೧೯೨೩ರಲ್ಲಿ ಜರ್ಮನಿಯಲ್ಲಿಯೂ ೧೯೪೯ರಲ್ಲಿ ಚೈನಾದಲ್ಲಿಯೂ ಈ ವಿಧವಾದ ಅಂಚೆಚೀಟಿಗಳು ಬಿಡುಗಡೆ ಮಾಡಲ್ಪಟ್ಟಿವೆ. ಓವರ್ ಪ್ರಿಂಟ್, ಸರ್ಚಾರ್ಜ್ ಎರಡೂ ಒಂದೇ ಅಂಚೆಚೀಟಿಯ ಮೇಲೆ ಮುದ್ರಿಸಿರುವುದು ಕೆಲವೊಮ್ಮೆ ನಡೆದಿದೆ. ಇವುಗಳು ಅಂಚೆಚೀಟಿ ಸಂಗ್ರಹಕಾರರಿಗೆ ಬಹಳ ಬೆಲೆಬಾಳುವಂಥವು.

ಪ್ರಥಮ ದಿನದ ಲಕೋಟೆ (First Day Cover)

ಕವರ್‌ಗಳೆಂದಾಕ್ಷಣ ನಿಮ್ಮ ಗಮನಕ್ಕೆ ಬರುವುದು, ನಮ್ಮ ಗಮನಕ್ಕೆ ಬರುವುದು ಅಂಚೆ ಕಛೇರಿಯಲ್ಲಿ ಮಾರುವ ಕವರುಗಳು, ಇನ್‌ಲ್ಯಾಂಡ್ ಕವರುಗಳು ಮಾತ್ರವೇ. ಅಂಚೆ ಸಾಮ್ರಾಜ್ಯದಲ್ಲಿ ಇವುಗಳಲ್ಲದೆ ಬೇರೆ ವಿಧದ ಕವರುಗಳೂ ಸಹಾ ಇವೆ. ಇವುಗಳ ಮೊದಲ ದಿನದ ಕವರುಗಳು ಬಹಳ ಪ್ರಮುಖವಾದವು. ಅಂಚೆಚೀಟಿ ಬಿಡುಗಡೆಯಾದ ದಿನ ಈ ಮೊದಲ ದಿನದ ಕವರುಗಳು ಮಾರಲ್ಪಡುತ್ತವೆ. ಕವರಿನ ಮೇಲೆ ಬಲಭಾಗದಲ್ಲಿ ಅಂಚೆಚೀಟಿಯನ್ನು ಅಂಟಿಸಿ ಅದರ ಮೇಲೆ ಒಂದು ಠಸ್ಸೆ (ಮುದ್ರೆ) ಯನ್ನು ಹಾಕುತ್ತಾರೆ. ಅಂಚೆಚೀಟಿಗೆ ಸಂಬಂಧಿಸಿದ ವಿವರಗಳು ಕವರಿನ ಎಡಭಾಗದಲ್ಲಿ ಮುದ್ರಿಸಿರುತ್ತಾರೆ. ನೋಡುವುದಕ್ಕೆ ಬಹಳ ಸುಂದರವಾಗಿರುತ್ತದೆ. ಹಾಗೆಯೇ ಒಂದು ಪ್ರತ್ಯೇಕ ಸಂದರ್ಭವನ್ನು ಪುರಸ್ಕರಿಸಲು ಬಿಡುಗಡೆ ಮಾಡುವ ಕವರುಗಳನ್ನು (ಪ್ರತ್ಯೇಕ) ವಿಶೇಷ ಕವರುಗಳು ಎನ್ನುವರು. ಈ ಕವರುಗಳ ಜೊತೆಯಲ್ಲಿ ಪ್ರತ್ಯೇಕ ಮುದ್ರಿಕೆ (cancellation) ಸಹಾ ಬಿಡುಗಡೆ ಮಾಡುತ್ತಾರೆ.

ಅಂಚೆಚೀಟಿಗಳ ಪ್ರದರ್ಶನ ನಡೆಯುವ ಸಂದರ್ಭಗಳಲ್ಲಿ ಎಕ್ಸಿಬಿಷನ್ ಕವರುಗಳ ಬಿಡುಗಡೆ ಮಾಡುತ್ತಾರೆ. ಇವುಗಳನ್ನು ಪ್ರದರ್ಶನ ಕವರುಗಳು ಎಂದು ಹೇಳಬಹುದು. ಈ ಕವರುಗಳ ಮೇಲೆ ಪ್ರದರ್ಶನ ನಡೆದ ಸ್ಥಳ, ಪ್ರದರ್ಶನದ ಹೆಸರು, ದಿನಾಂಕ ಇವುಗಳನ್ನೊಳಗೊಂಡ ಒಂದು ಅಂದವಾದ ಚಿತ್ರವನ್ನು ಮುದ್ರಿಸುತ್ತಾರೆ. ಈ ಕವರುಗಳ ಮೇಲೆ ಅಂಚೆಚೀಟಿಗಳನ್ನು ಅಂಟಿಸಿ ಪ್ರತ್ಯೇಕವಾದ ಮುದ್ರೆಯಿಂದ (ಠಸ್ಸೆ) ವಜಾ ಮಾಡುತ್ತಾರೆ.

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಇಲ್ಲವೇ ಒಂದು ಪ್ರಾಂತ್ಯದಿಂದ

ಮತ್ತೊಂದು ಪ್ರಾಂತ್ಯಕ್ಕೆ ಪ್ರಪ್ರಥಮವಾಗಿ ತಮ್ಮ ಸೇವೆಯನ್ನು ಆರಂಭಿಸಿದ ಸಲುವಾಗಿ ಆ ಸಂದರ್ಭವಾಗಿ ಬಿಡುಗಡೆ ಮಾಡಲ್ಪಡುವ ಕವರುಗಳನ್ನು ಫಸ್ಟ್ ಫ್ಲೈಟ್ (First Flight) ಕವರ್ಸ್ ಎನ್ನುತ್ತಾರೆ. ಈ ಸಂದರ್ಭವಾಗಿ ವಿಮಾನ ಸಂಸ್ಥೆ ಅಂಚೆ ಇಲಾಖೆಯವರು ಪ್ರತ್ಯೇಕ ಮುದ್ರೆಗಳ (ಠಸ್ಸೆ) ಏರ್ಪಾಡು ಮಾಡುತ್ತಾರೆ. ಪ್ರಥಮದಿನದ ಕವರುಗಳನ್ನು ಅಂಚೆ ಇಲಾಖೆಯವರು ಬಿಡುಗಡೆ ಮಾಡುತ್ತಾರೆ.

ಈ ಸಂದರ್ಭದಲ್ಲಿ ತಿಳಿದುಕೊಳ್ಳಬೇಕಾದ ಬಹಳ ಕುತೂಹಲಕಾರಿಯಾದ ವಿಷಯವೊಂದಿದೆ. ೧೯೧೧ರಲ್ಲಿ ಫ್ರೆಂಚ್ ವಿಮಾನ ಚಾಲಕ ವಿಮಾನದಲ್ಲಿ ಪತ್ರಗಳನ್ನು ಅಲಹಾಬಾದ್‌ನಿಂದ ನಯನಿಟಾಲ್‌ಗೆ ಕೊಂಡೊಯ್ದನು. ವಿಮಾನದ ಮೂಲಕ ಪತ್ರಗಳನ್ನು ರವಾನಿಸಿದ ಕೀರ್ತಿ ವಿಶ್ವದಲ್ಲಿ ಭಾರತಕ್ಕೆ ಸಲ್ಲುತ್ತದೆ.

ನಗದು ನೋಟುಗಳ ತಯಾರಿಕೆಗೆ ಕಾಗದ ತಯಾರು ಮಾಡುವ ವಿಷಯದಲ್ಲಿ ಎಷ್ಟು ಜಾಗರೂಕತೆ ತೆಗೆದುಕೊಳ್ಳುವರೊ, ಅಂಚೆಚೀಟಿಯ ತಯಾರಿಕೆಯ ವಿಷಯದಲ್ಲಿಯೂ ಅಷ್ಟೇ ಜಾಗರೂಕತೆ ಅವಶ್ಯಕ. ಇಲ್ಲವಾದಲ್ಲಿ ನಕಲಿ ಅಂಚೆಚೀಟಿಗಳ ಉತ್ಪತ್ತಿ ಕೂಡ ದೇಶಕ್ಕೆ ಪ್ರಮಾದವನ್ನು ತಂದೊಡ್ಡುತ್ತದೆ. ಪ್ರಾರಂಭದಲ್ಲಿ ಕೈಯಿಂದ ತಯಾರಾದ ಕಾಗದವನ್ನು ಬಳಸುತ್ತಿದ್ದರು. ಈಗ ಯಂತ್ರದಿಂದ ತಯಾರು ಮಾಡಿದಂತ ಕಾಗದವನ್ನು ಉಪಯೋಗಿಸುತ್ತಾರೆ.

ಕಾಗದ ತಯಾರಿಸುವಾಗಲೇ ಕಾಗದ ಮಿಶ್ರಣ ಒಂದು ದುಂಡಾದ ರೋಲರು ಕೆಳಗೆ ಒತ್ತರಿಸಿ ಕಾಗದದ ರೂಪದಲ್ಲಿ ಹೊರಬೀಳುವಾಗ ಆ ರೋಲರ್ ಮೇಲಿರುವ ಜರಡಿಯಂತಿರುವ ಗುರುತುಗಳು ಕಂಡೂ ಕಾಣದಂತೆ ಹೊರಬೀಳುವ ಕಾಗದದ ಮೇಲೆ ಗುರುತು ಬೀಳುತ್ತದೆ. ಗುರುತುಗಳು ಜರಡಿಯಂತೆ ಕಾಗದದ ಮೇಲೆ ಸೂಕ್ಷ್ಮವಾಗಿ ಕಾಣಿಸುತ್ತದೆ. ಇದನ್ನು ಜಲಚಿಹ್ನೆ ಎನ್ನುತ್ತಾರೆ.

ನಮ್ಮ ದೇಶದ ಅಂಚೆಚೀಟಿಗಳಲ್ಲಿ ಅಶೋಕಸ್ತಂಭ ನಕ್ಷತ್ರ ಮೊದಲಾದ ಜಲಚಿಹ್ನೆಗಳು ಮುಖ್ಯವಾಗಿ ಎಲ್ಲಾ ಅಂಚೆಚೀಟಿಗಳಲ್ಲಿ ಕಾಣಿಸುತ್ತದೆ.

ಅಂಚೆಚೀಟಿ ಸಂಗ್ರಹಕಾರರು ಅಂಚೆಚೀಟಿಗಳಲ್ಲಿ ಜಲಚಿಹ್ನೆಗಳನ್ನು ತಿಳಿಯಲು ವಿಶೇಷವಾದ ವಿಧಾನಗಳನ್ನು ಅನುಸರಿಸುತ್ತಾರೆ.

★★★★

ಅಂಚೆ ಇಲಾಖೆ

ಸುದ್ದಿ ಸಮಾಚಾರಗಳನ್ನೊತ್ತ ಅಂಚೆಪತ್ರಗಳನ್ನು ಮನೆಮನೆಗೆ ಬಂದು ಬಟವಾಡೆ ಮಾಡುವ ಕ್ರಿಯಾಶೀಲತೆ ಅಂಚೆ ಅಣ್ಣನದು. ಅಂಚೆಪೆಟ್ಟಿಗೆಯಲ್ಲಿ ಜನ ಹಾಕಿದ ಕಾಗದ ಪತ್ರಗಳನ್ನು ಸಂಗ್ರಹಿಸಿ, ರವಾನಿಸಿ ವಿತರಿಸುತ್ತಾರೆ. ಇಡೀ ದೇಶಾದ್ಯಂತ ಹಾಗೂ ವಿಶ್ವದಲ್ಲಿ ಈ ಸೇವೆ ವ್ಯವಸ್ಥಿತವಾಗಿ ಸಾಗುತ್ತಿದೆ. ನಮಗೆ ಸುದ್ದಿ ಸಮಾಚಾರಗಳ ಪತ್ರಿಕೆ ರೇಡಿಯೋಗಳ ಮುಖಾಂತರ ತಿಳಿಯುವ ಬಗೆ ಒಂದಾದರೆ ವೈಯಕ್ತಿಕವಾಗಿ ತಿಳಿಯಬೇಕಾದ ಸುದ್ದಿ, ಸಮಾಚಾರ, ಸಂದೇಶ ಮೊದಲಾದವು ಅಂಚೆ ಮೂಲಕ ತಿಳಿಯುತ್ತದೆ.

ಅಂಚೆ ವ್ಯವಸ್ಥೆಯು ಇಂದು ಅತ್ಯಾಧುನಿಕವಾಗಿ ಮುಂದುವರೆದಿದೆ. ಇದು ಅನೇಕ ವರ್ಷಗಳಿಂದ ನಾನಾ ದೇಶಗಳಲ್ಲಿ ಅಂಚೆ ವ್ಯವಸ್ಥೆಯಲ್ಲಾದ ಸುಧಾರಣೆಗಳ ಫಲ.

ಭಾರತದಲ್ಲಿ ಮೊಟ್ಟ ಮೊದಲ ಟೆಲಿಗ್ರಾಫ್ (ತಂತಿ) ಲೈನು ಕಲಕತ್ತಾ ಮತ್ತು ಆಗ್ರಾ ನಗರಗಳ ಮಧ್ಯೆ ೧೮೫೩ ರಲ್ಲಿ ಆರಂಭವಾಯಿತು. ೧೮೬೪ರ ಹೊತ್ತಿಗೆ ೨೧೧ ದೊಡ್ಡ ಮತ್ತು ೪೫೦ ಚಿಕ್ಕ ಅಂಚೆ ಕಛೇರಿಗಳಿದ್ದವು. ಅಂದಿಗೆ ಒಂದು ವರ್ಷದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷಕ್ಕೆ ಸರಿಯಾದ ಪೋಸ್ಟಲ್ ಆರ್ಟಿಕಲ್ಸ್ ವಿತರಣೆಯಾಗುತ್ತಿದ್ದವು.

ಸ್ವಾತಂತ್ರ ಬರುವ ಸಮಯಕ್ಕೆ ನಮ್ಮ ದೇಶಕ್ಕೆ ಆಗಲೇ ೧೧೧೬ ಅಂಚೆ ಕಛೇರಿಗಳಿದ್ದವು.

ಏಪ್ರಿಲ್ ೧. ೧೯೮೩ಕ್ಕೆ ಇವುಗಳ ಸಂಖ್ಯೆ ೧,೪೨,೨೯೬ ಆಯಿತು. ಅಂದರೆ ನಮ್ಮ ದೇಶದಲ್ಲಿ ಪ್ರತಿ ೪೮೧೫ ನಾಗರೀಕರಿಗೆ ಒಂದು ಅಂಚೆ ಕಛೇರಿಯಂತೆ ಲೆಕ್ಕ. ವಿಸ್ತೀರ್ಣ ರೀತ್ಯ ನಾವು ನೋಡಿದರೆ ಪ್ರತಿ ೨೨.೨೬ ಚದರ ಕಿಲೋಮೀಟರಿಗೆ ಒಂದು ಅಂಚೆ ಕಛೇರಿ ನೆಲಗೊಂಡಿದೆ.

★★★★

ಅಂಚೆಚೀಟಿ ಸ್ವಾರಸ್ಯ ಸಂಗತಿಗಳು

* ೧೮೫೬ ರ ಏಪ್ರಿಲ್‌ನಲ್ಲಿ ಬ್ರಿಟಿಷ್ ಗಯಾನದಲ್ಲಿ ಒಂದು ಅಂಚೆಚೀಟಿ ಅಚ್ಚಾಯಿತು. ಅದು ಈಗ ವಿಶ್ವದಲ್ಲೇ ಅತಿ ಹೆಚ್ಚು ಬೆಲೆಬಾಳುವ ಅಮೂಲ್ಯ ಅಂಚೆಚೀಟಿ ಎನಿಸಿಕೊಂಡಿದೆ. ಕೆಂಪು ವರ್ಣದ ಅತಿ ಸಾಮಾನ್ಯ ಕಾಗದದ ಮೇಲೆ ಅಚ್ಚಾಗಿರುವ ಒಂದು ಸೆಂಟ್ ಮೌಲ್ಯದ ಈ ಚೀಟಿಯ ಬೆಲೆ ಎಷ್ಟಿರಬಹುದು ಎಂದು ಊಹಿಸುವುದಕ್ಕೂ ಸಾಧ್ಯವಿಲ್ಲ. ನಮ್ಮ ಕಲ್ಪನೆಗೆ ನಿಲುಕದ್ದು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದರ ಬೆಲೆ ಒಂದು ದಶಲಕ್ಷ ಡಾಲರ್ ಇದೆ.

* ಆಧುನಿಕ ಒಲಂಪಿಕ್ ಪಂದ್ಯಗಳು ೧೮೯೬ ರಲ್ಲಿ ಏಪ್ರಿಲ್ ೬ ರಿಂದ ಗ್ರೀಸ್‌ನಲ್ಲಿ ಆರಂಭವಾದವು. ಅದಕ್ಕೂ ಮೊದಲು ಅಂದರೆ ೧೮೬೧ ರಲ್ಲೇ ಗ್ರೀಸ್‌ನಲ್ಲಿ ಅಂಚೆಚೀಟಿ ಬಳಕೆಯಲ್ಲಿತ್ತು. ಇವುಗಳಲ್ಲಿ ಅಂತಹ ಹೆಸರು ಗಳಿಸಿದ ಚೀಟಿ ಯಾವುದೂ ಇಲ್ಲ ಎನ್ನಬಹುದು. ಆದರೆ ೧೮೯೬ ಒಲಂಪಿಕ್ ಸಂದರ್ಭಕ್ಕಾಗಿ ಗ್ರೀಸ್‌ನವರು ಹೊರತಂದ ಅಂಚೆಚೀಟಿಗಳು ಪ್ರಸಿದ್ಧವಾಗಿವೆ. ಇವುಗಳ ಬೆಲೆ ಸುಮಾರು ೯೫ ಲಕ್ಷ ರೂಪಾಯಿ.

* ಅನೇಕ ಅಮೂಲ್ಯ ಅಂಚೆಚೀಟಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಳ್ಳೆ ಬೆಲೆ ಇದೆ. ರತ್ನಗಳನ್ನು ಕೊಳ್ಳುವಾಗ ಪರೀಕ್ಷಕರ ನೆರವು ಪಡೆಯುವಂತೆ ಅಂಚೆಚೀಟಿಗಳನ್ನು ಕೊಳ್ಳುವಾಗಲೂ ತಜ್ಞರ ಸಲಹೆ ಪಡೆದುಕೊಳ್ಳಲಾಗುತ್ತದೆ. ಇಲ್ಲದಿದ್ದರೆ ಮೋಸ ಹೋಗುವ ಸಂದರ್ಭಗಳು ಹೆಚ್ಚು. ಅಂಚೆಚೀಟಿಗಳನ್ನು ಕೊಳ್ಳುವ-ಮಾರುವ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳಿವೆ. ಈ ಬಗ್ಗೆ ಸಲಹೆ ನೀಡಲು ಅನೇಕ ಅಂಚೆಚೀಟಿ ಪಂಡಿತರೂ ಇದ್ದಾರೆ. ಹಾಗೆಯೇ ನಕಲಿ ಚೀಟಿ ಸೃಷ್ಟಿಸಿ ಟೋಪಿ ಹಾಕುವ ಖದೀಮರೂ ಹೇರಳವಾಗಿದ್ದಾರೆ. ಈ ಖದೀಮರು ಹೆಸರಾಂತ ಹಳೇ ಅಂಚೆಚೀಟಿಗಳನ್ನು ಮುದ್ರಿಸುವುದರ ಜೊತೆಗೆ ಹೊಸ ಚೀಟಿಗಳಲ್ಲೂ ಏನಾದರೂ ಲೋಪದೋಷ ಸೃಷ್ಟಿಸುವುದರಲ್ಲಿ ದಕ್ಷರಾಗಿರುತ್ತಾರೆ. ಆದ್ದರಿಂದ ಅಂಚೆಚೀಟಿಗಳನ್ನು ಕೊಡು-ಕೊಳ್ಳುವಾಗ ತಜ್ಞರ ಸಲಹೆ ಪಡೆಯುವುದು ಅತಿ ಮುಖ್ಯ.

* ಅಂಚೆಚೀಟಿಯು ಮುದ್ರಣಕ್ಕೆ ಒಳಗಾಗುವ ಮುಂಚೆ ಮಹತ್ವ, ವಿನ್ಯಾಸ ವರ್ಣರಂಜನೆ ಆಕಾರ ಮತ್ತು ಅಳತೆಗಳು ನಿರ್ಧಾರವಾಗಿ ಹಂತ ಹಂತದಲ್ಲಿಯೂ ಪಂಡಿತರ ಪರಿಣಿತರ ಪರೀಕ್ಷೆಗೆ ಒಳಗಾಗಿರುತ್ತದೆ. ಆದರೂ ದೋಷಪೂರಿತವಾಗಿ

ಮುದ್ರಣಗೊಂಡು ಬಿಡುಗಡೆಯಾಗಿ ಸಂಗ್ರಾಹಕರ ಕೈಸೇರಿರುವುದು ಆಶ್ಚರ್ಯ ವನ್ನುಂಟು ಮಾಡಿದೆ. ಇಂತಹ ಅಂಚೆಚೀಟಿಗಳು ಅತ್ಯಧಿಕ ಬೆಲೆಗೆ ಮಾರಾಟವಾಗಿರುವ ಸಂದರ್ಭಗಳು ಅದೆಷ್ಟೋ. ಅಪರೂಪವಾದ ಅಂಚೆಚೀಟಿಗಳನ್ನು ಸಂಗ್ರಹಿಸುವ ಕೆಲವರು ಎಷ್ಟೇ ಬೆಲೆಯಾದರೂ ಕೊಟ್ಟು ಕೊಂಡು ವಶಪಡಿಸಿಕೊಳ್ಳಲು ದೇಶ ವಿದೇಶಗಳಿಗೆ ಪ್ರಯಾಣ ಮಾಡುವುದು ಸಾಮಾನ್ಯ ಸಂಗತಿಯಾಗಿದೆ.

* ಅಪರೂಪವಾದ ಅಮೂಲ್ಯವಾದ ಅಂಚೆಚೀಟಿಗಳು ಕೋಟ್ಯಾಂತರ ರೂಪಾಯಿ ಮೌಲ್ಯಕ್ಕೆ ವಿಕ್ರಯವಾಗಿದೆ ಎಂದರೆ ವಿಸ್ಮಯ ಸಂಗತಿಯೇ ಸರಿ. ಈ ವಿಷಯವನ್ನು ಕೂಲಂಕಷವಾಗಿ ಗಮನಿಸಿದರೆ ವಜ್ರ-ವೈಡೂರ್ಯಗಳ ಬೆಲೆಯನ್ನು ಮೀರಿ ನಿಂತಿರುವುದು ವ್ಯಕ್ತವಾಗುತ್ತದೆ.

* ಪ್ರಪ್ರಥಮವಾಗಿ ಪ್ರಪಂಚದ ಇತಿಹಾಸದಲ್ಲಿ (೧೯೧೧ರಲ್ಲಿ ಅಲಹಾಬಾದ್ ನಿಂದ ನೈನಿತಾಲ್‌ಗೆ) ವಿಮಾನದ ಮೂಲಕ ಅಂಚೆ ರವಾನಿಸಿದ ದೇಶ ಭಾರತ.

* ಕಾಗದದ ಅಭಾವವಿದ್ದಾಗ ಒಂದೇ ಅಂಚೆಚೀಟಿಯನ್ನು ಇಬ್ಭಾಗ ಮಾಡಿ ಉಪಯೋಗಿಸಿರುತ್ತಾರೆ. ಅಂಚೆಚೀಟಿಗಳಲ್ಲಿ ಮುದ್ರಿತವಾಗಿರುವ ಮೂಲ ಮೌಲ್ಯ ತಿದ್ದಿ ಹೆಚ್ಚು ಅಥವಾ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿರುವ ಪ್ರಸಂಗಗಳೂ ಉಂಟು. ಆಪತ್ ಪರಿಸ್ಥಿತಿಯಲ್ಲಿ (ಯುದ್ಧ ಸಂದರ್ಭಗಳಲ್ಲಿ) ವಿನ್ಯಾಸ ಮತ್ತು ಸಿದ್ಧತೆಗಳಿಗೆ ಬೇಕಾದ ಕಾಲಾವಕಾಶ ಮುದ್ರಣಕ್ಕೆ ಬೇಕಾದ ಉಪಯುಕ್ತ ಕಾಗದ ದೊರೆಯದೆ ಹೋದಾಗ ಅವಶ್ಯಕತೆಯಿರುವ ಅಂಚೆ ಕಛೇರಿಯವರು ಸದ್ಯಕ್ಕೆ ಸಿಕ್ಕಿದ ಕಾಗದದ ಮೇಲೆ ಮುದ್ರೆ ಒತ್ತಿ ರುಜು ಮಾಡಿ, ಮೌಲ್ಯ ಬರೆದು ಅಂಚೆಚೀಟಿಗಳಾಗಿ ಉಪಯೋಗಿಸಿರುತ್ತಾರೆ.

* ಅಂಚೆಚೀಟಿ ಮಾರಾಟ ಅಥವಾ ವಿನಿಮಯ ವ್ಯವಹಾರದ ಪ್ರಥಮ ಅಂಗಡಿ ೧೮೬೧ರಲ್ಲಿ ಬ್ರಿಟನ್ನಿನಲ್ಲಿ ಪ್ರಾರಂಭವಾಯಿತು. ೧೮೬೨ರಲ್ಲೇ ಅಂಚೆಚೀಟಿ ಸಂಗ್ರಹ ಪುಸ್ತಕಗಳು ತಯಾರಿಸಲ್ಪಟ್ಟಿದ್ದವು.

* ಅಪರೂಪದ ಅಂಚೆಚೀಟಿಗಳ ಸಾಲಿನಲ್ಲಿ ಭಾರತದ ತಲೆಕೆಳಗಾದ ರಾಣಿಯ ತಲೆಹೊತ್ತ ನಾಲ್ಕಾಣೆಯ ಅಂಚೆಚೀಟಿಯು ಇಂದಿಗೂ ಮಹತ್ವ ಉಳಿಸಿಕೊಂಡಿದೆ. ೧೮೫೪ರಲ್ಲಿ ಮುದ್ರಿತವಾದ ಈ ಅಂಚೆಚೀಟಿಗಳು ಇಲಾಖೆಯ ಗಮನಕ್ಕೆ ಬಾರದೆ ಬಿಡುಗಡೆಗೊಂಡವು. ಅವುಗಳಲ್ಲಿ ಕೆಲವು ಸಂಗ್ರಹಕಾರರ ಕೈಸೇರಿ ಪ್ರದರ್ಶನದಲ್ಲಿ ಕಾಣಿಸಿಕೊಂಡವು. ೧೫೦ ವರ್ಷಗಳ ಈ ಅಂಚೆಚೀಟಿಗಳು ಜಗತ್ತಿನಲ್ಲೇ ಅತಿವಿರಳ ವಾದದ್ದೆಂದು ವಿಂಗಡಿಸಲಾಗಿದೆ.

* ರಷ್ಯಾ ಲೆನಿನ್ ಗ್ರಾಡ್‌ನಲ್ಲಿರುವ ಪೋಪ್ ಕೇಂದ್ರೀಯ ಸಂಪರ್ಕ ಮ್ಯೂಸಿಯಂ ಪ್ರಪಂಚದಲ್ಲಿಯೇ ಒಂದು ವಿಶಿಷ್ಟ ಸಂಗ್ರಹಾಲಯ. ಇಲ್ಲಿ ಲಕ್ಷಕ್ಕೂ ಹೆಚ್ಚು

ಸಂಖ್ಯೆಯ ಅಂಚೆ ಚೀಟಿಗಳಿಗೆ ೧೯೭೨ರಲ್ಲಿ ಈ ಸಂಗ್ರಹಾಲಯವನ್ನು ಸ್ಥಾಪಿಸಲಾಯಿತು.

* ಈ ಹವ್ಯಾಸವುಳ್ಳ ಮಕ್ಕಳ ಬುದ್ಧಿ ಮೇಲ್ಮಟ್ಟದ್ದಾಗಿರುತ್ತದೆ ಎಂದು ಅಮೆರಿಕಾದ ಮಕ್ಕಳ ತಜ್ಞ ಡಾ|| ಪಿ. ಆರ್. ಪಾಲ್ ಬಾಯಿಂಟನ್ ಅಭಿಪ್ರಾಯ ಪಟ್ಟಿದ್ದಾರೆ.

* ಅಂಚೆಚೀಟಿಗಳಲ್ಲಿ ಕಲಾತ್ಮಕ ಜಾಣ್ಮೆ ಮತ್ತು ಕೌಶಲ್ಯಗಳನ್ನು ತುಂಬಿರುವುದು ಅವುಗಳ ಆಕಾರದಿಂದ ತಿಳಿಯುತ್ತದೆ. ಕೆಲವು ರಾಷ್ಟ್ರಗಳು ಪ್ರತ್ಯೇಕ ಆಕರ್ಷಣೆಯ ಸಲುವಾಗಿ ತ್ರಿಕೋನಾಕಾರ, ವೃತ್ತಾಕಾರ, ಅಂಡಾಕಾರ, ವಜ್ರಾಕಾರ ರೂಢಿಗೆ ತಂದಿರುವುದೂ ಉಂಟು. ಈ ಚಿತ್ರವಿಚಿತ್ರ ಆಕಾರಗಳ ಅಂಚೆಚೀಟಿಗಳು ಶಾಶ್ವತವಾಗಿ ಬಿಡುಗಡೆಯಾಗುತ್ತಿಲ್ಲ. ಕಾರಣ ಸಾಲು ರಂಧ್ರಗಳನ್ನು ಅಳವಡಿಸುವುದು ಗೊಂದಲಮಯವಾಗಿರಬಹುದು.

* ಅಮೆರಿಕಾ ದೇಶದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ರೂಸ್‌ವೆಲ್ಟ್ ರವರು ಬಾಲ್ಯದಿಂದಲೂ ಅಂಚೆಚೀಟಿಗಳ ಸಂಗ್ರಾಹಕರಾಗಿದ್ದರು. ವಿಶ್ವದ ಬಲಶಾಲಿ ರಾಷ್ಟ್ರದ ಉತ್ತುಂಗ ಪದವಿಯಲ್ಲಿದ್ದಾಗಲೂ ದಿನವಿಡೀ ತಮ್ಮ ಕೆಲಸವನ್ನು ಮಾಡಿಕೊಂಡು ಕೆಲವು ನಿಮಿಷಗಳನ್ನು ಅಂಚೆಚೀಟಿ ಸಂಗ್ರಹಣೆಯಲ್ಲೂ ಕಳೆಯುತ್ತಿದ್ದರು.

* ಪಾರ್ಶ್ವವಾಯು ಪೀಡಿತರಾಗಿದ್ದ ಅಧ್ಯಕ್ಷರು ತಮ್ಮ ದೇಹದ ನೋವನ್ನು ಅಂಚೆಚೀಟಿಯಲ್ಲಿ ಅಡಗಿದ್ದ ಚೇತನದಿಂದ ಮರೆಯುತ್ತಿದ್ದರಂತೆ. ಅಂಚೆಚೀಟಿಗಳು ನವಚೇತನವನ್ನು ನೀಡುವ ಸಾಧನಗಳೆಂದು ಪಾಶ್ಚಾತ್ಯ ಮನಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

* ನಕಲಿ ಅಂಚೆಚೀಟಿಗಳು - ಅಂಚೆಚೀಟಿಗಳ ಮಹತ್ವ ಹಾಗೂ ಪ್ರಸಾರದ ವೈಖರಿಯನ್ನು ಕಂಡು ಕೇವಲ ದುರಾಸೆಯ ಉದ್ದೇಶದಿಂದ ಅಂತರರಾಷ್ಟ್ರೀಯ ನಿಯಮ ನಿಬಂಧನೆಗಳನ್ನು ಮೀರಿ ಹಲವಾರು ದೇಶಗಳವರು ನಕಲಿ ಅಂಚೆಚೀಟಿ ಗಳನ್ನು ಮುದ್ರಿಸಿರುತ್ತಾರೆ. ಅಜಮಾನ್ ಫ್ಯುಜೇರ್, ಭೂತಾನ್ ಮುಂತಾದ ರಾಷ್ಟ್ರಗಳಲ್ಲಿ ಈ ದುರಭ್ಯಾಸ ಹೆಚ್ಚಾಗಿದೆ. ಬೃಹತ್ ಪ್ರಮಾಣದಲ್ಲಿ ಮುದ್ರಿಸಿ ಮಾರಾಟ ಮಾಡುತ್ತಿರುವುದು ತಿಳಿದು ಬಂದಿದೆ.

* ಅಪರೂಪವಾದ ಅಂಚೆಚೀಟಿಗಳನ್ನು ನಕಲಿ ಮಾಡಿ ಮಾರಾಟ ಮಾಡಿರು ವುದು ಬೆಳಕಿಗೆ ಬಂದಿದೆ. ಆದುದರಿಂದ ಹಿರಿಯ ಅಂಚೆಚೀಟಿ ಸಂಗ್ರಾಹಕರು ಎಚ್ಚರಿಕೆ ವಹಿಸಿ ನಕಲಿ ಅಂಚೆಚೀಟಿಗಳ ಮಾರಾಟವನ್ನು ನಿರುತ್ತೇಜನಗೊಳಿಸಬೇಕು. ಹೀಗೆ ಮಾಡುವುದರಿಂದ ಅಸಲಿ ಅಂಚೆಚೀಟಿಗಳ ಪ್ರಭಾವ ಮತ್ತು ಪರಿಣಾಮ ಬೆಳೆಯುತ್ತದೆ. ವಾಸ್ತವಿಕ ಅಂಚೆಚೀಟಿಗಳನ್ನು ಗುರುತಿಸುವುದು ಅಭ್ಯಾಸಬಲದಿಂದ ಬೆಳೆಸಿಕೊಳ್ಳ ಬೇಕಾದ ಕೆಲಸ.

* ಒಂದು ಪೆನ್ನಿ ಮೌಲ್ಯದ ಎರಡು ಅಂಚೆಚೀಟಿಗಳ ಲಕೋಟೆಯೊಂದು ಮುಂಬೈನ ಥೋಜೆರೊಮ ಎಂಬುವರ ವಿಳಾಸ ಉಳ್ಳದ್ದು ೧೮೫೦ನೇ ಜನವರಿ ೪ರಂದು ಅಂಚೆಗೆ ಹಾಕಲಾಗಿದೆ. ಈ ಲಕೋಟೆಯನ್ನು ಹೊವಾರ್ಡ್ ಎಂಬುವರು ಕೊಂಡು ಅದನ್ನು ಲಂಡನ್ನಿನಲ್ಲಿ ೧೬೦ ಪೌಂಡ್‌ಗಳಿಗೆ ಮಾರಿದರು. ೧೯೦೬ ರಲ್ಲಿ ೨೨೦೦ ಪೌಂಡುಗಳಿಗೆ ಅದು ಮಾರಾಟವಾಯಿತು. ೧೯೬೮ರಲ್ಲಿ ೩,೮೦,೦೦೦ ಡಾಲರ್‌ಗಳಿಗೆ ಮಾರಲಾಯಿತು.

* ವಿಶ್ವದ ಪ್ರಥಮ ಅಂಚೆಚೀಟಿಯನ್ನು ೧೮೪೦ರ ಮೇ ಒಂದರಂದು ಲಂಡನ್‌ನಲ್ಲಿ ಮಾರಾಟಕ್ಕೆ ಬಿಡುಗಡೆ ಮಾಡಲಾಯಿತು. ಪೆನ್ನಿ ಬ್ಲ್ಯಾಕ್ ಎಂಬ ಈ ಅಂಚೆಚೀಟಿ ೧೮೪೦ರ ಮೇ ೬ರಂದು ಬೆಳಕಿಗೆ ಬಂದಿತು. ೧೮೬೩ರಲ್ಲಿ ಹೊರಡಿಸಿದ ಕೊಲಂಬಿಯನ್ ಸ್ಟೇಟ್‌ನ (ಬೊಲಿವಾರ್) ೧೦ ಸೆಂಟ್ ಮತ್ತು ಒಂದು ಪೈಸೆ ಮೌಲ್ಯ ೦.೩೧ x ೦.೩೭ ಅಂಗುಲದ ಅಂಚೆಚೀಟಿ ವಿಶ್ವದ ಅತ್ಯಂತ ಚಿಕ್ಕ ಅಂಚೆಚೀಟಿ ಯಾಗಿದೆ.

* ೧೯೨೫ರ ಕೆನ್ಯಾದ (ಜಾರ್ಜ್ ಐದನೆ ದೊರೆಯ) ಕೆಂಪು ಹಾಗೂ ಕಪ್ಪುವರ್ಣದ ನೂರು ಪೌಂಡು ಮೌಲ್ಯದ ಅಂಚೆಚೀಟಿ ಅತಿ ಹೆಚ್ಚಿನ ಮೌಲ್ಯದ ಅಂಚೆಚೀಟಿ ಎನ್ನಲಾಗಿದೆ. ೧೯೪೬ರಲ್ಲಿ ಹೊರಡಿಸಿದ ಹಂಗೇರಿಯ ೩೦೦೦ ಪೆಂಗೊ ಮೌಲ್ಯದ (ಆಗ ೧೫೦ ದಶಲಕ್ಷ ಪೆಂಗೊ = ೧ ಪೆನ್ನಿ ಇತ್ತು) ಅಂಚೆಚೀಟಿ ಅತ್ಯಂತ ಕಡಿಮೆ ಮೌಲ್ಯದ ಅಂಚೆಚೀಟಿ ಎನ್ನಲಾಗಿದೆ. ಇಂಥ ದಾಖಲೆಗಳು ಹಲವು ಇವೆ. ೧೯೧೩ರ ಚೀನಾದ ಎಕ್ಸ್‌ಪ್ರೆಸ್ ಡೆಲಿವರಿ ಚೀಟಿ ೯.೭೫ ಅಂಗುಲ ಉದ್ದ ೨.೭೫ ಅಂಗುಲ ಅಗಲವಿದ್ದಿತೆನ್ನಲಾಗಿದೆ. ಸಂಗ್ರಹಕಾರರಿಗೆ ಇವೆಲ್ಲ ಒಂದು ಕುತೂಹಲದ ವಿಷಯ. ಅಂಥ ಚೀಟಿಗಳನ್ನು ಕಂಡಾಗಲೇ ನಂಬಿಕೆ ಬರುವುದು ಎಂತಲೇ ಸಂಗ್ರಹಿಸಲು ಹಾತೊರೆಯುತ್ತಾರೆ.

★★★★

ಅಂಚೆಚೀಟಿಗಳು ವಿವಿಧ ದೇಶಗಳಲ್ಲಿ

ವಿಶ್ವಾದ್ಯಂತ ಎಲ್ಲಾ ರಾಷ್ಟ್ರಗಳ ಅಂಚೆ ಆಡಳಿತ ವ್ಯವಸ್ಥೆಯು ತನ್ನ ಮೊದಲ ಅಂಚೆಚೀಟಿಗಳನ್ನು ಹೊರತಂದ ವರ್ಷ.

೧೮೪೦	-	ಗ್ರೇಟ್ ಬ್ರಿಟನ್
೧೮೪೩	-	ಬ್ರೆಜಿಲ್, ಜಿನಿವಾ, ಜ್ಯೂರಿಚ್
೧೮೪೫	-	ಅಮೆರಿಕಾ ಸಂಯುಕ್ತ ಸಂಸ್ಥಾನ, ಬಾಸೆಲ್
೧೮೪೭	-	ಮಾರಿಷಸ್, ಟ್ರಿನಿಡಾಡ್
೧೮೪೮	-	ಬರ್ಮೂಡ
೧೮೪೯	-	ಬೆಲ್ಜಿಯಂ, ಫ್ರಾನ್ಸ್, ಬವೇರಿಯಾ
೧೮೫೦	-	ಆಸ್ಟ್ರಿಯ, ಬ್ರಿಟಿಷ್ ಗಯಾನಾ, ಸ್ಪೇನ್, ಸ್ವಿಡ್ಜರ್‌ಲ್ಯಾಂಡ್, ವಿಕ್ಟೋರಿಯಾ
೧೮೫೧	-	ಕೆನಡ, ಡೆನ್ಮಾರ್ಕ್, ಹವಾಯ್ ದ್ವೀಪಗಳು
೧೮೫೨	-	ನೆದರ್ಲ್ಯಾಂಡ್ಸ್, ಭಾರತ, ಲಕ್ಸಂಬರ್ಗ್, ರೋಮನ್‌ಸ್ಟೇಟ್ಸ್
೧೮೫೩	-	ಪೋರ್ಚುಗಲ್, ಚಿಲಿ, ಕೇಪ್ ಆಫ್ ಗುಡ್‌ಹೋಪ್
೧೮೫೪	-	ಫಿಲಿಪೈನ್ಸ್, ಆಸ್ಟ್ರೇಲಿಯಾ
೧೮೫೫	-	ಕ್ಯೂಬ, ನ್ಯೂಜಿಲ್ಯಾಂಡ್, ನಾರ್ವೆ, ಸ್ವೀಡನ್
೧೮೫೬	-	ಫಿನ್‌ಲ್ಯಾಂಡ್, ಮೆಕ್ಸಿಕೊ, ಉರುಗ್ವೆ
೧೮೫೭	-	ಶ್ರೀಲಂಕಾ, ಪೆರು, ನ್ಯೂಫೌಂಡ್ ಲ್ಯಾಂಡ್
೧೮೫೮	-	ರಷ್ಯಾ, ಅರ್ಜೆಂಟೈನಾ
೧೮೫೯	-	ವೆನಿಜೂಲ, ಫ್ರೆಂಚ್ ಕಾಲೋನಿಗಳು
೧೮೬೦	-	ಜಮೈಕಾ, ಲೈಬೀರಿಯಾ, ಪೋಲ್ಯಾಂಡ್, ಸೆಂಟ್‌ಲೂಸಿಯಾ

೧೮೬೧	-	ಗ್ರೀಸ್, ಗ್ರೆನೆಡ, ಸೆಂಟ್ ವಿನ್‌ಸೆಂಟ್
೧೮೬೨	-	ಇಟಲಿ, ಹಾಂಗ್‌ಕಾಂಗ್, ನಿಕಾರಾಗುವ ಆಂಟಿಗುವ
೧೮೬೩	-	ಟರ್ಕಿ, ಬೊಲಿವ, ಕೋಸ್ಟಾರಿಕಾ
೧೧೮೬೪	-	ಡಚ್ ಇಂಡೀಸ್, ಮೆಕ್ಲೆನ್
೧೮೬೫	-	ರುಮೇನಿಯಾ, ಈಕ್ವೆಡಾರ್, ಡೊಮಾನಿಕಾ
೧೮೬೬	-	ಈಜಿಪ್ಟ್, ಬೊಲಿವಿಯ, ಹೊಂಡುರಾಸ್
೧೮೬೭	-	ಸಲ್ವಡಾರ್, ಹೆಲಿಗೊಲ್ಯಾಂಡ್
೧೮೬೮	-	ಜರ್ಮನಿ, ಪರ್ಷಿಯ, ಆಂಟಿಕ್ವಿಯ
೧೮೬೯	-	ಜಾಂಬಿಯ, ಸರ್ವಾಕ್, ಟ್ರಾನ್ಸ್‌ವಾಲ್
೧೮೭೦	-	ಆಫ್ಘಾನಿಸ್ತಾನ, ಪೆರುಗ್ವೆ, ಅಂಗೋಲಾ, ಫಿಜಿ, ಸೆಂಟ್ ಥಾಮಸ್, ಪ್ರಿನ್ಸ್ ದ್ವೀಪಗಳು
೧೮೭೧	-	ಜಪಾನ್, ಹಂಗೇರಿ, ಗ್ವಾಟೆಮಾಲ
೧೮೭೩	-	ಕ್ಯೂಬ, ಸುರಿನಾಮ್
೧೮೭೪	-	ಲಾಗೋಸ್, ಡೆಮೆನಿಕಾ
೧೮೭೫	-	ಗೋಲ್ಡ್ ಕೋಸ್ಟ್
೧೮೭೬	-	ಮೊಜಾಂಬಿಕ್ ಜೋಹಾರ್
೧೮೭೭	-	ಸಾನ್‌ಮೆರಿನೊ, ಕೇಪ್‌ವರ್ಡ್
೧೮೭೮	-	ಹೊಂಡುರಾಸ್, ಚೀನ, ಪನಾಮ
೧೮೭೯	-	ಬಲ್ಗೇರಿಯಾ, ಬಾಸ್ನಿಯಾ, ಟೊಬ್ಯಾಗೋ
೧೮೮೦	-	ಸೈಪ್ರೆಸ್, ಕಾಮೇಲಿಯಾ
೧೮೮೧	-	ನೇಪಾಳ, ಹೈತಿ, ಪೋರ್ಚುಗೀಸ್, ಗಿನಿ
೧೮೮೨	-	ಬ್ಯಾಂಕಾಕ್, ತಹಿತಿ
೧೮೮೩	-	ಉತ್ತರ ಬೊರ್ನಿಯೊ, ಸಯಾಂ
೧೮೮೪	-	ಕೊರಿಯಾ, ಮಡಗಾಸ್ಕರ್, ಮಕಾವ್
೧೮೮೫	-	ಮೊನೆಕೊ, ಬಲ್ಗೇರಿಯಾ

೧೮೮೬	-	ಬೆಲ್ಜಿಯಂ, ಕಾಂಗೊ, ಜಿಬ್ರಾಲ್ಟರ್, ಫ್ರೆಂಚ್ ಗಯಾನಾ, ದಕ್ಷಿಣ ಆಫ್ರಿಕಾ
೧೮೮೭	-	ಸೆನೆಗಲ್
೧೮೮೮	-	ಜೂಲೂಲ್ಯಾಂಡ್, ಅನ್ನಾಮ್, ಟಾಂಕ್ವಿನ್
೧೮೮೯	-	ಇಂಡೋಚೀನ, ಫ್ರೆಂಚ್ ಮಡಗಾಸ್ಕರ್
೧೮೯೦	-	ಈಸ್ಟ್ ಆಫ್ರಿಕ, ಡಯಾಗೊ
೧೮೯೧	-	ಫ್ರೆಂಚ್ ಕಾಂಗೊ, ಮೊರಾಕೊ, ಸೆಂಗಿಲಾನ್
೧೮೯೨	-	ಕುಕ್ ದ್ವೀಪಗಳು, ಫ್ರೆಂಚ್ ಗಿನಿಯ ಐವರಿ ಕೋಸ್ಟ್
೧೮೯೩	-	ಟ್ಯಾಂಗನೀಕ
೧೮೯೪	-	ಅಬಿಸೀನಿಯಾ, ಸೂಡಾನ್, ಜಾಂಜಿಬಾರ್
೧೮೯೫	-	ಉಗಾಂಡ
೧೮೯೬	-	ರುಮೇನಿಯಾ, ಮಡಗಾಸ್ಕರ್
೧೮೯೭	-	ಕ್ಯಾಮರೂನ್, ಗ್ರಾಂಡ್ ಕೊಮೆರೊ
೧೮೯೮	-	ಪೋರ್ಚುಗೀಸ್, ನ್ಯೂಗಿನಿ
೧೮೯೯	-	ಬೊಯಕಾ, ಕ್ಯಾರೊಲಿನ್ ದ್ವೀಪಗಳು
೧೯೦೦	-	ಮಲಯ ರಾಜ್ಯಗಳು, ನೈಜೀರಿಯಾ
೧೯೦೧	-	ಕೆಮೆನ್ ದ್ವೀಪಗಳು
೧೯೦೨	-	ಸೋಮಾಲಿಲ್ಯಾಂಡ್
೧೯೦೩	-	ನೈಗರ್
೧೯೦೪	-	ಪನಾಮ ಕೆನಾಲ್ ಜೋನ್
೧೯೦೫	-	ರಿಯೋಡಿ ಜನ್ವೆರೊ
೧೯೦೬	-	ಬ್ರೂನಿ, ಮಾಂಟೀನಿಯಾ
೧೯೦೭	-	ಸಾಲೊಮನ್ ದ್ವೀಪಗಳು, ಮಿಡಲ್ ಕಾಂಗೊ
೧೯೦೮	-	ನ್ಯೂ ಹೈಬ್ರಿಡ್ಜ್
೧೯೧೦	-	ಯೂನಿಯನ್ ಆಫ್ ಸೌತ್ ಆಫ್ರಿಕ

೧೯೧೧ - ಟಿಬೆಟ್, ಗಿಲ್ಬರ್ಟ್, ಎಲ್ಲೀಸ್ ದ್ವೀಪಗಳು

೧೯೧೨ - ಎಜಿನ್ ದ್ವೀಪಗಳು

೧೯೧೩ - ಆಲ್ಬೆನಿಯಾ, ಟ್ರಿನಿಡಾಡ್, ಟೊಬ್ಯಾಗೊ

೧೯೧೪ - ನೈಜೀರಿಯಾ

೧೯೧೫ - ಸೌದಿ ಅರೇಬಿಯಾ

೧೯೧೮ - ಇರಾಕ್, ಉಕ್ರೇನ್, ಜಗೋಸ್ಲೋವಿಯಾ

೧೯೧೯ - ಸಿರಿಯಾ, ಜಾರ್ಜಿಯ

೧೯೨೦ - ಲಿಥುಯೇನಿಯ, ಆರ್ಮೇನಿಯ, ಜೋರ್ಡಾನ್

೧೯೨೧ - ನೈಗರ್, ಟೋಗೋ

೧೯೨೨ - ಬಾರ್ಬುಡ, ಐರ್ಲೆಂಡ್

೧೯೨೩ - ಕೈವಟ್, ಲೀಗ್ ಆಫ್ ನೇಷನ್ಸ್

೧೯೨೪ - ಲೆಬೆನಾನ್, ಮಂಗೋಲಿಯಾ, ರೊಡೇಸಿಯ

೧೯೨೫ - ಅಲೂವಿಟನ್

೧೯೨೬ - ಯಮೆನ್, ಉತ್ತರ ಮಂಗೋಲಿಯಾ

೧೯೨೮ - ಅಂದ್ರೋರ್ರಾ

೧೯೨೯ - ವ್ಯಾಟಿಕನ್ ಸಿಟಿ

೧೯೩೧ - ಮೋರ್ಶ್ವಿ

೧೯೩೨ - ಇನಿನಿ, ಮಂಚೂರಿಯಾ

೧೯೩೩ - ಬಹರಿನ್, ಬಸುಟುಲ್ಯಾಂಡ್

೧೯೩೭ - ಬರ್ಮಾ, ಎಡೆನ್

೧೯೩೮ - ಗ್ರೀನ್ ಲ್ಯಾಂಡ್

೧೯೩೯ - ಇಡರ್, ಸ್ಲೋವಾಕಿಯ

೧೯೪೦ - ಫೆರೋ ದ್ವೀಪಗಳು

೧೯೪೧ - ವಾನಲ್ ದ್ವೀಪಗಳು, ಕ್ರೋಟಿಯ, ಇಷ್ನಿ

೧೯೪೪ - ಫಾಕ್‌ಲ್ಯಾಂಡ್ ಐಲ್ಯಾಂಡ್

೧೯೪೫ - ಇಂಡೊನೇಷಿಯಾ ಗಣರಾಜ್ಯ, ವಿಯೆಟ್‌ನಾಂ

೧೯೪೮ - ಇಸ್ರೇಲ್, ಪೆನಾಂಗ್, ಬರ್ಲಿನ್

೧೯೪೯ - ಪೂರ್ವ ಜರ್ಮನಿ, ಪಶ್ಚಿಮ ಜರ್ಮನಿ

೧೯೫೦ - ನೇದರ್‌ಲ್ಯಾಂಡ್ಸ್, ನ್ಯೂಗಿನಿ

೧೯೫೪ - ನಾಸ್‌ಲ್ಯಾಂಡ್, ರೊಡೇಷಿಯಾ

೧೯೫೬ - ಟ್ಯುನೀಸಿಯ

೧೯೫೭ - ಕ್ವಟಾರ್ ಟೊಗೋ

೧೯೫೮ - ಕ್ರಿಸ್‌ಮಸ್ ದ್ವೀಪಗಳು, ಮಲಸಾಸೆ ಗಣರಾಜ್ಯ

೧೯೫೯ - ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್

೧೯೬೦ - ಕಾಂಗೊ, ಕ್ಯಾಮರೂನ್, ರುಮೇನಿಯಾ

೧೯೬೧ - ಟ್ರೂಸಿಯಲ್ ಸ್ಟೇಟ್ಸ್

೧೯೬೨ - ಭೂತಾನ್, ಬುರುಂಡಿ

೧೯೬೩ - ಸೌತ್ ಅರೇಬಿಯನ್ ಫೆಡೆರೇಷನ್, ಕೀನ್ಯ, ಷಾರ್ಜ

೧೯೬೪ - ಅಜಮಾನ್, ಫ್ಯೂಜೀರಾ

೧೯೬೫ - ಮನಾಮ

★★★★

ಅಂಚೆಚೀಟಿ ಗುರುತಿಸುವುದು

ಪ್ರಪಂಚದಲ್ಲಿ ಇಂದು ಸುಮಾರು ೨೭೫ ರಾಷ್ಟ್ರಗಳು ತಮ್ಮದೇ ಆದ ಅಂಚೆಚೀಟಿಗಳನ್ನು ಬಿಡುಗಡೆ ಮಾಡುತ್ತಿವೆ. ಇವುಗಳಲ್ಲಿ ಕೆಲವು ಮಾತ್ರ ಸಾಮಾನ್ಯವಾಗಿ ತಿಳಿಯುವ ಭಾಷೆಯಲ್ಲಿರುತ್ತವೆ. ಭಾರತ, ಸಿಲೋನ್, ಅಮೆರಿಕಾ, ಪಾಕಿಸ್ತಾನ ಮುಂತಾದ ದೇಶಗಳ ಅಂಚೆಚೀಟಿಗಳನ್ನು ಗುರುತಿಸುವುದು ಸುಲಭ. ಕೆಲವು ದೇಶಗಳು ಅಂಚೆಚೀಟಿಗಳ ಮೇಲೆ ತಮ್ಮ ಭಾಷೆಯನ್ನು ಮಾತ್ರವೇ ಮುದ್ರಿಸುತ್ತವೆ. ಅವುಗಳನ್ನು ಸತತ ಅಭ್ಯಾಸ, ಅಧ್ಯಯನ ಮತ್ತು ಅನುಭವಗಳಿಂದ ತಿಳಿಯಬಹುದು.

NIPPON	-	ನಿಪ್ಪಾನ್	-	ಜಪಾನ್
PHILIPINAS	-	ಫಿಲಿಫಿನಾಸ್	-	ಫಿಲಿಪೈನ್ಸ್
ESPANA	-	ಎಸ್‌ಪಾನ	-	ಸ್ಪೆಯಿನ್
HELVITICA	-	ಹೆಲ್‌ವಿಟಿಕ	-	ಸ್ವಿಡ್ಜರ್‌ಲ್ಯಾಂಡ್
MAYAGAR	-	ಮೆಯಗಾರ್	-	ಹಂಗೇರಿ
NORGE	-	ನಾರ್ಜ್	-	ನಾರ್ವೆ
C.C.O.P.	-	ಸಿ.ಸಿ.ಓ.ಪಿ.	-	ರಷ್ಯಾ
BELGE	-	ಬೆಲ್‌ಗೆ	-	ಬೆಲ್ಜಿಯಂ
SVERIGE	-	ಸರ್‌ವಿಚ್	-	ಸ್ವೀಡನ್
BAYERN	-	ಬಯರೆನ್	-	ಬವಾರಿಯ
COTE 'D' IVORE	-	ಕೋಟೆ ಡಿ. ಐವರಿ	-	ಐವರಿಕೋಸ್ಟ್
EAAAE	-	ಗ್ರೀಸ್	-	ಗ್ರೀಸ್
LIBAN	-	ಲಿಬಾನ್	-	ಲೆಬೆನಾನ್
POLSKA	-	ಪೊಲ್‌ಸ್ಕ	-	ಪೊಲಾಸ್ಕ
PERSANES	-	ಪರ್‌ಸಾನೆಸ್	-	ಪರ್ಷಿಯಾ

SOMI	-	ಸೋಮಿ	-	ಫಿನ್‌ಲ್ಯಾಂಡ್
AFGHANES	-	ಆಫ್‌ಗನೆಸ್	-	ಆಫ್‌ಘಾನಿಸ್ಥಾನ
ETHOPIE	-	ಇತೋಪಿ	-	ಅಬಿಸೀನಿಯಾ
DUCHE	-	ಡಚ್	-	ಜರ್ಮನಿ
ESCUELAS	-	ಎಸ್‌ಕುಲಾಸ್	-	ವೆನಿಜುಲ
HRVATSKA	-	ಹಾರ್‌ವಿಸ್‌ಟಿಕ	-	ಕ್ರೋಷಿಯಾ

★★★★

ಅಂಚೆಚೀಟಿ ಸಾಹಿತ್ಯ

ಅಂಚೆಚೀಟಿ ಸಂಗ್ರಹಣೆಯ ಜ್ಞಾನದ ಪಾಂಡಿತ್ಯ ಪಡೆಯಲು ಪ್ರಾರಂಭದಲ್ಲಿ ವಿಷಯ ಪಟ್ಟಿ (ಕ್ಯಾಟಲಾಗ್)ಗಳನ್ನು ಓದಬೇಕು. ಇದರಿಂದ ವಿಪುಲವಾದ ಅನೇಕ ವಿಷಯಗಳು ಹಾಗೂ ಅಂಚೆಚೀಟಿಗಳ ಬೆಲೆಕಟ್ಟುವಿಕೆ ಗೊತ್ತಾಗುವುದು. ಈ ಬಗೆಯ ಕ್ಯಾಟಲಾಗುಗಳಲ್ಲಿ ಇಡೀ ವಿಶ್ವದ ಎಲ್ಲಾ ರಾಷ್ಟ್ರಗಳೂ ಬಿಡುಗಡೆ ಮಾಡುವ ಎಲ್ಲಾ ಅಂಚೆಚೀಟಿಗಳ ವಿವರಗಳೂ ಇರುತ್ತದೆ. ಈ ರೀತಿಯ ಸಚಿತ್ರ ಕ್ಯಾಟಲಾಗ್‌ಗಳನ್ನು ಪ್ರಮುಖವಾಗಿ ಬ್ರಿಟನ್ನಿನ ಸ್ಟ್ಯಾನ್ಲಿ ಗಿಬ್ಬನ್ಸ್ ಸಂಸ್ಥೆ, ಅಮೆರಿಕಾದ ಸ್ಕಾಟ್ ಸಂಸ್ಥೆ, ಫ್ರಾನ್ಸ್‌ನ ವೈವರ್ಟ್ ಕಂಪನಿಗಳು ಪ್ರತಿವರ್ಷವೂ ಪ್ರಪಂಚದ ಪ್ರತಿ ರಾಷ್ಟ್ರ ಬಿಡುಗಡೆ ಮಾಡುವ ಎಲ್ಲಾ ಅಂಚೆಚೀಟಿ ಚಿತ್ರಗಳನ್ನೊಳಗೊಂಡ ಸಂಕ್ಷಿಪ್ತ ಮಾಹಿತಿಯನ್ನು ಕೊಡುತ್ತದೆ. ಇದಲ್ಲದೆ, ನಿಯತ ಕಾಲಿಕಗಳು ಮತ್ತು ಆಕ್ಷನ್ ಕ್ಯಾಟಲಾಗ್‌ಗಳು ಇತ್ತೀಚಿನ ಎಲ್ಲಾ ಮಾಹಿತಿಗಳನ್ನೂ ಕೊಡುತ್ತವೆ. ಇವುಗಳಲ್ಲಿ ಕೆಲವು ದೆಹಲಿ, ಕಲ್ಕತ್ತಾ ನಗರಗಳಿಂದಲೇ ಅಲ್ಲದೆ ಎಲ್ಲಾ ನಗರ-ಪಟ್ಟಣಗಳಲ್ಲಿ ಮಾಸಿಕ ನಿಯತ ಕಾಲಿಕೆಗಳನ್ನು, ಸ್ಟಾಂಪ್ ಮ್ಯಾಗಜೀನ್, ಇಂಡಿಯನ್ ಸ್ಟಾಂಪ್ ಜರ್ನಲ್, ಫಿಲೆಟೆಲಿಕ್ ಜರ್ನಲ್ ಆಫ್ ಇಂಡಿಯ ಮುಂತಾದವುಗಳನ್ನು ಹೆಸರಿಸಬಹುದು. ಇವಲ್ಲದೆ ವಿದೇಶಿಯರು ಹೊರತಂದಿರುವ ಅನೇಕ ಪುಸ್ತಕಗಳೂ ಹಾಗೂ ಭಾರತದಲ್ಲಿ ಅಂಚೆಚೀಟಿ ಸಂಗ್ರಹಣೆಯ ಪಿತಾಮಹನೆಂದು ಖ್ಯಾತನಾದ ಜಾಲ್‌ಕೂಪರ್ ಹಾಗೂ ದಸ್ತೂರ್, ಕರ್ನಲ್ ಶಣೈ, L.G., ಮುಂತಾದವರು ಬರೆದ ಅನೇಕ ಪುಸ್ತಕಗಳು ಈ ವಿಷಯದ ಬಗೆಗಿನ ಅಪಾರ ಜ್ಞಾನವನ್ನು ದೊರಕಿಸಿ ಕೊಡುತ್ತದೆ.

ಅಂಚೆಚೀಟಿಗಳು ಆಯಾ ದೇಶದ ಸಾಂಸ್ಕೃತಿಕ ರಾಯಭಾರಿಗಳು. ರಾಜಕೀಯವಾಗಿ ವಿಭಿನ್ನ ಸಿದ್ಧಾಂತಗಳನ್ನು ಪಾಲಿಸುವ ರಾಷ್ಟ್ರಗಳೂ ಅಂಚೆಚೀಟಿಗಳ ವಿನಿಮಯ ಮತ್ತು ಪ್ರಚಾರ ವಿಷಯಗಳಲ್ಲಿ ಯಾವ ರಾಷ್ಟ್ರೀಯ ನಿರ್ಬಂಧಗಳನ್ನು ವಿಧಿಸುವುದಿಲ್ಲ, ಸಂಗ್ರಹಕಾರರು ತಮ್ಮ ರಾಜ್ಯ, ರಾಷ್ಟ್ರಗಳಲ್ಲೇ ಅಲ್ಲದೆ ವಿಶ್ವದಾದ್ಯಂತ ನಡೆಯುವ ಅಂಚೆಚೀಟಿ ಪ್ರದರ್ಶನಗಳಲ್ಲಿ ಯಾವ ಅಡೆತಡೆಯೂ ಇಲ್ಲದೆ ಭಾಗವಹಿಸಬಹುದು. ಅಷ್ಟೇ ಅಲ್ಲದೆ ಪರಿಣಿತಿಯನ್ನೂ ಗಳಿಸಿ ಪರೀಕ್ಷಕರಾಗಿ (ಜ್ಯೂರಿ) ಪ್ರದರ್ಶನಗಳಲ್ಲಿ ಬಹುಮಾನಗಳನ್ನು ನಿರ್ಧರಿಸಬಹುದು. ವಿಶಾಲ ಮನೋಭಾವನೆಯನ್ನು, ಅಂತರರಾಷ್ಟ್ರೀಯ ಬಾಂಧವ್ಯವನ್ನು ಗಳಿಸುವುದರ ಮೂಲಕ ಅಂಚೆಚೀಟಿ ಸಂಗ್ರಹಕಾರರು ಶಾಂತಿ ಸಮಾಧಾನಗಳ ಹರಿಕಾರರಾಗಿ, ವಿಶ್ವಮೈತ್ರಿ, ವಿಶ್ವಶಾಂತಿಯ ರೂವಾರಿಗಳೂ ಆಗಬಹುದು.

★★★★

ಅಂಚೆಚೀಟಿ ಶಬ್ದಕೋಶ

ಅಡೆಸಿವ್ :

ಅಂಚೆಚೀಟಿಯನ್ನು ಅಂಟಿಸಲು ಸಾಧ್ಯವಾಗುವಂತೆ ಹಿಂಭಾಗದಲ್ಲಿ ಅಂಟಿನಿಂದ ಲೇಪಿಸಿರುವುದು.

ಏರೋ ಫಿಲಾಟೆಲಿ :

ವೈಮಾನಿಕ ಅಂಚೆಚೀಟಿಗಳು ಹಾಗೂ ಅಂಚೆ ಸಾಮಗ್ರಿಗಳ ಸಂಗ್ರಹಣೆ ಮತ್ತು ಅಧ್ಯಯನ.

ಬೈಸೆಕ್ಟ್ :

ಸರ್ಕಾರದ ಪರವಾನಗಿಯ ಮೇಲೆ ಉದ್ದ ಅಥವಾ ಅಡ್ಡವಾಗಿ ಕಡಿಮೆ ಬೆಲೆಯ ಚೀಟಿಯ ಅಭಾವವಿರುವಾಗ ಕತ್ತರಿಸಿದ ಅಂಚೆಚೀಟಿ.

ಬಿಷಪ್ ಮಾರ್ಕ್ :

೧೬೬೧ರಲ್ಲಿ ಹೆನ್ರಿ ಬಿಷಪ್ ಜಾರಿಗೆ ತಂದ ಪ್ರಖ್ಯಾತ ವರ್ತುಲಾಕಾರದ ಹ್ಯಾಂಡ್ ಸ್ಟ್ಯಾಂಪ್‌ನ ಗುರುತು.

ಬ್ಲಾಕ್ ಆಫ್ ಫೋರ್ :

ಹರಿಯಲಾಗದಂತೆ ಒಟ್ಟಿಗೆ ಸೇರಿದ ನಾಲ್ಕು ಅಂಚೆಚೀಟಿಗಳು.

ಕ್ಯಾಟಲಾಗ್ :

ಅಂಚೆಚೀಟಿಗಳು ಪ್ರಕಟವಾದ ಸಮಯ, ಬೆಲೆ ಹಾಗೂ ಇತರ ವಿಷಯಗಳನ್ನು ತಿಳಿಸುವ ಪುಸ್ತಕ.

ಕ್ಯಾಚೆಟ್ :

ಮೊದಲ ದಿನದ ಲಕೋಟೆ, ವಿಶೇಷ ಸಾಹಸಯಾತ್ರೆ, ವಿಶೇಷ ವಿಮಾನ ಹಾರಾಟ ಮೊದಲಾದ ಸಂದರ್ಭಗಳಲ್ಲಿ ಅಂಚೆಯ ಮೇಲೆ ಸೂಚಿಸುವ ಗುರುತು.

ಕ್ಯಾನ್ಸಲೇಷನ್ :

ಅಂಚೆಚೀಟಿಯನ್ನು ಬಳಸಲಾಗಿದೆ ಎಂದು ಸೂಚಿಸುವ ಅಂಚೆಚೀಟಿಯ ಮೇಲೆ

ಒತ್ತಿದ ಮುದ್ರೆ. ಅವು ಅಂಚೆ ಗುರುತಾಗಿರಬಹುದು, ಮಾದರಿ ಎಂಬಂತಹ ಪದಗಳಾಗಿರಬಹುದು, ರಂಧ್ರಗಳ ಗುರುತಾಗಿರಬಹುದು ಇತ್ಯಾದಿ.

ಸೆಂಟರ್ಡ್ :

ನಾಲ್ಕು ಅಂಚುಗಳಿಂದಲೂ ಸಮಾನ ದೂರದಲ್ಲಿರುವಂತೆ ಅಂಚೆಚೀಟಿಯ ಮೇಲೆ ರಚಿಸಿರುವ ವಿನ್ಯಾಸ.

ಕಾಯಿಲ್ಸ್ :

ಸುರಳಿಯ ರೂಪದಲ್ಲಿ ಪ್ರಕಟವಾದ ಅಂಚೆಚೀಟಿಗಳು.

ಕಾಂಬಿನೇಷನ್ ಕವರ್ಸ್ :

ಒಂದು ಲಕೋಟೆಯ ಮೇಲೆ ಒಂದಕ್ಕಿಂತ ಹೆಚ್ಚು ದೇಶಗಳ ಅಂಚೆಚೀಟಿಗಳಿರುವುದು.

ಕಮೂಮರೇಟಿವ್ಸ್ :

ಒಂದು ಘಟನೆ, ಒಂದು ವ್ಯಕ್ತಿ, ರಾಜಕೀಯ, ಐತಿಹಾಸಿಕ ಪ್ರಾಮುಖ್ಯತೆಯ ಸಂದರ್ಭದಲ್ಲಿ ಸ್ಮರಣಾರ್ಥವಾಗಿ ಪ್ರಕಟಿಸಿದ ಅಂಚೆಚೀಟಿ.

ಕಟ್‌ಔಟ್ಸ್ :

ಅಂಚೆ ಸಾಮಗ್ರಿಯಿಂದ ಕತ್ತರಿಸಿ ತೆಗೆದ ಬೆಲೆಯಿಲ್ಲದ ಅಂಚೆಚೀಟಿ.

ಡೆಫಿನೆಟೀಟ್ ಇಷ್ಯೂ :

ಸ್ಮಾರಕ ಸಹಾಯಾರ್ಥ ಮುಂತಾದ ಸಂದರ್ಭಗಳಿಗಲ್ಲದ ದೇಶವೊಂದು ಹೊರಡಿಸಿದ ನಿಯತ ಅಂಚೆಚೀಟಿಗಳು.

ಡೈ :

ವಿನ್ಯಾಸವನ್ನು ಕೆತ್ತಿದ ಮೂಲ ಲೋಹದ ಫಲಕ. ಇದನ್ನು ಕೆಲವು ಸಲ ಮಾಸ್ಟರ್ ಡೈಗಳು ಎಂದು ಕರೆಯಲಾಗುತ್ತದೆ. ವಿನ್ಯಾಸದ ನಕಲು ಪ್ರತಿಗಳನ್ನು ಲೋಹದ ಹಾಳೆಗಳ ಮೇಲೆ ತೆಗೆಯಲು ಇದನ್ನು ಬಳಸಲಾಗುವುದು. ಈ ನಕಲುಗಳಿಂದ ಅಂಚೆಚೀಟಿ ಮುದ್ರಿಸಲಾಗುವುದು.

ಎರರ್ :

ಸಾಮಾನ್ಯ ಅಂಚೆಚೀಟಿಗಳಿಗೆ ಹೋಲಿಸಿದಲ್ಲಿ ಕೆಲವು ಅಂಚೆಚೀಟಿಯ ಮೇಲೆ ಕಾಣಬರುವ ದೋಷ.

ಎಸ್ಸೇಸ್ :

ಬಳಕೆಯ ಸಲುವಾಗಿ ಸಲ್ಲಿಸಲ್ಪಟ್ಟ ಅಂಚೆಚೀಟಿಯ ವಿನ್ಯಾಸ. ಆದರೆ ಅಂತಿಮವಾಗಿ ಅದನ್ನು ಅಂಗೀಕರಿಸಿರುವುದಿಲ್ಲ.

ಫಸ್ಟ್‌ಡೇ ಕವರ್ :

ಅಂಚೆಚೀಟಿ ಸಾಕ್ಷ್ಯವಾಗಿ ಹೊರಡಿಸಿದ ದಿನದಂದು ಬಳಸಲಾದ ಅಂಚೆಚೀಟಿಯೊಂದಿಗಿನ ಲಕೋಟೆ.

ಫಿಸ್ಕಲ್ :

ಅಂಚೆಯೇತರ ತೆರಿಗೆಗಳನ್ನು ಸಂಗ್ರಹಿಸಲು ಬಳಸಿದ ಅಂಚೆಚೀಟಿ.

ಇಂಫರ್‌ಫೋರೇಟ್ :

ಅಂಚಿನಲ್ಲಿ ರಂಧ್ರಗಳನ್ನು ಹೊಂದಿಲ್ಲದ ಅಂಚೆಚೀಟಿಗಳು. ಇವನ್ನು ಹಾಳೆಯಿಂದ ಕತ್ತರಿಸಿ ತೆಗೆಯುವುದು ಅಗತ್ಯ.

ಇನ್‌ವರ್‌ಟೆಡ್ :

ವಿನ್ಯಾಸವು ತಲೆಕೆಳಗಾಗಿ ಬಿದ್ದಿರುವುದು. ಅಂಚೆಚೀಟಿಯ ಮೌಲ್ಯವನ್ನು ಸೂಚಿಸುವ ಅಂಕಿಗಳು ತಲೆಕೆಳಗಾಗಿ ಬಿದ್ದಿರುವುದು.

ಮಿನಿಯೇಚರ್ ಶೀಟ್ :

ವಿಶೇಷವಾಗಿ ಉತ್ಪಾದಿಸಲ್ಪಟ್ಟ ಅಂಚೆಚೀಟಿ ಹಾಳೆಗಳು. ಸಾಮಾನ್ಯವಾಗಿ ಸ್ಮಾರಕ ಸಲುವಾಗಿ ಛಾಪಿಸಿದ ಒಂದೇ ಒಂದು ಅಂಚೆಚೀಟಿ ಇರುವ ಹಾಳೆ.

ಮಿಂಟ್ :

ಸುವ್ಯವಸ್ಥಿತವಾದ ರೀತಿಯಲ್ಲಿ ಅಂಟಿನಿಂದ ಕೂಡಿದ ಅಂಚೆಚೀಟಿ.

ಮುಲ್ ರೆಡಿ :

೧೮೪೦ರಲ್ಲಿ ಬ್ರಿಟನ್‌ನಲ್ಲಿ ಹೊರಡಿಸಿದ ಮುಂದಾಗಿ ಹಣ ಪಾವತಿಯಾಗಿದ್ದ ಮೊದಲ ದಿನದ ಲಕೋಟೆ. ಇದರ ವಿನ್ಯಾಸದ ರಚನಕಾರರು ವಿಲಿಯಂ ಮುಲ್‌ರೆಡಿ.

ಓವರ್ ಪ್ರಿಂಟ್ :

ಅಂಚೆಯ ಮೂಲಮುದ್ರಣದ ನಂತರ ಅದರ ಮೇಲೆ ಹಾಕುವ ಗುರುತು. ಅದರ ಮುಖಬೆಲೆಯನ್ನು ಬದಲಿಸುವಂತಹ ಗುರುತನ್ನು ಸೂಚಿಸಲು ಅನೇಕ ಸಂಗ್ರಹಕಾರರು ಈ ಪದವನ್ನು ಬಳಸುವರು.

ಪರ್‌ಫೋರೇಷನ್ :

ಯಂತ್ರದ ಮೂಲಕ ಅಂಚೆಚೀಟಿಯ ಅಂಚಿನಲ್ಲಿ ರಂಧ್ರಗಳನ್ನು ಕೊರೆಯುವುದು. ಇದರಿಂದ ಅಂಚೆಚೀಟಿಗಳ ನಡುವೆ ಸಣ್ಣ ರಂಧ್ರಗಳಿದ್ದು ಅಂಚೆಚೀಟಿಗಳನ್ನು ಪ್ರತ್ಯೇಕಿಸುವುದು ಸುಲಭ.

ಫಿಲೆಟೆಲಿಕ್ ಬ್ಯೂರೊ :

ಅಂಚೆಚೀಟಿ ಸಂಗ್ರಹಕಾರರೊಡನೆ ವ್ಯವಹರಿಸಲು ವಿವಿಧ ಸರ್ಕಾರಗಳು ರಚಿಸಿರುವ ಕೇಂದ್ರಗಳು. ಇವನ್ನು ಅಂಚೆ ಕಛೇರಿಗಳೊಡನೆ ಸೇರಿಸಲಾಗಿರುತ್ತದೆ.

ಪ್ಲೇಟ್ ನಂಬರ್ಸ್ :

ಕೆಲವು ದೇಶಗಳು ಹೊರಡಿಸಿರುವ ಅಂಚೆಚೀಟಿಗಳ ಅಂಚಿನಲ್ಲಿ ಕಾಣುವ ಮುದ್ರಣ ಹಾಳೆಗಳ ಸರಣಿಯನ್ನು ಸೂಚಿಸುವ ಅಂಕಿಗಳು.

ಪೋಸ್ಟಲ್ ಹಿಸ್ಟರಿ :

ಸಂದೇಶಗಳ ವಿನಿಮಯದ ಪ್ರಾರಂಭದಿಂದಲೂ ರೂಪುಗೊಂಡ ಅಂಚೆ ವ್ಯವಸ್ಥೆಯು ತಿಳಿಯಪಡಿಸುವ ಸಮಾಚಾರಗಳು.

ಸೆಟೆನೆಂಟ್ :

ವಿವಿಧ ವಿನ್ಯಾಸ ಮತ್ತು ಬಣ್ಣಗಳ ಎರಡು ಅಂಚೆಚೀಟಿಗಳು ಅಕ್ಕಪಕ್ಕದಲ್ಲಿರುವುದು.

ಬಾರ್ಡ್ :

ಸಮನಾದ ಅಡ್ಡಗೆರೆಗಳಿಂದ ರದ್ದತಿಗೊಂಡ ಸಿಂಧುವಲ್ಲದ ಅಂಚೆಚೀಟಿ.

ಫ್ಯಾಸಿಮಿಲಿ :

ಅಂಚೆಚೀಟಿಯ ಪ್ರತಿರೂಪ.

ಫೇಕ್ :

ಸುಳ್ಳು ಅಂಚೆಚೀಟಿ.

ಗಟರ್ಸ್ :

ಅಂಚೆಚೀಟಿಗಳ ನಡುವಿನ ರಂಧ್ರಗಳ ಸ್ಥಳ.

ಹಿಂಜ್ :

ಅಂಚೆಚೀಟಿಯಲ್ಲದ ಒಂದು ಕಡೆ ಅಂಟು ಇರುವ ಸಣ್ಣ ಪಾರದರ್ಶಕ ಕಾಗದದ ಚೂರು.

ಫೇರ್ :

ಎರಡು ಸಂಯುಕ್ತವಾದ ಅಂಚೆಚೀಟಿಗಳು.

ರಿವರ್ಸ್ಡ್ :

ಅಂಚೆಚೀಟಿಗಳನ್ನು ತಲೆಕೆಳಗಾಗಿ ತಪ್ಪಾಗಿ ಮುದ್ರಿಸುವಿಕೆ.

ಫೋರ್ಜರಿ :

ಅಂಚೆಚೀಟಿಯ ಕಪಟ ಪ್ರತಿರೂಪ.

ಯು.ಪಿ.ಯು. :

ಪ್ರಪಂಚ ಅಂಚೆ ನಿಯಮಗಳನ್ನು ನಿಯಂತ್ರಿಸುವ ಅಂತರರಾಷ್ಟ್ರೀಯ ಸಂಸ್ಥೆ

ಫಸ್ಟ್ ಫ್ಲೈಟ್ :

ಇದು ಪ್ರಮುಖ ಏರೋ ಅಂಚೆಚೀಟಿ ಸಂಗ್ರಹ. ಇದರಲ್ಲಿ ಮೊದಲ ಹಾರಾಟಗಳಲ್ಲಿ ಒಯ್ಯಲಾಗುವ ಲಕೋಟೆಗಳ ಬಗೆ ಒತ್ತು ನೀಡಲಾಗುತ್ತದೆ.

ಫ್ರ್ಯಾಂಕಿಂಗ್ :

ಅಂಚೆ ಇಲಾಖೆಯಿಂದ ಲೈಸೆನ್ಸ್ ಪಡೆದು ಅಂಚೆ ವೆಚ್ಚವನ್ನು ವಿಶೇಷ ಯಂತ್ರದ ಮೂಲಕ ಪೂರ್ವ ಸಂದಾಯ ಮಾಡುವ ವಿಧಾನ. ಅಂಚೆ ಮೌಲ್ಯವನ್ನು ಸೂಚಿಸಿ ಗುರುತನ್ನು ಮುದ್ರಿಸುವಾಗ ಅಂಚೆ ಕಛೇರಿಗೆ ನೀಡಬೇಕಾದ ಮೊತ್ತವು ತನ್ನಿಂತಾನೇ ದಾಖಲಾಗುತ್ತದೆ.

ಸರ್ವೀಸ್ ಸ್ಟ್ಯಾಂಪ್ಸ್ :

ಸರ್ಕಾರಿ ಕಛೇರಿಗಳಿಂದ ಮಾತ್ರ ಬಳಸುವಂತಹವು.

ಮ್ಯಾಕ್ಸಿಮ್ :

ಇವು ಅಂಚೆಚೀಟಿ ನಕ್ಷೆಯನ್ನು ದೊಡ್ಡದಾಗಿಸಿರುವ ಅಥವಾ ಪಿಕ್ಚರ್ ಪೋಸ್ಟ್ ಕಾರ್ಡ್ ರೀತಿಯಲ್ಲಿ ಅಂಚೆಚೀಟಿಗೆ ಸಂಬಂಧಿಸಿದಂತೆ ಒಂದು ದೃಶ್ಯವನ್ನು ತೋರಿಸುವ ವಿಶೇಷ ಕಾರ್ಡುಗಳು.

ಸರ್ಚಾರ್ಜ್ :

ಪೂರ್ಣಗೊಂಡ ಅಂಚೆಚೀಟಿಗೆ ಹೆಚ್ಚಿನ ದರ ಮುದ್ರಿಸಿದ್ದಾಗಿರುತ್ತದೆ. ಮುಖ ಮೌಲ್ಯವನ್ನು ಬದಲಿಸಿ ಮಾಡಿದ ಓವರ್‌ಪ್ರಿಂಟ್ ಆಗಿರುತ್ತದೆ.

ಟ್ಯಾಬ್ಸ್ :

ಇವು ಅಂಚೆಚೀಟಿಗಳಿಗೆ ಅನುಬಂಧಗಳಿದ್ದಂತೆ. ವಿನ್ಯಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿರುತ್ತದೆ.

★★★★

ಅಂಚೆಚೀಟಿಯಲ್ಲಿ ಕರ್ನಾಟಕ

ಸ್ವತಂತ್ರ ಭಾರತದಲ್ಲಿ ಇದುವರೆಗೆ ಬಿಡುಗಡೆಯಾದ ಕರ್ನಾಟಕದ ಮಹಾನುಭಾವರುಗಳ ಅಂಚೆಚೀಟಿಗಳಲ್ಲಿ ಮೂಡಿ ಬಂದ ಪ್ರಥಮ ಕನ್ನಡಿಗರು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು. ಇವರ ನೂರನೇ ಹುಟ್ಟು ಹಬ್ಬದಂದು ೧೯೬೦ನೇ ಸೆಪ್ಟೆಂಬರ್ ೧೫ರಂದು ಬಿಡುಗಡೆಯಾಯಿತು. ಇದಾದ ನಾಲ್ಕು ವರ್ಷಗಳ ನಂತರ ೧೯೬೪ನೇ ಜನವರಿ ೧೪ರಂದು ಪುರಂದರದಾಸರ ೪೦೦ನೆ ಜಯಂತಿಯ ಸಂದರ್ಭದಲ್ಲಿ ೧೫ ಪೈಸೆ ಮೌಲ್ಯದ ಅಂಚೆಚೀಟಿಯೊಂದು ಹೊರಬಂದಿತು. ಮೂರನೆ ಅಂಚೆಚೀಟಿ ಬಸವೇಶ್ವರರ ೮೦೦ನೇ ಜಯಂತಿ ಸಂದರ್ಭದಲ್ಲಿ ೧೯೬೭ನೇ ಮೇ ೧೧ರಂದು ಬಿಡುಗಡೆ ಆಯಿತು. ಲಕ್ಷ್ಮಣರಾವ್ ಕಿರ್ಲೋಸ್ಕರ್ (೧೮೬೯-೧೯೫೬) ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ೨೦ ಪೈಸೆ ಮೌಲ್ಯದ ಅಂಚೆಚೀಟಿ ಜೂನ್ ೨೦, ೧೯೬೯ರಂದು ಬಿಡುಗಡೆಯಾಯಿತು. ಮೈಸೂರು ಹುಲಿ ಟಿಪ್ಪುಸುಲ್ತಾನನ (೧೭೫೦-೧೭೯೯) ಚಿತ್ರದ ಅಂಚೆಚೀಟಿಯ ಬಿಡುಗಡೆ ೧೯೭೪ ಜುಲೈ ೧೫ರಂದು ನಡೆಯಿತು. ಕಿತ್ತೂರ ರಾಣಿ ಚೆನ್ನಮ್ಮನ (೧೭೭೮-೧೮೨೯) ರ ಗೌರವಾರ್ಥವಾಗಿ ೨೫ ಪೈಸೆ ಅಂಚೆಚೀಟಿ ೧೯೭೭ನೇ ಅಕ್ಟೋಬರ್ ೨೩ರಂದು ಹೊರಬಂದಿತು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಚಿನ್ನ ತೆಗೆಯುವ ಕೆಲಸ ಪ್ರಾರಂಭವಾಗಿ ನೂರು ವರ್ಷಗಳಾದ ನಂತರ ಡಿಸೆಂಬರ್ ೨೦, ೧೯೮೦ರಂದು ಕೋಲಾರದ ಚಿನ್ನದ ಗಣಿಯ ಅಂಚೆಚೀಟಿ ಬಿಡುಗಡೆ ಹೊಂದಿತು. ಶ್ರವಣಬೆಳಗೊಳದ ಗೊಮ್ಮಟೇಶ್ವರನಿಗೆ ಸಾವಿರ ವರ್ಷಗಳು ತುಂಬಿದಾಗ ಒಂದು ರೂ. ಮೌಲ್ಯದ ಅಂಚೆಚೀಟಿ ೧೯೮೧ನೇ ಫೆಬ್ರವರಿ ೯ ರಂದು ಮಾರಾಟಕ್ಕೆ ಬಂದಿತು. ನಾಟಕಕಾರ ಬಳ್ಳಾರಿ ರಾಘವ (೧೮೮೦-೧೯೪೬) ಅವರ ಗೌರವಾರ್ಥ ಅಂಚೆಚೀಟಿಯ ಪ್ರಥಮ ಮಾರಾಟ ಅಕ್ಟೋಬರ್ ೩೧, ೧೯೮೧ರಂದು ನಡೆಯಿತು. ಬೆಂಗಳೂರಿನ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಶತಮಾನೋತ್ಸವದ ವಿಶೇಷ ಅಂಚೆಚೀಟಿ ಡಿಸೆಂಬರ್ ೩೦, ೧೯೮೬ರಂದು ಹೊರಬಂದಿತು. ಡಿ.ವಿ.ಜಿ. (೧೮೮೭-೧೯೭೫) ಅವರ ಗೌರವಾರ್ಥವಾಗಿ ೧೭-೩-೧೯೮೮ರಂದು ಅಂಚೆಚೀಟಿಗಳು ಬಿಡುಗಡೆಯಾದವು. ಭಕ್ತ ಕನಕದಾಸರ ಅಂಚೆಚೀಟಿ ಡಿಸೆಂಬರ್ ೨೬, ೧೯೯೦ರಂದು ಬಿಡುಗಡೆಯಾಯಿತು. ಮಾರ್ಚಿ ೨೮, ೧೯೯೭ರಂದು ಕನ್ನಡ ಜ್ಞಾನಪೀಠ ಪ್ರಶಸ್ತಿ ವಿಜೇತರ ಅಂಚೆಚೀಟಿ ಹೊರಬಂದಿತು. ಆಗಸ್ಟ್ ೮, ೧೯೯೭ರಲ್ಲಿ ಬಸವಣ್ಣನವರ ಅಂಚೆಚೀಟಿ ಬಿಡುಗಡೆಯಾಯಿತು. ಏಪ್ರಿಲ್ ೧, ೧೯೯೮ರಂದು

ಕೊಂಕಣರೈಲು ಅಂಚೆಚೀಟಿ ಹೊರತಂದರು. ಅಕ್ಟೋಬರ್ ೯, ೧೯೯೯ರಂದು T.M.A.ಪೈ ರವರ ಅಂಚೆಚೀಟಿ ಬಿಡುಗಡೆ ಮಾಡಿದರು. ಜನವರಿ ೧, ೨೦೦೧ರಂದು ಮಂಗಳೂರು ಸಂತ ಅಲಾಯ್ಸ್ ಕಾಲೇಜು ಶತಮಾನೋತ್ಸವ ಸಮಾರಂಭಕ್ಕೆ ಅಂಚೆಚೀಟಿ ಬಿಡುಗಡೆ ಮಾಡಿದರು. ಡಾ || ಕೆ. ಶಿವರಾಮ ಕಾರಂತರ ಅಂಚೆಚೀಟಿಯನ್ನು ೨೦೦೩ರಲ್ಲಿ ಹೊರತಂದರು. ಶ್ರೀ ಎಸ್. ನಿಜಲಿಂಗಪ್ಪನವರ ಅಂಚೆಚೀಟಿ ಬಿಡುಗಡೆಯಾಯಿತು ಹಾಗೂ ಜೋಗ್ ಜಲಪಾತದ ಅಂಚೆಚೀಟಿ ೨೦೦೪ ರಲ್ಲಿ ಬಿಡುಗಡೆಯಾಯಿತು.

ನಿಯತ ಅಂಚೆಚೀಟಿ ಸರಣಿಯಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟವು ಬಿಜಾಪುರ ಗೋಲ್‌ಗುಂಬಜ್, ಹಂಪಿ, ಏಕ ಕಲ್ಲಿನ ರಥ, ವಿಮಾನ ಕಾರ್ಖಾನೆ, ದೂರವಾಣಿ ಕೈಗಾರಿಕೆ, ಬಿದರಿ ಕಲೆ, ನಾಟ್ ವಿಮಾನ ಅಂಚೆಚೀಟಿಗಳು ಬಿಡುಗಡೆಯಾದವು.

ಭಾರತಕ್ಕೆ ಸ್ವತಂತ್ರ ಬಂದನಂತರ ಹೊರತಂದ ಅಂಚೆಚೀಟಿಗಳ ಸಂಖ್ಯೆ ಸುಮಾರು ಎರಡು ಸಾವಿರದ ನಾನೂರಕ್ಕೂ ಹೆಚ್ಚು, ಆದರೆ ಕರ್ನಾಟಕಕ್ಕೆ ಸಂಬಂಧಿಸಿದವು ಕೇವಲ ೨೯ (ಇಪ್ಪತ್ತೊಂಬತ್ತು). ನಮ್ಮ ರಾಜ್ಯ ಸಾಂಸ್ಕೃತಿಕ ಪರಂಪರೆ ಬೆಳಗಿದೆ ಹಾಗೂ ಸೃಜನಶೀಲತೆಗೆ ಇಡೀ ವಿಶ್ವದಲ್ಲಿಯೇ ಮಾನ್ಯತೆ ಪಡೆದಿದೆ. ಆದರೆ ಅಂಚೆಚೀಟಿ ಕ್ಷೇತ್ರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ. ಅಂಚೆಚೀಟಿಗಳನ್ನು ಹೊರತರುವ ಕೇಂದ್ರ ಸಂಪರ್ಕ ಸಚಿವಾಲಯದ ಅಂಚೆ ಇಲಾಖೆಯು ನೇಮಿಸುವ ''ಅಂಚೆಚೀಟಿ ಸಲಹಾ ಸಮಿತಿಯಲ್ಲಿ'' ಕರ್ನಾಟಕದ ಪ್ರಾತಿನಿಧ್ಯವೇ ಇಲ್ಲದಾಗಿದೆ. ಈ ಸಮಿತಿಯಲ್ಲಿ ಪ್ರಸಿದ್ಧ ಕಲಾವಿದರು, ಪರಿಣತರಾದ ಖಾಸಗಿ ವ್ಯಕ್ತಿಗಳು, ಇಲಾಖೆಯ ವರಿಷ್ಠ ಅಧಿಕಾರಿಗಳು ಇದ್ದು ಅಂಚೆಚೀಟಿ ಪ್ರಪಂಚದಲ್ಲಿ ಕನ್ನಡಕ್ಕೆ ಅನ್ಯಾಯವಾಗದಂತೆ ಪ್ರಯತ್ನಿಸಬೇಕು.

ಸಂತಕವಿ ಸರ್ವಜ್ಞ, ಪಂಪ, ರನ್ನ, ಕುಮಾರವ್ಯಾಸ, ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಂ.ಶ್ರೀ., ಗೋವಿಂದ ಪೈ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಶಿಶುನಾಳ ಶರೀಫ, ಸಂಗೊಳ್ಳಿ ರಾಯಣ್ಣ, ಕಲಾವಿದ ವೆಂಕಟಪ್ಪ, ಗುಬ್ಬಿ ವೀರಣ್ಣ, ಶ್ರೀ ವರದಾಚಾರ್, ಪಿಟೀಲು ಚೌಡಯ್ಯ, ವೀಣೆ ಶೇಷಣ್ಣ, ಕೆ.ಕೆ. ಹೆಬ್ಬಾರ್, ಮಂಜಯ್ಯ ಹೆಗ್ಗಡೆ, ದೇವರಾಜ ಅರಸು, ಕೆಂಗಲ್ ಹನುಮಂತಯ್ಯ, ''ವಿಧಾನಸೌಧ'', ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ಸೆಂಟ್ರಲ್ ಕಾಲೇಜು, ಲಾಲ್‌ಬಾಗ್ ಗಾಜಿನ ಮನೆ, ಬೇಲೂರು, ಹಳೆಬೀಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸೋಮನಾಥಪುರ, ಚಾಲುಕ್ಯ, ಹೊಯ್ಸಳ, ವಿಜಯನಗರ, ಗಂಗ, ಕದಂಬ, ನೃಪತುಂಗರ ಅಂಚೆಚೀಟಿಗಳನ್ನು ಬಿಡುಗಡೆ ಮಾಡಲು ಕನ್ನಡ ವೀರಕುಮಾರರು ಒತ್ತಾಯ ಮಾಡಬೇಕಾದ ಅಗತ್ಯವಿದೆ.

★★★★

ಅಂಚೆಚೀಟಿ ಕಾವ್ಯ

ಏನು ಸುಂದರ ರಮ್ಯ ನೋಟವು
ಅಂಚೆಚೀಟಿ ಪ್ರದರ್ಶನ
ಸೂರೆಗೊಂಡಿರುವುದೆನ್ನ ಮನವನು
ಬಲು ವಿಚಿತ್ರದ ದರ್ಶನ

ನೋಡೆ ಬಹುವಿಧ ಅಂಚೆಚೀಟಿಯು
ಅರಳುವುದು ಮನ ಮಲ್ಲಿಗೆ
ಸ್ವರ್ಣ ಕಾಂತಿಯ ವರ್ಣನ್ಯಾಸವ
ಕಂಡು ನಗುವುದು ಮೆಲ್ಲಗೆ

ಅಂದ ಚಂದದ ನೇರ ವಕ್ರದ
ವಿವಿಧ ರೇಖಾ ವೈಖರಿ
ಹಲವು ಘಟನೆಯ ಮಧುರ ಸ್ಮರಣೆಯ
ತೆರೆದು ತೋರುವ ಅಚ್ಚರಿ

ಅಖಿಲ ವಿಶ್ವದ ಭವ್ಯ ಚರಿತೆಯ
ರಮ್ಯ ಪುಟಗಳ ತೆರೆವುದು
ಕಾಲಚಕ್ರಕೆ ಸಿಲುಕಿ ಧೂಲಾ
ಗಿರುವ ವೈಭವ ಮೆರೆವುದು

ಯಾರು ಈ ಸರಸಿ ವದನೆಯು
ಬಳುಕುತಿಹಳಿದೊ ಲತೆಯೊಲು
ಕಲ್ಪನೆಯ ಹೂವಾಗಿ ಅರಳಿದ
ಚತುರ ಶಿಲ್ಪಿಯ ಕರದೊಳು

ರೈಲು ಯಂತ್ರದ ಬೆಡಗ ನೋಡದು
ನೀಲಿವರ್ಣದ ಸುಶೋಭಿತ
ಜೀವನದ ನಿಜಗಾಡಿ ನಡೆದಿವೆ
ಕಿರು ಕುಟುಂಬ ಸುಯೋಜಿತ

ಘನ ಮಹಾತ್ಮರ ಬಾಳ ಬೆಳಕಿನ
ತತ್ವದೀಪ್ತಿ ಪ್ರಕಾಶಿತ
ಸಮಯಕನುಗುಣವಾಗಿ ಬಹು ವಿಧ
ಅಂಚೆಚೀಟಿಗಳ್ ಪ್ರಕಟಿತ

ಅಂಚೆಚೀಟಿಯ ಚರಿತೆ ದೊಡ್ಡದು
ಅದ್ಭುತವು ರೋಮಾಂಚಕ
ಅತಿ ಮಹತ್ವದ ನಿತ್ಯ ಸತ್ಯದ
ಅಂಚೆ ಕತೆ ಬಹು ರಂಜಕ

★★★★

ಕರ್ನಾಟಕ ಗ್ರಾಮಾಂತರ ಅಂಚೆಚೀಟಿ ಸಂಗ್ರಹಕಾರರು

ಭಾರತ ಹಳ್ಳಿಗಳ ದೇಶ. ರಾಷ್ಟ್ರದ ಬಹುಪಾಲು ಜನ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ''ಹಳ್ಳಿಗಳ ಸರ್ವತೋಮುಖ ಏಳಿಗೆಯಿಲ್ಲದೆ ರಾಷ್ಟ್ರದ ಪ್ರಗತಿ ಅಸಾಧ್ಯ'' ಎಂದರು ಮಹಾತ್ಮ ಗಾಂಧೀಜಿ. ಆದರೆ ಇಂದು ನಮ್ಮ ರಾಷ್ಟ್ರಜೀವನದಲ್ಲಿ ಎಲ್ಲ ರೀತಿಯ ಸವಲತ್ತುಗಳೂ ನಗರಗಳಲ್ಲಿಯೇ ಕೇಂದ್ರೀಕೃತವಾಗಿವೆ. ಉತ್ತಮ ವಿದ್ಯಾಭ್ಯಾಸ, ಕ್ರೀಡೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಇತ್ಯಾದಿ ಚಟುವಟಿಕೆಗಳೆಲ್ಲಾ ಹೆಚ್ಚಾಗಿ ನಗರಗಳಿಗೇ ಸೀಮಿತವಾಗಿ ಹಳ್ಳಿಗಳು ಕಡೆಗಣಿಸಲ್ಪಟ್ಟಿರುವುದು ವಿಷಾದನೀಯ.

ಇಂತಹ ಪರಿಸ್ಥಿತಿಯಲ್ಲಿ ಕೆಲವು ಆದರ್ಶ ವ್ಯಕ್ತಿಗಳು, ಕೆಲವು ಸ್ವಯಂ ಸೇವಾ ಸಂಘ, ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿನಂದನೀಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯವೆಸಗುತ್ತಿರುವುದು ಸಂತಸದ ಸಂಗತಿ. ಇಂತಹ ಕಡೆಗಳಲ್ಲಿ ಬೆಳಕಿಗೆ ಬರುತ್ತಿರುವ ಗ್ರಾಮಾಂತರ ಪ್ರತಿಭೆಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗುತ್ತಿರುವುದೇ ಇದಕ್ಕೆ ಸಾಕ್ಷಿ.

ಈ ದೆಸೆಯಲ್ಲಿ ಕರ್ನಾಟಕ ಗ್ರಾಮಾಂತರ ಅಂಚೆಚೀಟಿ ಸಂಗ್ರಹಕಾರರ ಸಂಘವು ಗ್ರಾಮಾಂತರ ಪ್ರದೇಶದಲ್ಲಿ ಅಂಚೆಚೀಟಿ ಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ ತನ್ನ ಅಳಿಲು ಸೇವೆ ಅರ್ಪಿಸುತ್ತಿದೆ.

ಕೇವಲ ಆತ್ಮತೃಪ್ತಿಗಾಗಿ ಅಂಚೆಚೀಟಿ ಸಂಗ್ರಹಿಸುವವರು ವಿರಳ. ನೆರೆಹೊರೆಯವರಲ್ಲಿ, ಶಾಲಾಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಹಳ್ಳಿಗಳ ಸಮುದಾಯ, ಸಂತೆ, ಜಾತ್ರೆಗಳಲ್ಲಿ ಸಂಗ್ರಹಿಸಿರುವ ಅಂಚೆಚೀಟಿಗಳನ್ನು ಪ್ರದರ್ಶಿಸಬೇಕೆಂಬ ಮನಸ್ಸಾಗುವುದು ಸ್ವಾಭಾವಿಕ. ನಾಲ್ಕುಜನ ನೋಡಿ ಸಂತೋಷಪಟ್ಟರೆ ಅದೇ ತನಗೆ ಹೆಮ್ಮೆಯ ವಿಷಯವೆಂದು ಭಾವಿಸುವವರೂ ಇದ್ದಾರೆ. ಇದರಿಂದ ಆನಂದವನ್ನು ಹಂಚಿದ ಕೀರ್ತಿ ಪ್ರದರ್ಶಕರಿಗೆ ಸಲ್ಲುತ್ತದೆ.

ಅಂಚೆಚೀಟಿ ಪ್ರದರ್ಶನಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸ್ಥೆ ಮಾಡಬೇಕೆಂಬ ಹಂಬಲದಿಂದಲೇ ರೂಪುಗೊಂಡ ಕರ್ನಾಟಕ ಅಂಚೆಚೀಟಿ ಸಂಗ್ರಹಕಾರರು, ನಮ್ಮ ರಾಜ್ಯದ ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕು ಮೇಲೂರು ಗ್ರಾಮದಲ್ಲಿ ಪ್ರಪ್ರಥಮ ಪ್ರದರ್ಶನವನ್ನು ೧೯೭೮ರ ಜನವರಿ ೨೬ ಮತ್ತು ೨೭ರಂದು ಏರ್ಪಡಿಸಿತ್ತು. ರೂರಾಪೆಕ್ಸ್ - ೭೮ ಎಂದು ನಾಮಾಂಕಿತಗೊಂಡ ಈ ಪ್ರದರ್ಶನವು

ನಮ್ಮ ರಾಷ್ಟ್ರದಲ್ಲಿಯೇ ಪ್ರಥಮ ಪ್ರಯೋಗವೆಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅಂಚೆಚೀಟಿ ಸಾಮ್ರಾಜ್ಯದ ಅತಿರಥ ಮಹಾರಥರು ಘೋಷಿಸಿ ಆಶೀರ್ವದಿಸಿದರು.

ಗ್ರಾಮಾಂತರ ಜನತೆ ತೋರಿದ ಒಲವು ಪ್ರದರ್ಶನವನ್ನು ಜಯಪ್ರದವಾಗುವಂತೆ ಮಾಡಿತು. ಅಂಚೆ ಮತ್ತು ತಂತಿ ಇಲಾಖೆ ಈ ಪ್ರದರ್ಶನದ ಸವಿ ನೆನಪಿಗಾಗಿ ''ರೈತನೇ ಭಾರತದ ಬೆನ್ನೆಲುಬು'' ಹಾಗೂ 'ಹೆಚ್ಚು ರೇಷ್ಮೆಯನ್ನು ಬೆಳೆಯಿರಿ' ಎಂಬ ಸಂದೇಶಗಳನ್ನು ಒಳಗೊಂಡ ವಿಶೇಷ ಲಕೋಟೆಯನ್ನು ಬಿಡುಗಡೆ ಮಾಡಿದರು.

ಸುತ್ತಮುತ್ತಲಿನ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳು, ಮಹಿಳೆಯರು, ಮಹಾಜನತೆ ಪ್ರದರ್ಶನವನ್ನು ವೀಕ್ಷಿಸಿ ಸಂತೋಷಪಟ್ಟರು. ಈ ಪ್ರದರ್ಶನವನ್ನು ವೀಕ್ಷಿಸಿದ ಗ್ರಾಮಸ್ಥರು ಪ್ರಭಾವಿತರಾದಂತೆ ಅವರ ಮಾತುಕತೆಗಳಿಂದ ತಿಳಿದುಬಂತು. ವಿದ್ಯಾರ್ಥಿ, ತರುಣರಲ್ಲಿ ಅಂಚೆಚೀಟಿಗಳ ಅಂತರಾರ್ಥ, ಅಲಂಕಾರ, ವರ್ಣರಂಜನೆ ಕುರಿತಾಗಿ ಹರ್ಷದಾಯಕವಾದ ಸಂವಾದಗಳು ಕೇಳಿಬಂದವು. ಅವರ ಕಣ್ಮನಗಳು ಹೊರಸೂಸಿದ ಅಮಿತಾನಂದ ಉತ್ಸಾಹಗಳಿಂದ ಜನಜಾಗೃತಿ ಉಂಟಾಯಿತೆಂದು ಹೇಳಬಹುದು. ಈ ಪ್ರದರ್ಶನದ ಸಂದರ್ಭದಲ್ಲಿ ವೀಕ್ಷಕರು ಬರೆದಿರುವ, ಸಲಹೆಗಳು, ಟಿಪ್ಪಣಿಗಳು ಅತ್ಯಂತ ಉಪಯುಕ್ತಕಾರಿಯಾಗಿವೆ. ಅಲ್ಲದೆ ಇಂತಹ ಪ್ರದರ್ಶನಗಳಿಂದ ಹವ್ಯಾಸದ ಸಂದೇಶಗಳನ್ನು ಶ್ರೀಸಾಮಾನ್ಯರಿಗೆ ತಲುಪಿಸಿದಂತೆ ಆಗುತ್ತದೆ ಎನ್ನುವುದು ಅನುಭವದಿಂದ ತಿಳಿದುಬಂತು.

ನಮ್ಮ ರಾಜ್ಯದ ಪ್ರತಿ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಹಾಗೂ ಮಹಾಜನತೆಯಲ್ಲಿ ಅಂಚೆಚೀಟಿ ಸಂಗ್ರಹಣೆಯ ಬಗ್ಗೆ ಆಸಕ್ತಿ ಮೂಡಿಸಿ ಅಭಿರುಚಿ ಹೆಚ್ಚಿಸಲು ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶನ ಏರ್ಪಡಿಸಿ ಪ್ರಚಾರ ಕೈಗೊಳ್ಳುವ ದೆಸೆಯಲ್ಲಿ ಇಲ್ಲಿಯವರೆಗೂ ೧೦೦೦ ಪ್ರದರ್ಶನಗಳನ್ನು ಶಾಲಾಕಾಲೇಜು ಮತ್ತು ಸಂಘ, ಸಂಸ್ಥೆ ಸಭೆ, ಸಮಾರಂಭಗಳಲ್ಲಿ ಏರ್ಪಡಿಸಿರುತ್ತೇವೆ.

ಅಂಚೆಚೀಟಿ ಸಂಗ್ರಹಣೆಯ ವಿಚಾರವಾಗಿ ಕುರಿತ ಲೇಖನಗಳನ್ನು ವೃತ್ತಪತ್ರಿಕೆ, ವಾರಪತ್ರಿಕೆ ಮತ್ತು ಮಾಸ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳು ಏರ್ಪಡಿಸುತ್ತಿರಬೇಕು. ಮಾಧ್ಯಮಗಳಲ್ಲಿ ಈ ಕಾರ್ಯಕ್ರಮಗಳು ನಡೆಯುತ್ತಿದ್ದರೆ ಗ್ರಾಮಾಂತರ ಜನತೆಯಲ್ಲಿ ಪರಿಣಾಮಕಾರಿಯಾದ ಆಸಕ್ತಿಯನ್ನು ನಿರಂತರವಾಗಿ ಹೊರಹೊಮ್ಮಿಸಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯದ ಕೆಲವಾರು ಅಂಚೆಚೀಟಿ ಸಂಗ್ರಹಕಾರರು ಲೋಕಪ್ರಸಿದ್ಧರಾಗಿದ್ದಾರೆ. ಅವರು ಅಷ್ಟು ಮಾತ್ರಕ್ಕೆ ತೃಪ್ತರಾಗದೆ ತರುಣ ತಲೆಮಾರುಗಳಲ್ಲಿಯೂ ಈ ಗಹನ ವಿಷಯವನ್ನು ಕುರಿತು ಹುಮ್ಮಸ್ಸು ಪ್ರೇರೇಪಿಸುವ ಬಗ್ಗೆಯೂ ಆಸಕ್ತರಾಗಿದ್ದಾರೆ.

ಕರ್ನಾಟಕ ಅಂಚೆಚೀಟಿ ಸಂಗ್ರಹಕಾರರ ಸಂಘವು ಈ ಜನಪ್ರಿಯ ಹವ್ಯಾಸವನ್ನು ರಾಜ್ಯದ ಹಳ್ಳಿಹಳ್ಳಿಗೂ ಪರಿಚಯಿಸುವ ಪ್ರಯತ್ನವನ್ನು ಕೈಗೊಂಡಿದೆ. ಈ ಮೂಲಕ ನೂರಾರು, ಸಾವಿರಾರು ಅಂಚೆಚೀಟಿ ಸಂಗ್ರಹಕಾರರು ಮುಖ್ಯ ಕರ್ತವ್ಯವೆಂದು ಪಾಲಿಸಲು ಪಣತೊಟ್ಟು ಕಾರ್ಯ ಪ್ರವೃತ್ತರಾಗಬೇಕು. ಹೀಗೆ ಮಾಡುವುದರಿಂದ ಹುಟ್ಟಿ ಬೆಳೆದ ನಾಡಿಗೂ ನುಡಿಗೂ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಗ್ರಾಮಾಂತರ ಪ್ರದೇಶಗಳಲ್ಲಿ ಅಂಚೆಚೀಟಿ ಪ್ರದರ್ಶನಗಳನ್ನು ಏರ್ಪಡಿಸುವುದರಿಂದ ಕಿರಿದಾದ ಅಂಚೆಚೀಟಿಗಳಲ್ಲಿ ಎಷ್ಟು ಮಹತ್ವಪೂರ್ಣ ಅರ್ಥ ಅಡಗಿದೆ ಎಂಬುದು ಲೋಕವಿದಿತವಾಗುತ್ತದೆ.

ಅಂಚೆಚೀಟಿ ಸಂಗ್ರಹಣೆಯು ವಿಶ್ವಮಾನ್ಯ ಹವ್ಯಾಸ. ಈ ಹವ್ಯಾಸಕ್ಕೆ ವಯೋಮಿತಿಯ ಅಂತರವಿಲ್ಲ. ಅಸಾಮಾನ್ಯನಿಂದ ಶ್ರೀಸಾಮಾನ್ಯನವರೆಗೆ ಮನ್ನಣೆ ಮಾನ್ಯತೆಗೆ ಪಾತ್ರವಾಗಿದೆ. ಅಂಚೆಚೀಟಿಗಳಿಂದ ಮನರಂಜನೆ ಮಾತ್ರವಲ್ಲದೆ ಬಿಡುವಿನ ವೇಳೆಯ ಸದ್ವಿನಿಯೋಗ, ಅಪಾರವಾದ ಜ್ಞಾನ ಸಂಪಾದನೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಇತಿಹಾಸ, ಕಲೆ, ಕಸಬು, ಕ್ರೀಡೆ, ವಿಜ್ಞಾನ ಮತ್ತು ಮುನ್ನಡೆಗಳನ್ನು ಶಾಸ್ತ್ರೀಯವಾಗಿ ತಿಳಿಯಬಹುದು. ಸತತ ಶ್ರದ್ಧೆ ಮತ್ತು ಉತ್ಸಾಹಗಳಿಂದ ಕೂಡಿದ ಸಂಗ್ರಹಕಾರರ ಭಾಗ್ಯದ ಬಾಗಿಲನ್ನೇ ತೆರೆಯಬಹುದು.

ಪ್ರಪಂಚದ ಪ್ರಪ್ರಥಮ ಅಂಚೆಚೀಟಿಯನ್ನು ಬ್ರಿಟನ್ನಿನಲ್ಲಿ ಒಂದು ಸಾವಿರದ ಎಂಟುನೂರ ನಲವತ್ತನೆ ಇಸವಿ ಮೇ ತಿಂಗಳು ನಾಲ್ಕನೆಯ ತಾರೀಖು ಪ್ರಕಟಿಸಿದರು. ಆ ಲಾಗಾಯಿತು ಅಂದಿನಿಂದ ಇಂದಿನವರೆಗೂ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ವಿವಿಧ ಬಗೆಯ ಎಲ್ಲಾ ವಿಷಯಗಳಿಗೂ ಸಂಬಂಧಪಟ್ಟ ಅಂಚೆಚೀಟಿಗಳನ್ನು ಜಗತ್ತಿನಾದ್ಯಂತ ಎಲ್ಲಾ ರಾಷ್ಟ್ರಗಳೂ ಬಿಡುಗಡೆ ಮಾಡಿವೆ. ಈ ಹವ್ಯಾಸ ಪ್ರಾರಂಭ ದೆಸೆಯಲ್ಲಿಯೇ ಜನಾನುರಾಗ ಗಳಿಸಿ ಎಲ್ಲೆಡೆಯಲ್ಲಿಯೂ ಶೀಘ್ರವಾಗಿ ಹರಡಿತು. ಅಗಾಧವಾಗಿ ಬೆಳೆದಂತೆ ಅಂಚೆಚೀಟಿಗಳ ಮುಖಾಂತರ ಕಲೆ, ಸಂಸ್ಕೃತಿ, ದೇಶದ ಸ್ಥಿತಿಗತಿ ಮೊದಲಾದುವುಗಳನ್ನು ಪ್ರಸಾರ ಸಾಧನವಾಗಿ ಬೆಳೆಸಿಕೊಳ್ಳುವ ಕ್ರಮವನ್ನು ಎಲ್ಲಾ ದೇಶಗಳೂ ಕೈಗೊಂಡವು. ಪ್ರತಿವರ್ಷವೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹನೀಯರ ದಿನಾಚರಣೆಗಳ, ಪಶುಪಕ್ಷಿ, ಜಲಚರ, ಕ್ರಿಮಿಕೀಟಗಳ, ಕೈಗಾರಿಕೆ, ವ್ಯವಸಾಯ ಉತ್ಪನ್ನಗಳ, ಪ್ರಾಚೀನ ಹಾಗೂ ನವ್ಯಕಲೆಗಳ, ಸಾಂಸ್ಕೃತಿಕ ಕಾರ್ಯಕ್ರಮಗಳ, ಕ್ರೀಡಾ ಚಟುವಟಿಕೆಗಳ, ಶತಮಾನೋತ್ಸವಗಳ ಚಿನ್ನ, ಬೆಳ್ಳಿ ಹಬ್ಬಗಳ, ವಜ್ರ ಮಹೋತ್ಸವಗಳ, ಸಮ್ಮೇಳನಗಳ, ವಿಶ್ವ ಹಸಿರುಕ್ರಾಂತಿ, ವಿಶ್ವ ಕ್ಷೀರ ಕ್ರಾಂತಿ, ಅಂತರರಾಷ್ಟ್ರೀಯ ಮಹಿಳಾ ವರ್ಷ, ಮಕ್ಕಳ ವರ್ಷ, ಅಂಗವಿಕಲರ ವರ್ಷ. ಯುವಕ ವರ್ಷ, ಅಪರೂಪ ಸಂಗತಿಗಳು, ವೇಷಭೂಷಣಗಳು, ಆಚಾರ, ವಿಚಾರ,

ಪ್ರಚಾರಗಳೂ ಕುರಿತಾದ ಅನೇಕಾನೇಕ ಅಂಚೆಚೀಟಿಗಳನ್ನು ಜಗತ್ತಿನಾದ್ಯಂತ ಬಿಡುಗಡೆ ಮಾಡುತ್ತಿರುವರು. ಅಂಚೆಚೀಟಿಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅಪಾರ ಜ್ಞಾನ, ಪ್ರಚಾರಲಾಭ ಮತ್ತು ಆರ್ಥಿಕ ಲಾಭವೂ ಸಹ ದೊರೆಯತೊಡಗಿತು.

ಅಂಚೆಚೀಟಿಗಳ ಸಂಗ್ರಹಣೆಯನ್ನು ಅನುಭವಿ ಹಿರಿಯರು ಒಂದು ಲಘು ಸಂಗ್ರಹಾಲಯವೆಂದು ಕರೆಯುತ್ತಾರೆ, ಅಲ್ಲದೆ ರಾಷ್ಟ್ರದ ರಾಯಭಾರಿಗಳೆಂದೂ ಆಧಾರ ಸ್ತಂಭಗಳೆಂದೂ, ಬೆಳಕಿನ ಕಿಂಡಿಗಳೆಂದೂ, ಜ್ಞಾನ ಜ್ಯೋತಿಗಳೆಂದೂ ಸಂಸ್ಕೃತಿಯ ಪ್ರತೀಕಗಳೆಂದೂ ಮನಗಂಡಿದ್ದಾರೆ.

ಸಾವಿರಾರು ಶಬ್ದಗಳಿರುವ ಗ್ರಂಥಗಳು ಮಾಡುವ ಕೆಲಸವನ್ನು ಈ ಪುಟ್ಟ ಚೀಟಿಗಳು ಮಾಡುತ್ತವೆ. ಆಸಕ್ತಿ, ಶ್ರದ್ಧೆ, ನಿರಂತರ ಪ್ರಯತ್ನ ಎಡೆಬಿಡದ ಪರಿಶ್ರಮವಿದ್ದರೆ ಸಾಕು ಈ ಹವ್ಯಾಸವನ್ನು ಪ್ರಾರಂಭಿಸಿ ಬೆಳೆಸಿಕೊಳ್ಳಬಹುದು. ಅಂಚೆಚೀಟಿ ಸಂಗ್ರಹಣೆ, ವಿತರಣೆ, ಪ್ರದರ್ಶನಗಳಿಗೆ ಮೀಸಲಾದಂತಹ ನೂರಾರು ನಿಯತಕಾಲಿಕೆಗಳು, ಮತ್ತು ಪುಸ್ತಕಗಳು, ಸಂಪುಟಗಳು ಪ್ರಕಟವಾಗುತ್ತಿವೆ. ಕೆಲವು ಪತ್ರಿಕೆಗಳು ಶತಮಾನೋತ್ಸವ ವನ್ನೂ ಆಚರಿಸಿವೆ. ಮೊದಲ ನೋಟಕ್ಕೆ ಕಷ್ಟವೆನಿಸಿದರೂ ಕೆಲವೊಂದು ಸಾಮಾನ್ಯ ನಿಯಮಗಳನ್ನು ಅನುಸರಿಸುವುದರಿಂದ ಈ ಹವ್ಯಾಸವನ್ನು ಸುಲಲಿತವಾಗಿಯೂ ಶೀಘ್ರವಾಗಿಯೂ ಬೆಳೆಸಿಕೊಳ್ಳಬಹುದು.

ನಮ್ಮ ರಾಷ್ಟ್ರದ ಸ್ವತಂತ್ರ ಸಾರ್ವಭೌಮ ಜೀವನವನ್ನು ನಿರ್ಮಿಸಿಕೊಟ್ಟ ಮಹನೀಯರುಗಳ ಜೀವನ ಚರಿತ್ರೆ, ಅವರ ದೇಶಪ್ರೇಮ, ನಿಸ್ವಾರ್ಥ ಸೇವೆ, ಸ್ವಯಂ ಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳನ್ನು ಪ್ರತಿಬಿಂಬಿಸಿ ಸ್ಫೂರ್ತಿ ಉತ್ಸಾಹ ಗಳನ್ನು ಕೋಟಿ ಕೋಟಿ ಭಾರತೀಯರಾದ ನಮ್ಮೆಲ್ಲರಲ್ಲಿಯೂ ಮೂಡಿಸುವ ಆದರ್ಶ ಈ ಅಂಚೆಚೀಟಿಗಳಲ್ಲಿ ಅಡಗಿದೆ.

ನಮ್ಮ ಸಂಸ್ಕೃತಿ, ಇತಿಹಾಸ, ಪರಂಪರೆ, ತತ್ವಜ್ಞಾನ, ಜೀವನಾದರ್ಶಗಳ ಹಿರಿಮೆ ಈ ಲೋಕದಲ್ಲಿ ಸರಿಸಾಟಿಯಿಲ್ಲದ್ದು. ಇವುಗಳನ್ನು ಜಗತ್ತಿನ ಮೂಲೆಮೂಲೆಗೂ ಸುಲಭವಾಗಿ ಪ್ರಚಾರ ಮಾಡುವ ಚಿಕ್ಕ ಚಿತ್ರ ಸಾಧನಗಳಾಗಿವೆ ಅಂಚೆಚೀಟಿಗಳು.

ಅಂಚೆಚೀಟಿ ಸಂಗ್ರಹಣೆಯು ನಾಗರೀಕತೆಯ ತೊಟ್ಟಿಲು. ಇವುಗಳಲ್ಲಿ ಆದರ್ಶದ ಕೊನೆಯಿಲ್ಲ, ಮಾರ್ಗದರ್ಶನಕ್ಕೆ ಮಿತಿಯಿಲ್ಲ, ಅಂಚೆಚೀಟಿಗಳು ತರುಣ ಪೀಳಿಗೆಯನ್ನು ಎಚ್ಚರಿಸಿ ಮುನ್ನಡೆಸುವ ದಾರಿದೀಪಗಳಾಗಿವೆ.

ಪುರಾತನ ವಾಸ್ತುಶಿಲ್ಪ, ಧಾರ್ಮಿಕ ಆಚಾರ್ಯರೂ, ತತ್ವಜ್ಞಾನಿಗಳೂ, ಸ್ವತಂತ್ರ ವೀರರೂ, ವಿದ್ಯಾ ಸಂಪನ್ನರು, ಸಮಾಜೋದ್ಧಾರಕರೂ, ರಾಜಕೀಯ ನಿಪುಣರು, ಹೆಸರಾಂತ ವಿಜ್ಞಾನಿಗಳೂ, ಸಸ್ಯ ಸಂಪತ್ತು, ವನ್ಯ ಜೀವನ, ನಿಸರ್ಗ ಸೌಂದರ್ಯ

ಕುರಿತಾಗಿ ಅನೇಕ ಅಂಚೆಚೀಟಿಗಳು ಬಿಡುಗಡೆಯಾಗಿದೆ. ಅಲ್ಲದೆ ಕವಿ ಕಲಾವಿದರು, ಸಾಹಸಶೂರರೂ, ನಟಸಾರ್ವಭೌಮರೂ, ಕ್ರೀಡಾಪಟುಗಳು, ನೃತ್ಯ, ಸಂಗೀತ ಸಾಹಿತ್ಯವೇತ್ತರೂ, ಜಾನಪದ, ಗ್ರಾಮೀಣ ಜೀವನ, ರಾಷ್ಟ್ರದ ಯೋಜನೆ ಮತ್ತು ಅಭಿವೃದ್ಧಿ ಮುಂತಾದ ಹತ್ತು ಹಲವಾರು ವಿಷಯಗಳಲ್ಲಿ ಅಂಚೆಚೀಟಿಗಳು ಬಿಡುಗಡೆ ಯಾಗಿವೆ. ಈ ಮೂಲಕವಾಗಿ ಪ್ರಪಂಚದ ಇತಿಹಾಸ, ಸಂಸ್ಕೃತಿ, ಸ್ನೇಹ ಸೌಹಾರ್ದ, ವಿಶ್ವಶಾಂತಿಯ ಸಂದೇಶಗಳನ್ನು ಅಂಚೆಚೀಟಿಗಳು ಪ್ರಗತಿಪರವಾದ ರೀತಿಯಲ್ಲಿ ಪ್ರತಿಬಿಂಬಿಸತೊಡಗಿವೆ. ಹೀಗಾಗಿ ವಿನ್ಯಾಸ, ವರ್ಣರಂಜನೆ, ಮುದ್ರಣ ಮತ್ತು ವಿಚಾರ ವೈವಿಧ್ಯತೆಗಳಲ್ಲಿ ಭಾರತದ ಅಂಚೆಚೀಟಿಗಳು ಜಗತ್ತಿನಾದ್ಯಂತ ಇರುವ ಅಂಚೆಚೀಟಿ ಸಂಗ್ರಹಕಾರರ ಆದ್ಯ ಗಮನವನ್ನು ಸೆಳೆದಿದೆ.

ಈ ಹವ್ಯಾಸದಿಂದ ವಿಶಾಲ ಮನೋಭಾವನೆ ಏರ್ಪಟ್ಟು ಮಧುರ ಬಾಂಧವ್ಯ, ಸ್ನೇಹಪೂರ್ಣ ಅದಲು-ಬದಲು ವ್ಯವಹಾರ ವಿನಿಮಯಗಳಿಗೆ ದಾರಿಯಾಗುತ್ತದೆ. ಅಂಚೆಚೀಟಿಯ ಬಿಡುಗಡೆ ಮತ್ತು ಪ್ರಚಾರಕ್ಕೆ ರಾಷ್ಟ್ರೀಯ ನಿರ್ಬಂಧನಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ರಾಜಕೀಯವಾಗಿ ವಿಭಿನ್ನ ಸಿದ್ಧಾಂತಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ರಾಷ್ಟ್ರಗಳು ಇತರೆ ದೇಶಗಳ ಅಂಚೆಚೀಟಿ ಪ್ರಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಕಾಲಕ್ರಮೇಣ ವಿಭಿನ್ನತೆಯು ದೂರವಾಗಿ ಐಕ್ಯವಾಗುವ ಸಾಧ್ಯತೆಯನ್ನು ಅಂಚೆಚೀಟಿ ಕಲ್ಪಿಸಬಹುದು.

★★★★

ಅಂಚೆಚೀಟಿಯಲ್ಲಿ ವಿಶ್ವ ಸಿನೆಮಾ

ಸಿನೆಮಾ ಎಂಬುದು ಈ ಭೂಮಿಯ ಮೇಲಿನ ಅದ್ಭುತಗಳಲ್ಲೊಂದು. ಕಳೆದ ಶತಮಾನದಲ್ಲಿ ಆವಿಷ್ಕಾರಗೊಂಡ ಈ ವೈಜ್ಞಾನಿಕ ಕಲೆ ಇಂದು ಇಡೀ ಜಗತ್ತನ್ನು ಆವರಿಸಿ ಕೋಟ್ಯಾಂತರ ಮಂದಿಗೆ ಮನರಂಜನೆಯನ್ನು ಲಕ್ಷಾಂತರ ಮಂದಿಗೆ ಅನ್ನವನ್ನು ನೀಡುತ್ತದೆ. ವಿಶ್ವದ ಅತಿ ದೊಡ್ಡ ವ್ಯಾಪಾರವಾಗಿ ಹೊರಹೊಮ್ಮಿರುವ ಚಲನಚಿತ್ರಕ್ಕೆ ನಾಂದಿ ಹಾಡಿದ್ದು ಲ್ಯೂಮನರಿ ಸಹೋದರರು. ೧೮೯೬ ಫೆಬ್ರವರಿ ೨೦ರಂದು ಲಂಡನ್‌ನ ರೀಜೆಂಟ್ ರಸ್ತೆಯ ರಾಯಲ್ ಪಾಲಿಟೆಕ್ನಿಕ್‌ನಲ್ಲಿ ಚಲಿಸುವ ದೃಶ್ಯಗಳಿಂದ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿದ ಲೂಯಿಸ್ ಲ್ಯೂಮರಿ ಹಾಗೂ ಆಗಸ್ಮಿನ್ ಲ್ಯೂಮನರಿ ಸಹೋದರರು ಪ್ರಪಂಚಕ್ಕೆ ಹೊಸ ವಿಷಯವನ್ನು ಪರಿಚಯಿಸಿದರು. ಲ್ಯೂಮನರಿ ಸಹೋದರರು ಮೊದಲು ಪಿನ್ ಹೋಲ್ ಕ್ಯಾಮರಾದಲ್ಲಿ ಚಿತ್ರಕ್ಕೆ ಸೌಂಡ್ ಎಫೆಕ್ಟ್ ಕೊಟ್ಟು ಆಕೃತಿಗಳನ್ನು ಪರದೆಯ ಮೇಲೆ ಮೂಡಿಸಿದರು. ನಾಲ್ಕಾರು ಮಂದಿ ಇದ್ದರು. ಆದರೆ ಈ ಲ್ಯೂಮನರಿ ಸಹೋದರರು ತಾವು ತಯಾರಿಸಿದ ಚಿತ್ರಗಳನ್ನು ಮೊದಲು ಫ್ರಾನ್ಸ್‌ನಲ್ಲಿ ಹಾಗೂ ವಿಶ್ವದ ಪ್ರಮುಖ ನಗರಗಳಲ್ಲಿ ಪ್ರದರ್ಶನ ಮಾಡಿ ಹೆಸರು ಮಾಡಿದರು ಹಾಗೂ ಹಣ ಕೂಡ.

ಸಿನೆಮಾ ಈಗ ಅತಿದೊಡ್ಡ ಹಾಗೂ ವ್ಯಾಪಕವಾದ ಸಮುದಾಯ ಮಾಧ್ಯಮ ಗಳಲ್ಲಿ ಮುಖ್ಯವಾದುದು. ಈ ಜನಪ್ರಿಯ ಮಾಧ್ಯಮ ಹವ್ಯಾಸಗಳಲ್ಲಿ ಅಗ್ರಸ್ಥಾನ ದಲ್ಲಿರುವ ಅಂಚೆಚೀಟಿಗಳ ಮೇಲೂ ಖ್ಯಾತಿ ಗಳಿಸಿದೆ.

ಚಲಿಸುವ ಮೂಕಿ ಚಿತ್ರದಿಂದ ಹಿಡಿದು ಮಾತನಾಡುವ ಚಿತ್ರ ತಯಾರಾಗಿ ಪರದೆ ಮೇಲೆ ಮೂಡುವ ಮೂಲಕ ಜನರನ್ನು ಸೆಳೆದಂತೆ ಅಂಚೆಚೀಟಿಗಳ ಮೇಲೆ ಸಿನೆಮಾ ವಿಷಯಗಳೂ - ಸಂಗ್ರಹಕಾರರನ್ನು ಆಕರ್ಷಿಸುತ್ತವೆ. ಸಿನೆಮಾ ವಿಷಯಗಳು ಚಿತ್ರ ಕಲಾವಿದರನ್ನು ಅಂಚೆಚೀಟಿಗಳ ಮೇಲೆ ಮುದ್ರಿಸಿದ ಮುಖ್ಯ ದೇಶ - ರಷ್ಯಾ. ಇಂಗ್ಲೆಂಡ್, ಭಾರತ, ಅಮೆರಿಕಾಗಳೂ ಹಿಂದೆ ಬಿದ್ದಿಲ್ಲ. ೧೯೪೦ರ ಸುಮಾರಿಗೆ ವಾಲ್ಟರ್ ಡಿಸ್ನಿ ಚಿತ್ರಸರಣಿ ಅಂಚೆಸರಣಿಯಾಗಿ ಹೊರಬಿದ್ದಿತು. ಆ ಬಳಿಕ ಸಿನೆಮಾ ಅಂಚೆಚೀಟಿಗಳನ್ನು ಹಲವಾರು ದೇಶಗಳು ಹೊರತಂದಿವೆ.

ಸಿನಿಮಾಕ್ಕೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಜಗತ್ತಿನ ಬಹುತೇಕ ಎಲ್ಲಾ ದೇಶಗಳು ವಿಶೇಷ ಅಂಚೆಚೀಟಿಗಳನ್ನು ಹಾಗೂ ಲಕೋಟೆಗಳನ್ನು ಬಿಡುಗಡೆ

ಮಾಡಿದವು. ಅಂಚೆಚೀಟಿಗಳಲ್ಲಿ ಚಲನಚಿತ್ರ ವಿಷಯವನ್ನು ಮುದ್ರಿಸುವಲ್ಲಿ ಭಾರತ ಮುಂಚೂಣಿಯಲ್ಲಿದೆ. ಪ್ರಪಂಚದ ಅತಿದೊಡ್ಡ ಸಂಖ್ಯೆಯಲ್ಲಿ ಚಲನಚಿತ್ರಗಳನ್ನು ನಿರ್ಮಿಸುವ ರಾಷ್ಟ್ರಗಳಲ್ಲಿ ಒಂದಾದ ಭಾರತ ಭಾರತೀಯ ಚಲನಚಿತ್ರರಂಗದ ಪಿತಾಮಹ ದಾದಾಸಾಹೆಬ್ ಫಾಲ್ಕೆ ಸ್ಮರಣ ಅಂಚೆಚೀಟಿ ಮೊದಲಿಗೆ ಪ್ರಕಟಿಸಿತು.

ರಂಗಭೂಮಿ ಹಾಗೂ ಚಲಚಿತ್ರರಂಗದಲ್ಲಿ ತನ್ನದೇ ಆದ ಛಾಪು ಒತ್ತಿದ ಪೃಥ್ವಿರಾಜ್‌ಕಪೂರ್ ಅಂಚೆಚೀಟಿಯಲ್ಲಿ ಮೂಡಿಬಂದ ಇನ್ನೊಬ್ಬ ಕಲಾವಿದ.

ನೃತ್ಯಪಟುವಾದರೂ ಅನೇಕ ಚಿತ್ರಗಳಲ್ಲಿ ನಟಿಸಿ ಕೆಲಚಿತ್ರಗಳನ್ನು ನಿರ್ಮಿಸಿದ ಉದಯಶಂಕರ್, ಘಜಲ್ ರಾಣಿ ಎಂದು ಹೆಸರಾಗಿದ್ದು ಒಂದೇ ಒಂದು ಚಿತ್ರದಲ್ಲಿ ಅಭಿನಯಿಸಿದ ಬೇಗಂ ಅಖ್ತರ್ ಅವರೂ ಭಾರತೀಯ ಅಂಚೆಚೀಟಿಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಅಮರ ಗಾಯಕನೆಂದೇ ಹೆಸರಾದ ತಮ್ಮ ಅಭಿನಯದಿಂದ ಭಾರತೀಯರ ಮನ ಸೆಳೆದ ಕೆ. ಎನ್. ಸೈಗಾಲ್ ಅವರ ಗೌರವಾರ್ಥ ಅಂಚೆಚೀಟಿಯನ್ನು ಬಿಡುಗಡೆ ಮಾಡಲಾಗಿದೆ.

'ರಾಜ ಹರಿಶ್ಚಂದ್ರ' ಭಾರತದ ಮೊದಲ ವಾಕ್ಚಿತ್ರ. ಭಾರತೀಯ ಚಿತ್ರರಂಗಕ್ಕೆ ೭೫ ವರ್ಷ ತುಂಬಿದ ಸಂದರ್ಭದಲ್ಲಿ ಈ ಚಿತ್ರದ ದೃಶ್ಯವೊಂದನ್ನು ಅಳವಡಿಸಿದ ವಿಶೇಷ ಅಂಚೆಚೀಟಿ ವಿಶ್ವದಾದ್ಯಂತ ಪ್ರಖ್ಯಾತಿ ಪಡೆಯಿತು.

ಮದರ್ ಇಂಡಿಯಾದಲ್ಲಿ ಹೃದಯಸ್ಪರ್ಶಿ ಅಭಿನಯವಿತ್ತು ಭಾರತೀಯ ಭಾವೈಕ್ಯತೆಗೆ ಕುರುಹಾಗಿರುವ ನರ್ಗಿಸ್ ದತ್, ವಿಶ್ವದ ಚಿತ್ರಭೂಮಿಕೆಯಲ್ಲಿ ಭಾರತೀಯ ಚಿತ್ರಗಳಿಗೆ ಸ್ಥಾನಮಾನ ಗಳಿಸಿದಂತಹ ವಿಶೇಷ ಆಸ್ಕರ್ ಪ್ರಶಸ್ತಿ ವಿಜೇತ ಸತ್ಯಜಿತ್ ರೇ ಅವರುಗಳು ಅಂಚೆಚೀಟಿಗಳ ಮೂಲಕ ಸಿನೆಮಾ ಆಸಕ್ತರನ್ನು ಸೆಳೆದಿದ್ದಾರೆ.

ಚಲನಚಿತ್ರ ಕಲಾವಿದರಾಗಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡು ನಂತರ ರಾಜಕೀಯ ಪ್ರವೇಶಿಸಿ ತಮಿಳುನಾಡು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಎಂ.ಜಿ. ರಾಮಚಂದ್ರನ್ ಕೂಡ ಅಂಚೆಚೀಟಿಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಂಗೀತ ನಿರ್ದೇಶಕ ಹೃದಯನಾಥ ಮಂಗೇಶ್ಕರ್‌ರವರೂ ಅಂಚೆಚೀಟಿಯಲ್ಲಿ ಮೂಡಿ ಬಂದಿದ್ದಾರೆ.

ಈ ಶತಮಾನದ ಶ್ರೇಷ್ಠ ನಟರೆಂದು ವಿಶ್ವಮನ್ನಣೆ ಪಡೆದಿರುವ ಚಾರ್ಲಿಚಾಪ್ಲಿನ್ ಬಂದಿರುವ ಅಂಚೆಚೀಟಿಗಳು ಹಲವಾರು, ಅವರ ಶತಮಾನೋತ್ಸವ ಸಂದರ್ಭದಲ್ಲಿ ಭಾರತವೂ ಸ್ಮಾರಕ ಅಂಚೆಚೀಟಿಯನ್ನು ಹೊರತರುವುದರ ಮೂಲಕ ಈ ಮೇರುನಟನಿಗೆ ಗೌರವ ಸಲ್ಲಿಸಿತು.

ಚಿತ್ರರಂಗಕ್ಕೆ ೭೫ ವರ್ಷ ತುಂಬಿದಾಗ, ಶತಮಾನೋತ್ಸವ ನಡೆದಾಗ ಅಂತರರಾಷ್ಟ್ರೀಯ ಚಿತ್ರೋತ್ಸವ ಜರುಗಿದಾಗ ಅಂಚೆಇಲಾಖೆಯು ವಿಶೇಷ ಅಂಚೆಚೀಟಿಗಳನ್ನು ಹೊರತಂದು ಆಸಕ್ತರ ಗಮನ ಸೆಳೆದಿದೆ.

ಮುಂಬೈನಲ್ಲಿ ಸಿನೆಮಾ ಶತಮಾನೋತ್ಸವ ನಡೆದ ಸಂದರ್ಭದಲ್ಲಿ ಹಾಗೂ ಕಲ್ಕತ್ತಾದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಜರುಗಿದಾಗ ಸಿನೆಮಾ ಅಂಚೆಚೀಟಿಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡಲಾಗಿತ್ತಲ್ಲದೆ ವಿಶೇಷ ಅಂಚೆಲಕೋಟೆ ಹಾಗೂ ಠಸ್ಸೆಗಳನ್ನು ಆಯಾ ಸಂದರ್ಭಕ್ಕೆ ಹೊರತರಲಾಗಿತ್ತು.

ಬೆಳ್ಳಿ ಪರದೆ ಹಾಗೂ ಕಿರುತೆರೆಗಳಲ್ಲಿ ಜನರನ್ನು ರಂಜಿಸುವ ಚಲನಚಿತ್ರಗಳು ಅಂಚೆಚೀಟಿಗಳ ವೈವಿಧ್ಯಮಯ ಜಗತ್ತಿನಲ್ಲೂ ಮಹತ್ವದ ಸ್ಥಾನಗಳಿಸಿದೆ. ಅಂಚೆಚೀಟಿ ಸಂಗ್ರಹಕಾರರಿಂದ ಆಕರ್ಷಿತವಾಗಿದೆ.

★★★★

ಅಂಚೆಚೀಟಿಯಲ್ಲಿ ವಿಮಾನಯಾನ

ಸ್ವಚ್ಛಂದವಾಗಿ ಹಾರುವ ಹಕ್ಕಿಯ ಕಂಡ ಮಾನವ, ತನ್ನ ದಿನನಿತ್ಯದ ಹೋರಾಟದ ಹಾದಿಯಿಂದ ದೂರಾಗಲು ಪಕ್ಷಿಗಳಂತೆ ಹಾರಾಡುವ ಜೀವನ ಬಯಸಿದ ಮಾನವನಲ್ಲಿ ಅಂದು ಮೂಡಿದ ಈ ಆಕಾಂಕ್ಷೆ ವಾಯುಯಾನದ ಬೆಳವಣಿಗೆಗೆ ಕಾರಣವಾಯಿತು.

ತ್ರೇತಾಯುಗದಲ್ಲಿ ಸೀತಾಮಾತೆಯನ್ನು ಅಪಹರಿಸಿದ ರಾವಣಾಸುರ ಪುಷ್ಪಕ ವಿಮಾನದಲ್ಲಿ ಇರಿಸಿಕೊಂಡು ವಾಯುಮಾರ್ಗದಲ್ಲಿ ಸಂಚರಿಸುತ್ತಿದ್ದಾಗ... ಎಂಬ ಉಲ್ಲೇಖ ರಾಮಾಯಣದ ಸೀತಾಪಹರಣ ಪ್ರಕರಣದಲ್ಲಿ ಕಂಡು ಬರುವ ಭಾರತೀಯ ವಾಯುಯಾನ ಕುರಿತ ಅಪೂರ್ವ ದಾಖಲೆಗಳಲ್ಲೊಂದು. ಪೌರಾಣಿಕ ಕಥೆಯಾದರೂ, ಆ ಕಾಲದಲ್ಲೇ ನಾವು ಕಾಣಬಹುದಾದ ವೈಮಾನಿಕ ಪರಿಕಲ್ಪನೆಯ ಪ್ರತಿಬಿಂಬ ಇದಾಗಿದೆ ಎನ್ನಬಹುದು.

ಕ್ರಿ.ಪೂ. ೮೪೩ರಲ್ಲಿ ಎಲ್ಲರಲ್ಲಿ ಕುತೂಹಲ ಕೆರಳಿಸಿ ಲಂಡನ್‌ನ ಟ್ರಿನಾವಾನ್‌ಟಮ್‌ನ ಅಪೋಲೋ ದೇವಾಲಯದ ಮೇಲೆ ನಿಂತು ರೆಕ್ಕೆಗಳ ಸಿಕ್ಕಿಸಿಕೊಂಡು ಕೈಕಾಲುಗಳ ಬಡಿದು ಹಾರಲು ಯತ್ನಿಸಿ ಪ್ರಜೆಗಳ ಸಮ್ಮುಖದಲ್ಲೇ ಪ್ರಾಣ ಕಳೆದುಕೊಂಡ ಬ್ರಿಟನ್ನಿನ ೯ನೇ ದೊರೆ ಬ್ಲಾಡನ್ ಸಾಹಸ ಕೂಡ ವಾಯುಯಾನ ಇತಿಹಾಸದಲ್ಲಿ ಕಾಣಬಹುದಾದ ಅವಿಸ್ಮರಣೀಯ ದಾಖಲೆ.

ಕ್ರಿ. ಪೂ. ೪೭೦-೩೯೧ರ ಅವಧಿಯಲ್ಲಿ ಚೀನಾದಲ್ಲಿ ಮೋ ತೀ ಜು ಗಾಳಿಪಟವನ್ನು ಕಂಡುಹಿಡಿದು ಹಾರಾಟ ತಂತ್ರಕ್ಕೆ ಹೊಸ ಆಯಾಮ ನೀಡಿದ. ಕ್ರಿ. ಪೂ. ೨೦೦ರಲ್ಲಿ ಚೀನಾದ ಸೇನಾ ದಂಡನಾಯಕ ಹಾನ್ ಸಿನ್ ತನ್ನ ಹಾಗೂ ಶತ್ರುವಿನ ಪಡೆಗಳ ಅಂತರವನ್ನು ಅಳೆಯಲು ಯುದ್ಧದಲ್ಲಿ ಗಾಳಿಪಟವನ್ನು ಬಳಸಿಕೊಂಡ ನಂತರ ಯುದ್ಧ ಸಂದರ್ಭದಲ್ಲಿ ರಕ್ಷಣಾ ಸೂಚನೆಗಳನ್ನು ಹಾಗೂ ಹೋರಾಟದ ಸಂಕೇತಗಳನ್ನು ನೀಡಲು ಗಾಳಿಪಟ ಬಳಸಿರುವ ದಾಖಲೆಗಳಿವೆ.

ಕ್ರಿ.ಶ. ೧೦೪೨ರಲ್ಲಿ ಕ್ಷಿಪಣಿ ರೂಪದಲ್ಲಿ ಕ್ರಿ. ಶ. ೧೨೩೨ರಲ್ಲಿ ರಾಕೆಟ್, ಕ್ರಿ.ಶ.೧೩೨೫ರಲ್ಲಿ ಆಟಿಕೆಯ ರೂಪದಲ್ಲಿನ ಹೆಲಿಕಾಪ್ಟರ್ ಕಂಡು ಹಿಡಿಯುವಲ್ಲಿ ವಿವಿಧ ದೇಶಗಳ ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳು ವಾಯುಯಾನ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ೧೯೦೩ರಲ್ಲಿ ರೈಟ್ ಸಹೋದರರ ಪ್ರಯೋಗ

ಯಶಸ್ವಿಯಾಗಿ ವಿಮಾನಗಳ ನಿರ್ಮಾಣದಲ್ಲಿ ಕ್ರಾಂತಿಕಾರಕ ಬೆಳವಣಿಗೆಯಾಗಿದೆ.



ರೆಕ್ಕೆಗಳನ್ನು ಅಳವಡಿಸಿಕೊಂಡು ಹಾರಲು ಯತ್ನಿಸಿದ ಮಾನವ ಮೊದಲ ಸಾಹಸದ ನಂತರ ಗಾಳಿಪಟ - ಬಲೂನ್ ಗ್ಲೈಡರ್ ಹಾಗೂ ವಿಮಾನಗಳ ಅಭಿವೃದ್ಧಿಯಿಂದ ಎತ್ತರಕ್ಕೆ ಏರಿರುವ ವೈಮಾನಿಕ ತಂತ್ರಜ್ಞಾನ ಗ್ರಹಗಳ ಸುತ್ತು ಬರುವ ಉಪಗ್ರಹಗಳವರೆಗೆ ಬೆಳೆದಿದೆ.

ವಾಯುಯಾನ ಅಭಿವೃದ್ಧಿಯ ಇತಿಹಾಸ ದಾಖಲಿಸುವ ಅಂಚೆಚೀಟಿಯಲ್ಲಿ ''ವಾಯುಯಾನ'' ಕುರಿತ ಅಪರೂಪದ ಚಿತ್ರಗಳಾಗಿ ಹೊರಹೊಮ್ಮಿವೆ. ವಿಶೇಷ ವೈಮಾನಿಕ ಘಟನಾವಳಿಗಳ ಹಾಗೂ ವಿಶಿಷ್ಟ ವಿಮಾನಗಳ ಬೆಳವಣಿಗೆಗಳ ಕುರಿತು ವಿವಿಧ ದೇಶಗಳು ಅಂಚೆಚೀಟಿಗಳನ್ನು ಹೊರತಂದಿವೆ.

★★★★



4.00
भारत INDIA
5.00
5.00
भारत INDIA
2.00
1.00
















12



12



भारत
INDIA
भारत
INDIA


भारत
INDIA















AUSTRALIA


INDIA






INDIA















ПОЧТА
СССР
4






ANTIGUA



REPUBLIC OF MALDIVES



ANTIGUA

















ПОЧТА СССР







POLSKA






INDIA
3.00



INDIA
25

25

INDIA
1.00

INDIA
2.00




GANDHI AND NEHRU


25th ANNIVERSARY OF INDEPENDENCE







0.15



INDIA
5.00



60



5.00
INDIA




1.50
THE TIMES OF INDIA




INDIA
1.00
KIRLOSKAR CENTENARY



4.00
INDIA


INDIA



INDIA
60


INDIA



INDIA
25












































ಧಾರ್ಮಿಕ ಪದ್ಧತಿ



ಪರಮಹಂಸ ಯೋಗಾನಂದ



ಅಹಲ್ಯಾಬಾಯಿ ಹೋಳ್ಕರ್



ಗೊಮ್ಮಟೇಶ್ವರ



ಸೆಂ॥ ಫ್ರಾನ್ಸಿಸ್




ದಿವ್ಯಜ್ಞಾನ ಸಂಘ



ಅರುಣಗಿರಿನಾಥರು

ಪರಿಸರ ಸಂರಕ್ಷಣೆ



ಪಕ್ಷಿಗಳು







ವಿಶ್ವ ಪರಿಸರ ದಿನಾಚರಣೆ
1972



ಅರಣ್ಯವನ್ನು ಉಳಿಸಿ ಬೆಳೆಸಿ
1981

ವಿವಿಧ ವಿಷಯಗಳು



ಪರ್ವತಾರೋಹಣ




ಮಕ್ಕಳ ದಿನಾಚರಣೆ



ರಕ್ಷಣೆ

ವಿಜ್ಞಾನ



ವಿದ್ಯುತ್ ದೀಪ
1879-1979



ಸಂಪರ್ಕ





ದೂರವಾಣಿ
100 ವರ್ಷ




ಲೌಡ್‌ಸ್ಪೀಕರ್
1877-1977

ಪ್ರಾಣಿಗಳು





ಕೋತಿಗಳು






ಜಿಂಕೆಗಳು






ಹುಲಿಗಳು


ವಿವಿಧ ಸೇವಾ ಸಂಸ್ಥೆಗಳು



ಸಹಕಾರ



ರಕ್ತದಾನ



ಕುಟುಂಬ ಕಲ್ಯಾಣ



ಗರ್ಲ್ ಗೈಡ್




ಬಂಗಾರ





ಹುತಾತ್ಮರಿಗೆ ಗೌರವ

ಕ್ರೀಡೆಗಳು




ದ್ಯಾನಚಂದ್






ಏಷ್ಯನ್ ಕ್ರೀಡೆಗಳು




ಒಲಂಪಿಕ್ ಕ್ರೀಡೆಗಳು


ಕಲೆ ಮತ್ತು ಸಂಸ್ಕೃತಿ




ಮುತ್ತುಸ್ವಾಮಿ ದೀಕ್ಷಿತರು



ಜೆ. ಜೆ. ಕಲಾಶಾಲೆ




ಉದಯ ಶಂಕರ್



ವೀಣೆ

ಕೃತಿಕಾರರ ಪರಿಚಯ



ಹೆಸರು : ಶ್ರೀ ಎಂ. ಆರ್. ಪ್ರಭಾಕರ

ಹುಟ್ಟಿದ್ದು : ೬-೪-೧೯೫೧, ಮೇಲೂರು

ವಿದ್ಯಾಭ್ಯಾಸ : ಪ್ರೌಢ ಶಿಕ್ಷಣ. ಆರೋಗ್ಯ ತನಿಖಾಧಿಕಾರಿ ತರಬೇತಿ-೧೯೭೨

ಕರ್ತವ್ಯ : ಹಿಂದೂಸ್ಥಾನ ವಿಮಾನ ಕಾರ್ಖಾನೆ ಬೆಂಗಳೂರು-೧೭

ಹವ್ಯಾಸ : ಅಂಚೆ ಚೀಟಿ ಸಂಗ್ರಹಣೆ-ಅಂದವಾದ ಬರವಣಿಗೆ.

ಆಸಕ್ತಿ : ಅಂಚೆ ಚೀಟಿ ಪ್ರದರ್ಶನಗಳನ್ನು ಏರ್ಪಡಿಸುವುದು.

ಸಾಧನೆ : ೮೪೫ ಅಂಚೆ ಚೀಟಿ ಪ್ರದರ್ಶನಗಳು-ರಾಷ್ಟ್ರಾದ್ಯಂತ.

ಸಾಹಸ : ಅಖಿಲ ಭಾರತ ಪರ್ಯಟನೆ-೧೯೮೯ರಲ್ಲಿ ಸೈಕಲ್ ಮೇಲೆ
ಕರ್ನಾಟಕ ರಾಜ್ಯ ಪ್ರವಾಸ-೧೯೯೧ರಲ್ಲಿ ಸೈಕಲ್ ಮೇಲೆ
ಅಖಂಡ ಕೋಲಾರ ಜಿಲ್ಲೆ ಪಾದ ಯಾತ್ರೆ-೧೯೯೭

ವಿದೇಶ ಪ್ರವಾಸ : ಜಪಾನ್, ಥಾಯ್‌ಲ್ಯಾಂಡ್, ಸಿಂಗಪೂರ್

ಪುಸ್ತಕ ಪ್ರಕಟಣೆ : ಗ್ರಾಮಾಂತರ ಜನತೆಗಾಗಿ ಅಂಚೆ ಚೀಟಿ ಸಂಗ್ರಹಣೆ

ಪುರಸ್ಕಾರ : ಆರು ಅಂತಾರಾಷ್ಟ್ರೀಯ ಬಹುಮಾನಗಳು.

ಜೀವನದ ಧ್ಯೇಯ : ಸಾವಿರ ಪ್ರದರ್ಶನಗಳ ಗುರಿಮುಟ್ಟುವುದು.


ವಿಳಾಸ : ಶ್ರೀ ಎಂ.ಆರ್. ಪ್ರಭಾಕರ
ಅಂಚೆ ಚೀಟಿ ಸಂಗ್ರಹಕಾರರು
ಉದಯನಗರ, ಬಿ.ನಾರಾಯಣಪುರ
ಬೆಂಗಳೂರು-೫೬೦೦೧೬

ದೂರವಾಣಿ : ೦೮೦-೨೮೫೧೮೬೨೭

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೯ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮